# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಸೆಪ್ಟೆಂಬರ್ 26, 2021

ಸಂಪುಟ : 48 ಸಂಚಿಕೆ : 136 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 8 ರೂ : 4.00 www.janathavani.com janathavani@mac.com



|| ಶ್ರೀ ಜಗದ್ಗುರು ಪಂಚಾಚಾರ್ಯ: ಪ್ರಸೀದಂತು ||

ಮಾನವ ಧರ್ಮಕ್ಕೆ ಜಯವಾಗಲಿ

ಧರ್ಮದಿಂದಲೇ ವಿಶ್ವಕ್ಕೆ ಶಾಂತಿ





ಶ್ರೀ ಗುರು ರೇವಣಸಿದ್ದಯ್ಯ ಮಹಾಸ್ವಾಮಿಗಳು
(ಅಜ್ಜಯ್ಯನವರು) ಇವರ

ಪುಣ್ಯಾರಾಧನೆ ಕಾರ್ಯಕ್ರಮಕ್ಕೆ

ಆಗಮಿಸುತ್ತಿರುವ

ಶ್ರೀ ಷ|| ಬ್ರ|| ಡಾ|| ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು, ಹಿರೇಕಲ್ಮಠ, ಹೊನ್ನಾಳಿ
ಶ್ರೀ ಷ|| ಬ್ರ|| ಓಂಕಾರ ಶಿವಾಚಾರ್ಯ ಮಹಾಸ್ವಾಮಿಗಳು, ಪುರವರ್ಗ ಮಠ ಆವರಗೊಳ್ಳ
ಶ್ರೀ ಸದ್ಗುರು ಶಿವಯೋಗಿ ಶಿವಕುಮಾರ ಹಾಲಸ್ವಾಮಿಗಳು, ಬೃಹನ್ಮಠ ರಾಂಪುರ
ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು, ಹಿರೇಮಠ, ದುಗ್ಗಾವತ್ತಿ
ಶ್ರೀ ಶಿವಕುಮಾರ ಉಮಾಪತಿ ಹಾಲಸಿದ್ದೇಶ್ವರ ಗುರುಕುಲ ಬೃಹನ್ಮಠ, ಕತ್ತಲಗೆರೆ
ಸಮಸ್ತ ಗುರು ಹಿರಿಯರಿಗೆ ಗಣ್ಯರಿಗೆ ಹಾಗೂ ಸಮಸ್ತ ಭಕ್ತಾಧಿಗಳಿಗೆ

ಸರ್ವರಿಗೂ ಆದರದ ಸುಸ್ವಾಗತ

ದಿನಾಂಕ : 27-09-2021 ನೇ ಸೋಮವಾರ ಬೆಳಗ್ಗೆ 10-30 ಕ್ಕೆ
ಸ್ಥಳ : ಕಶೆಟ್ಟಿಹಳ್ಳಿ ಗ್ರಾಮ ಕ್ರೀಯಾ ಸಮಾದಿ ಹತ್ತಿರ
(ದಿ|| ಅರೇಮಲ್ಲಾಪುರದ ಶಿವಯ್ಯನವರ ಜಮೀನಿನ ಆವರಣದಲ್ಲಿ) ಕಶೆಟ್ಟಿಹಳ್ಳಿ

ಸ್ವಾಗತ ಕೋರುವವರು : ಸದ್ಭಕ್ತ ಮಂಡಳಿ


ಬಂಬೂಬಜಾರ್ ಸಿದ್ದವೀರಪ್ಪಬಡಾವಣೆ 8 ಕ್ರಾಸ್ ನಿಂದ ವಾಹನ ಸೌಲಭ್ಯ ಇರುತ್ತದೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ : 9740096302, 9972700031, 9902859492, 9008540806, 8618193883



ದಸರಾ-ದೀಪಾವಳಿ ಹಬ್ಬದ ಪ್ರಯುಕ್ತ

AP ENCLAVE
ANNAPURNESHWARI

AP ENCLAVE
Exclusive Residential Plotted Development









FOR THOSE WHO EXPECT MORE

PROJECT HIGHLIGHTS
- 24x7 bus facility
- 24x7 Water & Power supply
- Automatic LED Street Lights
- Clear Files
- Excellent Location
- Entire Layout As per Vaastu
- Excellent Water Table

AMENITIES
- Entrance Arch with Gate
- Asphalted Roads
- Kids Play Area
- Underground drainage system
- Round the clock security

- Harihar City : 05 Minutes
- Davangere City : 10 Minutes

Execellent connectivity and proximity to premier educational institutions.

Healthcare facilities and a wide range of work places.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಬಂಪರ್ ಕೊಡುಗೆ

ನಾವು ನೂತನವಾಗಿ ನಿರ್ಮಿಸಿರುವ
ಅನ್ನಪೂರ್ಣೇಶ್ವರಿ ಎನ್‌ಕ್ಲೇವ್
(A.P. Enclave)ನಲ್ಲಿ
'ಎ' ಬಡಾವಣೆ ಮತ್ತು 'ಬಿ' ಬಡಾವಣೆಗಳ
ನಿರ್ಮಾಣ ಮುಕ್ತಾಯಗೊಂಡಿದ್ದು,
ಇನ್ನು 'ಸಿ' ಮತ್ತು 'ಡಿ' ಬಡಾವಣೆಗಳ
ನಿರ್ಮಾಣ ಪ್ರಕ್ರಿಯೆ ಆರಂಭಗೊಂಡಿದೆ.
ಈ ಬಡಾವಣೆಗಳಲ್ಲಿನ ನಿವೇಶನಗಳಿಗೆ
ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಂದ
250 ಅರ್ಜಿಗಳನ್ನು ಆಹ್ವಾನಿಸಲಾಗಿದ್ದು,
ಈ ಅರ್ಜಿಗಳಲ್ಲಿ 150 ಅರ್ಜಿಗಳನ್ನು ಮಾತ್ರ
ಲಕ್ಕಿ ಡ್ರಾ ಮೂಲಕ ಆಯ್ಕೆ ಮಾಡಲಾಗುವುದು.

ಕೆಲವೇ ಅರ್ಜಿಗಳು ಮಾತ್ರ

ಮೊದಲು ಬಂದವರಿಗೆ ಆದ್ಯತೆ

ನಿವೇಶನಗಳ ಅಳತೆ : 30×50 ಅಡಿಗಳು

ನಿವೇಶನಕ್ಕೆ 250 ಅರ್ಜಿಗಳನ್ನು ಕೊಡಲಾಗುತ್ತದೆ.
ಅರ್ಜಿ ಒಂದಕ್ಕೆ ರೂ. 1050/- (ಹಿಂತಿರುಗಿಸುವ ಶುಲ್ಕ)

ಅರ್ಜಿ ವಿತರಿಸುವ ದಿನಾಂಕ : 26.09.2021ರ ಭಾನುವಾರ
ಅರ್ಜಿ ವಿತರಿಸುವ ಸಮಯ : ಬೆಳಿಗ್ಗೆ 9.30 ರಿಂದ ಸಂಜೆ 4.30ರವರೆಗೆ
ಅರ್ಜಿ ಸಿಗುವ ಸ್ಥಳ : ಎ.ಪಿ. ಎನ್‌ಕ್ಲೇವ್
ಹರಿಹರ-ದಾವಣಗೆರೆ ಸಮಾನಂತರ ರಸ್ತೆ,
ರೈಲ್ವೆ ಗೇಟ್ ಹತ್ತಿರ, ಹರಿಹರ.

(ಷರತ್ತುಗಳು ಅನ್ವಯಿಸುತ್ತವೆ)

ಹೆಚ್ಚಿನ ಮಾಹಿತಿಗಾಗಿ
ಎ.ಪಿ. ಡೆವಲಪರ್ಸ್
ಮೊ. 81235 31456, 97392 23456

# ಬಿಜೆಪಿ ಕಟ್ಟಿ ಬೆಳೆಸಿದ್ದು ಅಧಿಕಾರಕ್ಕಾಗಿ ಅಲ್ಲ, ಭಾರತವನ್ನು ಜಗತ್ತಿನ ಜಗದ್ಗುರುವನ್ನಾಗಿಸಲು

ಮಲೇಬೆನ್ನೂರು, ಸೆ.25- ಶ್ಯಾಮ್ ಪ್ರಸಾದ್ ಮುಖರ್ಜಿ ಮತ್ತು ಪಂಡಿತ್ ದೀನ ದಯಾಳ್ ಉಪಾಧ್ಯಾಯ ಅವರು ಬಿಜೆಪಿ ಕಟ್ಟಿ ಬೆಳೆಸಿದ್ದು ಅಧಿಕಾರ ಹಿಡಿಯುವುದಕ್ಕಾಗಿ ಅಲ್ಲ, ಭಾರತವನ್ನು ವಿಶ್ವದ ಜಗದ್ಗುರುವನ್ನಾಗಿ ಮಾಡಬೇಕೆಂಬ ಛಲದಿಂದ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಸಂಸದ ನಳಿನ್‌ಕುಮಾರ್ ಕಟೀಲ್ ಹೇಳಿದರು.

ಅವರು ಶನಿವಾರ ನಂದಿತಾವರೆ ಗ್ರಾಮದಲ್ಲಿ ಬೂತ್ ಅಧ್ಯಕ್ಷ ಸಿದ್ದೇಶ್ ಪಾಟೀಲ್ ಅವರ ಮನೆಗೆ ನಾಮಫಲಕ ಹಾಕಿದ ನಂತರ ಹಮ್ಮಿಕೊಂಡಿದ್ದ ಪಂಡಿತ್ ದೀನದಯಾಳ್ ಅವರ ಜನ್ಮದಿನಾಚರಣೆ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಶಾಸಕ, ಸಂಸದ, ಮಂತ್ರಿ ಆಗದ ದೀನದಯಾಳ್ ಅವರು ದೇಶಕ್ಕಾಗಿ ತಮ್ಮ ಜೀವನವನ್ನೇ ಮುಡಪಾಗಿಟ್ಟು ಸಂತನಾಗಿ ಬದುಕಿದರು.

ದೇಶಕ್ಕಾಗಿ ಪಕ್ಷ ತ್ಯಾಗ ಮಾಡಲು ಸಿದ್ದನಿರಬೇಕು. ಪಕ್ಷಕ್ಕಿಂತ ದೇಶ ಮುಖ್ಯ ಎಂಬ ಸಂದೇಶ ನೀಡಿದ ಅವರು, ಈ ನಿಟ್ಟಿನಲ್ಲಿ ಬಿಜೆಪಿ ಬೆಳೆಸಿ, ಇವತ್ತು ವಾಜಪೇಯಿ ಮತ್ತು ಮೋದಿ ಅವರಿಂದಾಗಿ ಜಗತ್ತು ಭಾರತದ ಕಡೆಗೆ ಮುಖ ಮಾಡುವಂತೆ ಮಾಡಿದ್ದಾರೆ.

ಬೂತ್ ಮಟ್ಟದಲ್ಲಿ ಕೆಲಸ ಮಾಡಿದವನು, ರಾಷ್ಟ್ರನಾಯಕನಾಗುವುದು ಬಿಜೆಪಿಯಲ್ಲಿ ಮಾತ್ರ ಎಂಬುದು ಈಗಿರುವ ಹಲವು ನಾಯಕರಿಂದ ಸಾಬೀತಾಗಿದೆ. ಬೂತ್ ಮಟ್ಟದ ಅಧ್ಯಕ್ಷರೇ ನಮ್ಮ ಶಕ್ತಿ, ಆಧಾರವಾಗಿದ್ದು, ಬಿಜೆಪಿ ಈ ಮಟ್ಟಕ್ಕೆ ಬೆಳೆದಿರುವುದು ಬೂತ್ ಮಟ್ಟದಿಂದಲೇ, ಹಾಗಾಗಿ ನಮಗೆ ಬೂತ್ ಅಧ್ಯಕ್ಷನೇ ಸುಪ್ರೀಂ ಎಂದು ನಳಿನ್‌ಕುಮಾರ್ ಕಟೀಲ್ ಹೆಮ್ಮೆಯಿಂದ ಹೇಳಿದರು.



ನಂದಿತಾವರೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ವ್ಯಾಖ್ಯಾನ

ನಂದಿತಾವರೆಗೂ - ಬಿಜೆಪಿಗೂ ಅವಿನಾಭಾವ ಸಂಬಂಧವಿದ್ದು, ಮುಂದಿನ ಚುನಾವಣೆಯಲ್ಲಿ ಈ ಗ್ರಾಮವನ್ನು ಕಾಂಗ್ರೆಸ್ ಮುಕ್ತ ಮಾಡಬೇಕೆಂದು ಕಾರ್ಯಕರ್ತರನ್ನು ಹುರಿದುಂಬಿಸಿದ ಕಟೀಲ್ ಅವರು, ನನಗೆ ಯೋಗ ಮತ್ತು ಭಾಗ್ಯ ಇದ್ದುದರಿಂದ ಪುರಾತನ ಕಾಲದ ಬಸವೇಶ್ವರ ಹಾಗೂ ಶಿವನ ಮೂರ್ತಿಯ ದರ್ಶನವನ್ನು ಪಡೆದು ಧನ್ಯನಾಗಿದ್ದೇನೆಂದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಗ್ರಾಮಸ್ಥರು ಇಟ್ಟ ಎಲ್ಲಾ ಬೇಡಿಕೆಗಳನ್ನು ಹಂತ ಹಂತವಾಗಿ ಈಡೇರಿಸುವುದಾಗಿ ಭರವಸೆ ನೀಡಿದರು.

ಬಿಜೆಪಿಗೆ ಅಧಿಕಾರ ಕೊಟ್ಟ ಜನರಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳಲಾಗುತ್ತಿದ್ದು, ಹಿಂದೆಂದೂ ಕಾಣದ ಅಭಿವೃದ್ಧಿ ದೇಶ ಮತ್ತು ರಾಜ್ಯದಲ್ಲಿ ನಡೆಯುತ್ತಿದೆ.

ರೈತರ ಖಾತೆಗೆ ವರ್ಷಕ್ಕೆ 10 ಸಾವಿರ ರೂ. ಜಮಾ ಮಾಡುವ ಮೂಲಕ ಅವರಿಗೆ ನೆರವಾಗಿದ್ದೇವೆ. 2023ಕ್ಕೆ ದೇಶದಲ್ಲಿ ಪ್ರತಿಯೊಬ್ಬರಿಗೂ ಸೂರು ಸಿಗಲಿದೆ ಎಂದ ಸಿದ್ದೇಶ್ವರ ಅವರು ಬೊಮ್ಮಾಯಿ ಹಾಗೂ ಕಟೀಲ್ ನೇತೃತ್ವದಲ್ಲಿ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ 135 ಸ್ಥಾನಗಳನ್ನು ಗೆಲ್ಲುವ ವಿಶ್ವಾಸ ವ್ಯಕ್ತಪಡಿಸಿದರು.

ಹರಿಹರ ತಾಲ್ಲೂಕು ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟ ಲಿಂಗರಾಜ್ ಅಧ್ಯಕ್ಷತೆ ವಹಿಸಿದ್ದರು, ವಿಧಾನ ಪರಿಷತ್ ಸದಸ್ಯರೂ ಆದ ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ರವಿಕುಮಾರ್, ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಜಿ.ಎಸ್. ಅನಿತ್ ಕುಮಾರ್, ಹರಿಹರ ತಾ. ಪಂ. ಮಾಜಿ ಅಧ್ಯಕ್ಷರಾದ ಶ್ರೀದೇವಿ ಮಂಜಪ್ಪ, ಐರಣಿ ಅಣ್ಣಪ್ಪ, ತಾ. ಪಂ. ಮಾಜಿ ಸದಸ್ಯ ಗುಳದಹಳ್ಳಿ ಮಾಲತೇಶ, ಭದ್ರಾ ಕಾಡಾ ಸದಸ್ಯ ಗೋವಿನಹಾಳ್ ರಾಜಣ್ಣ, ಕೆ.ಹೆಚ್. ನಾಗನಗೌಡ, ಬೆಳ್ಳೂಡಿ ಗೀತಮ್ಮ, ಆದಾಪುರದ ವೀರೇಶ್, ಭಾನುವಳ್ಳಿ ಕೊಟ್ರೇಶಪ್ಪ, ವಕೀಲ ಬಂಡೆಪ್ಪ ರೆಡ್ಡಿ, ಸಾಲಕಟ್ಟೆ ಮಹೇಶ್ವರಪ್ಪ, ಐರಣಿ ಮಹೇಶ್ವರಪ್ಪ, ಹರಳಹಳ್ಳಿ ರಂಗನಾಥ್, ಜಿ. ಬೇವಿನಹಳ್ಳಿಯ ಬಿ.ಕೆ. ಮಹೇಶ್ವರಪ್ಪ, ಗೋವಿನಹಾಳ್ ಹಾಲಸ್ವಾಮಿ, ಜಿಗಳಿಯ ಚಂದ್ರಪ್ಪ, ಹನುಮಗೌಡ, ನಂದಿತಾವರೆಯ ಬೂತ್ ಅಧ್ಯಕ್ಷ ಸಿದ್ದೇಶ್ ಪಾಟೀಲ್, ಎನ್. ಪಿ. ವಿಜಯಕುಮಾರ್, ಎಸ್.ಬಿ. ಮಠದ್, ಸುರೇಶ್, ಹರೀಶ್, ಸೇರಿದಂತೆ, ಇನ್ನೂ ಅನೇಕರು ಭಾಗವಹಿಸಿದ್ದರು.

# ಕೃಷಿಗೆ ಮಾರಕವಾದ ಕಾಯ್ದೆಗಳನ್ನು ರದ್ದುಗೊಳಿಸಲು ಒತ್ತಾಯ

ದಾವಣಗೆರೆ, ಸೆ.25- ಕಾರ್ಪೋರೇಟ್ ಪರವಾಗಿರುವ ಮೂರು ಕೃಷಿ ಕಾಯ್ದೆಗಳನ್ನು ಮತ್ತು ವಿದ್ಯುತ್ ಮಸೂದೆ-2020 ಅನ್ನು ರದ್ದುಗೊಳಿಸಿ, ಎಲ್ಲಾ ಕೃಷಿ ಉತ್ಪನ್ನಗಳಿಗೆ ಎಂಎಸ್‌ಪಿ (ಕನಿಷ್ಠ ಬೆಂಬಲ ಬೆಲೆ) ನಿಗದಿ ಮಾಡುವಂತೆ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಉಪಾಧ್ಯಕ್ಷ ತೇಜಸ್ವಿ ಪಟೇಲ್ ಒತ್ತಾಯಿಸಿದರು.

ನಗರದ ಜಯದೇವ ವೃತ್ತದ ಬಳಿ ಕೇಂದ್ರ ಸರ್ಕಾರದ ಕರಾಳ ರೈತ ವಿರೋಧಿ ಕಾಯ್ದೆಗಳನ್ನು ಹಿಮ್ಮೆಟ್ಟಿಸಲು ನಾಡಿದ್ದು ದಿನಾಂಕ 27 ರ ಭಾರತ್ ಬಂದ್ ಹಿನ್ನೆಲೆಯಲ್ಲಿ ರೈತ, ಕಾರ್ಮಿಕ ಸಂಘಟನೆಗಳು ನಡೆಸಿದ ಪ್ರಚಾರಾಂದೋಲನ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ಕೇಂದ್ರ ಸರ್ಕಾರ ದೇಶದ ಕೃಷಿಯನ್ನು ಬಂಡವಾಳಶಾಹಿ ಕಂಪನಿಗಳಿಗೆ ವಹಿಸುವ ಹುನ್ನಾರ ನಡೆಸಿದೆ ಎಂದು ಆರೋಪಿಸಿದರು.

ಕೃಷಿ ಕ್ಷೇತ್ರದ ಕರಾಳ ಮೂರು ಕಾಯಿದೆಗಳನ್ನು ಮತ್ತು ವಿದ್ಯುತ್ ಮಸೂದೆಯನ್ನು ರದ್ದುಪಡಿಸಬೇಕು. ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡುವಂತೆ ಆಗ್ರಹಿಸಿದರು.

ಸಂಯುಕ್ತ ಹೋರಾಟ ಕರ್ನಾಟಕ ಸಂಘಟನೆ ಜಿಲ್ಲಾ ಸಂಚಾಲಕ ಆವರಗೆರೆ ಹೆಚ್. ಜಿ. ಉಮೇಶ್ ಮಾತನಾಡಿ, ಕೇಂದ್ರ ಮತ್ತು ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರಗಳು ಬೃಹತ್ ಉದ್ದಿಮೆದಾರರ ಏಜೆಂಟರಂತೆ ಕೆಲಸ ಮಾಡುತ್ತಿದೆ. ಅಲ್ಲದೆ




## ನಗರದ ವಿವಿಧ ವೃತ್ತಗಳಲ್ಲಿ ಪ್ರಚಾರಾಂದೋಲನ ಸಭೆ

ಸರ್ಕಾರಿ ಸ್ವಾಮ್ಯದ ಆಸ್ತಿಗಳನ್ನು ಖಾಸಗೀಕರಣ ಮಾಡುವ ಹುನ್ನಾರ ನಡೆಸಿವೆ ಎಂದು ದೂರಿದರು.

ಬಿಜೆಪಿ ಆಡಳಿತ ನಡೆಸುತ್ತಿರುವ ರಾಜ್ಯಗಳಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ. ಕೃಷಿಕರಿಗೆ, ಕಾರ್ಮಿಕರಿಗೆ ಮತ್ತು ಜನಸಾಮಾನ್ಯರಿಗೆ ವಿರೋಧವಾದ ಕಾಯ್ದೆಗಳನ್ನು ಜಾರಿಗೆ ತರುವ ಮೂಲಕ ಜನ ವಿರೋಧಿ ನೀತಿ ಅನುಸರಿಸುತ್ತಿವೆ ಎಂದು ಕಿಡಿ

## ನಾಳಿನ ಭಾರತ್ ಬಂದ್ ಯಶಸ್ವಿಗೆ ಕರೆ

ಕಾರಿದರು.

ಈ ನಿಟ್ಟಿನಲ್ಲಿ ಭಾರತ್ ಬಂದ್ ಯಶಸ್ವಿಗೊಳಿಸಬೇಕಾದ ಅಗತ್ಯವಿದೆ. ಆದ್ದರಿಂದ ಎಲ್ಲಾ ವರ್ಗದ ಉದ್ದಿಮೆದಾರರು, ವರ್ತಕರು ತಮ್ಮ ವಹಿವಾಟು ಸ್ಥಗಿತಗೊಳಿಸಿ ಸ್ವಯಂಪ್ರೇರಿತರಾಗಿ ಬಂದ ಮಾಡಿ ಸಹಕರಿಸುವಂತೆ ಮನವಿ ಮಾಡಿದರು.

ಎಐಟಿಯುಸಿ ಜಿಲ್ಲಾಧ್ಯಕ್ಷ ರಾಘವೇಂದ್ರ ನಾಯರಿ ಮಾತನಾಡಿ, ಕರಾಳ ಕಾಯಿದೆಗಳ ರದ್ದತಿಗೆ ಆಗ್ರಹಿಸಿ, ದೆಹಲಿಯಲ್ಲಿ ನಡೆಸುತ್ತಿರುವ ಚಳವಳಿಗೆ ಒಂದು ವರ್ಷ ಆಗುತ್ತಾ ಬಂದಿದೆ. ಆದರೂ ಕೇಂದ್ರ ಸರ್ಕಾರ ಚಳವಳಿಗೆ ಸ್ಪಂದಿಸದಿರುವುದನ್ನು ಖಂಡಿಸಿದರು.

ಸಭೆಯಲ್ಲಿ ವಿವಿಧ ಸಂಘಟನೆಗಳ ಮುಖಂಡರಾದ ಆವರಗೆರೆ ಚಂದ್ರು, ಆವರಗೆರೆ ವಾಸು, ಬಲ್ಲೂರು ರವಿಕುಮಾರ್, ಐರಣಿ ಚಂದ್ರು, ಮಲ್ಲಶೆಟ್ಟಿಹಳ್ಳಿ ಮಲ್ಲೇಶಪ್ಪ, ಮೌಲನಾಯ್ಕ, ಕರಿಬಸಪ್ಪ, ಜಬಿನಾಖಾನಂ, ಮಧು ತೊಗಲೇರಿ, ಮಂಜುನಾಥ ಕುಕ್ಕುವಾಡ, ಭಾರತಿ, ನಾಗಜ್ಯೋತಿ, ಆನಂದರಾಜ್, ಇ. ಶ್ರೀನಿವಾಸ, ಆವರಗೆರೆ ರಂಗನಾಥ್ ಮತ್ತಿತರರು ಭಾಗವಹಿಸಿದ್ದರು.

## ರಾಣೇಬೆನ್ನೂರಿನಲ್ಲಿಂದು ಮಲ್ಲಿಕಾರ್ಜುನ ಮಳಲಿ ನೆನಪು

ಜಿಲ್ಲಾ ಕನ್ನಡ ಗೆಳೆಯರ ಬಳಗ ಹಾವೇರಿ ವತಿಯಿಂದ 'ಆಧುನಿಕ ವಚನಕಾರ ಶ್ರೀ ಮಲ್ಲಿಕಾರ್ಜುನ ಮಳಲಿಯವರ ನೆನಪು' ಕಾರ್ಯಕ್ರಮವನ್ನು ಇಂದು ಸಂಜೆ 5 ಗಂಟೆಗೆ ರಾಣೇಬೆನ್ನೂರು ಲಯನ್ಸ್ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಹಿರಿಯ ಸಾಹಿತಿ ಎಮ್.ಬಿ. ಹುಲಗಣ್ಣನವರ ಅಧ್ಯಕ್ಷತೆ ವಹಿಸಲಿದ್ದು, ಲಯನ್ ಎಮ್.ಎಸ್. ಅರಕೇರಿ ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ವಕೀಲ ಎಮ್.ಬಿ. ನಾಯಕ್, ನಿವೃತ್ತ ಪ್ರಾಚಾರ್ಯ ಎಂ.ಎಂ ಖನ್ನೂರ, ಪುಷ್ಪಾ ಬಾದಾಮಿ, ಪ್ರೊ ಎನ್.ಕೆ. ರಾಮಚಂದ್ರಪ್ಪ, ರತ್ನಾ ಪುನಿತ್, ಆರ್.ಎಸ್. ನಂದಿಹಳ್ಳಿ, ಮಾಲತೇಶ ಚಲವಾದಿ ಭಾಗವಹಿಸುವರು. ಹಾವೇರಿ ಜಿಲ್ಲಾ ಕಸಾಪ ಪೂರ್ವಾಧ್ಯಕ್ಷ ರಾದ ಕೆ.ಎಚ್. ಮುಕ್ಕಣ್ಣನವರ, ಜಿ.ಬಿ ಮಾಸಣಗಿ, ಪ್ರೊ. ಸದಾಶಿವ, ರಾಣೇಬೆನ್ನೂರು ತಾಲ್ಲೂಕು ಕಸಾಪ ಪೂರ್ವಾಧ್ಯಕ್ಷ ಹುಲ್ಲತ್ತಿ ನುಡಿ ನಮನ ಸಲ್ಲಿಸುವರು.

## ಛಲವಾದಿ : ಇಂದು ಸಭೆ

ಛಲವಾದಿ ಸಮುದಾಯ ಭವನದಲ್ಲಿ ಸದಸ್ಯತ್ವ ನೋಂದಣಿ ಆಂದೋಲನ ಕುರಿತಾದ ಸಭೆಯನ್ನು ಇಂದು ಬೆಳಿಗ್ಗೆ 10.30 ಕ್ಕೆ ಸಂಘದ ನಗರ ಘಟಕದ ಅಧ್ಯಕ್ಷ ಮಟ್ಟೂರು ಹನುಮಂತಪ್ಪ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ ಎಂದು ಕಾರ್ಯದರ್ಶಿ ಎಸ್. ಆನಂದಪ್ಪ ತಿಳಿಸಿದ್ದಾರೆ.

## ವಿಶ್ವ ಸಂಸ್ಥೆಯು ಬದಲಾಗಬೇಕು

ವಿಶ್ವ ಸಂಸ್ಥೆಯು ಎಲ್ಲಿದೆ?
ವಿಶ್ವ ಸಂಸ್ಥೆಯ ಸ್ಥಿತಿ ಬದಲಾಗಬೇಕು
ಕಣ್ಣಿದ್ದು ಕುರುಡು ತನದ ನ್ಯಾಯ
ಸಮ್ಮತ ವಿಶ್ವ ಸಂಸ್ಥೆಯ ಸತ್ಯ ಮೌಲ್ಯತೆ ಎಲ್ಲಿ??

ಶತ ಸಹಸ್ರ ಸಂಘರ್ಷಗಳು
ಹಲವು ಘನಘೋರ ಘಟನೆಗಳು
ಹಲವು ಯುದ್ಧೋನ್ಮಾದಗಳು ಅಕ್ರಮಗಳಾಗಿವೆ
ವಿಶ್ವದೆಲ್ಲೆಡೆ ವಿಚಿತ್ರ ಭಂಡತನದ ಉಗ್ರತನವಾಗಿದೆ !!

ಒಂದನೇ ಯುದ್ಧ ಕಾಲಘಟ್ಟವು
ಎರಡನೇ ಯುದ್ಧ ಕಾಲ ಸಂಘರ್ಷಗಳು
ವಿಶ್ವ ದೇಶಗಳು ವ್ಯತಿರಿಕ್ತ ಪೈಪೋಟಿಯಲ್ಲಿ
ವಿಶ್ವ ಸಂಸ್ಥೆಯು ಮೂಕ ಪ್ರೇಕ್ಷಕ ಸ್ಥಿತಿಯಲ್ಲಿದೆ !!

ಉಗ್ರಗಾಮಿಗಳಿಗಿಂತ ನೀಚತನ
ಪ್ರದರ್ಶಿಸಿದ ಚೀನಾ ಪ್ರಕ್ಷುಬ್ದತೆಯ
ವಾತಾವರಣ ಕಪಟ ಮೋಸ ನರಿ ಬುದ್ಧಿಯ
ಕೊರೊನಾ ವೈರಸ್‌ನಿಂದ ಇಡೀ ವಿಶ್ವವೇ ತಲ್ಲಣವಾಗಿದೆ !!

ಯಾರು ಇವರಿಗೆ ಕೊಟ್ಟ ಅಧಿಕಾರ
ಜೈವಿಕ ವಿಷ ಯುದ್ಧದಿಂದ ವೈರಸ್ ಬಿಟ್ಟು
ತಮ್ಮ ಮುಖದ ನರಿಯಂತಹ ಕಣ್ಣಂಚಿನ
ಕಪಟ ಮೋಸದ ಜ್ವಾಲೆಯು ಬೆಂಕಿಯುಂಡೆಯಾಗಿದೆ !!

ಕಾಲ ಸನ್ನಿತವಾಗಿದೆ 130 ಕೋಟಿ ಪ್ರಜೆಗಳ
ಅಂತಃಶಕ್ತಿಯ ಕೊಡುಗೆ ಭಾರತದ ದಿವ್ಯ ಔಷಧಿಯನ್ನು
ಇಡೀ ವಿಶ್ವವೇ ಕಾಯುತ್ತಿದೆ. ನಮ್ಮ ಶಕ್ತಿಯು
ವಿಶ್ವಕ್ಕೆ ಭಾರತ ಜಗದ್ಗುರುವಾಗುವ ಕಾಲ ಸನ್ನಿತವಾಗಿದೆ !!

'ಭಾರತವೇ ವಿಶ್ವ ಗುರು'

- ಟಿ.ಜಿ.ಸಂಗಮ್
ಗಣಿತ ಶಿಕ್ಷಕರು, ಕೊಟ್ಟೂರು
ಮೊಬೈಲ್ :7349218657

## ನಗರದಲ್ಲಿ ಇಂದು ನಿವೃತ್ತ ಪೊಲೀಸ್ ಅಧಿಕಾರಿಗಳ ಭವನ ಉದ್ಘಾಟನೆ

ಜಿಲ್ಲಾ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ನಿವೃತ್ತ ಪೊಲೀಸ್ ಅಧಿಕಾರಿಗಳ ಭವನದ ಉದ್ಘಾಟನಾ ಸಮಾರಂಭವು ನಡೆಯಲಿದೆ.

ನಿವೃತ್ತ ಡೈರಕ್ಟರ್ ಜನರಲ್ ಮತ್ತು ಪೊಲೀಸ್ ಮಹಾ ನಿರೀಕ್ಷಕ ಡಾ. ಶಂಕರ ಮಹಾದೇವ ಬಿದರಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಂಸದ ಜಿ.ಎಂ. ಸಿದ್ದೇಶ್ವರ್, ರಾಜ್ಯಸಭಾ ಸದಸ್ಯ ಕೆ.ಸಿ. ರಾಮಮೂರ್ತಿ, ರಾಜ್ಯಸಭಾ ಮಾಜಿ ಸದಸ್ಯ ಡಿ. ಕುಪೇಂದ್ರರೆಡ್ಡಿ, ಶಾಸಕರಾದ ಶಾಮನೂರು ಶಿವಶಂಕರಪ್ಪ, ಎಸ್.ಎ. ರವೀಂದ್ರನಾಥ್, ಎಸ್.ವಿ. ರಾಮಚಂದ್ರ, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮತ್ತಿತರರು ಮುಖ್ಯಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಐಜಿಪಿ ಎಸ್. ರವಿ, ಮಹಾಂತೇಶ್ ಬೀಳಗಿ, ಸಿ.ಬಿ. ರಿಷ್ಯಂತ್, ಎನ್. ನಾಗರಾಜ್, ಎಂ.ಎ. ಅಪ್ಪಯ್ಯ, ಕುಮಾರ್ ಎಸ್. ಕರ್ನಿಂಗ್, ಜಿ.ಕೆ. ಬಸವರಾಜಪ್ಪ, ಡಾ. ಭೀಮಾಶಂಕರ್ ಎಸ್. ಗುಳೇದ್, ಹನುಮಂತರಾಯ ಅವರುಗಳು ವಿಶೇಷ ಆಹ್ವಾನಿತರುಗಳಾಗಿದ್ದಾರೆ.

## ನಗರದಲ್ಲಿ ಇಂದು ನಾಟಕ ಪ್ರದರ್ಶನ

ಡಿ.ಜಿ. ಪುಟ್ಟರಾಜು ಗೆಳೆಯರ ಬಳಗ, ದಾವಣಗೆರೆ ರಂಗ ಅನಿಕೇತನ ಕಲಾ ತಂಡ ಇವರುಗಳ ಸಂಯುಕ್ತಾಶ್ರಯದಲ್ಲಿ ದೊಗ್ಗಳ್ಳಿ ಗೌಡ್ರು ಪುಟ್ಟರಾಜು ಅವರ ಪ್ರಥಮ ವರ್ಷದ ಪುಣ್ಯ ಸ್ಮರಣೆ, 'ಬರಿಗೈ ಬದುಕು' ಕವನ ಸಂಕಲನ ಬಿಡುಗಡೆ ಹಾಗೂ 'ಭಾರತಾಂಬೆ' ನಾಟಕ ಪ್ರದರ್ಶನವನ್ನು ಇಂದು ಸಂಜೆ 5 ಗಂಟೆಗೆ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಶಾಲಾ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಸಾನ್ನಿಧ್ಯವನ್ನು ಶ್ರೀ ಬಸವಪ್ರಭು ಸ್ವಾಮೀಜಿ ವಹಿಸುವರು. ಶಂಕರ್ ಹಲಗತ್ತಿ ಕವನ ಸಂಕಲನ ಬಿಡುಗಡೆಗೊಳಿಸುವರು. ಡಾ. ಹೆಚ್. ವಿಶ್ವನಾಥ್, ಡಾ. ಎ.ಬಿ. ರಾಮಚಂದ್ರಪ್ಪ, ದಾದಾಪೀರ್ ನವಿಲೇಹಾಳ್, ಶ್ರೀಮತಿ ಜಸ್ಟಿನ್ ಡಿಸೋಜಾ, ರಘು ಶಿಕಾರಿ ಉಪಸ್ಥಿತರಿರುವರು. ಶ್ರೀಮತಿ ಪ್ರತಿಭಾ ಪಿ. ದೊಗ್ಗಳ್ಳಿ ಅಧ್ಯಕ್ಷತೆ ವಹಿಸುವರು.

## ನಗರದಲ್ಲಿ ಇಂದು ಗೌಡ ಸಾರಸ್ವತ ಸಮಾಜದ ಸಭೆ


ಗೌಡ ಸಾರಸ್ವತ ಸಮಾಜದ ಸರ್ವ ಸದಸ್ಯರ ಮಹಾಸಭೆಯನ್ನು ಇಂದು ಸಂಜೆ 6 ಗಂಟೆಗೆ ಶ್ರೀ ಸುಕೃತೀಂದ್ರ ಕಲಾ ಮಂದಿರದಲ್ಲಿ ಕರೆಯಲಾಗಿದೆ ಎಂದು ಸಮಾಜದ ಕಾರ್ಯದರ್ಶಿ ಕೆ. ವೆಂಕಟರಮಣ ಭಟ್ ತಿಳಿಸಿದ್ದಾರೆ.


|| ಶ್ರೀ ಕೋಗುಂಡಿ ಬಸವೇಶ್ವರ ಪ್ರಸನ್ನ || ಶಿವ || ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ||




ಕೈಲಾಸ ಶಿವಗಣಾರಾಧನೆ ಆಹ್ವಾನ

ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ಶಾಮನೂರು ಗ್ರಾಮದ ವಾಸಿ
ಶ್ರೀಮತಿ ಶಾಂತಮ್ಮ ಪರಮೇಶ್ವರಪ್ಪ ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ಶರಣ ಬಂಧುಗಳೇ, ದಿನಾಂಕ 18.09.2021ನೇ ಶನಿವಾರ ರಾತ್ರಿ 9 ಗಂಟೆಗೆ ನನ್ನ ಪೂಜ್ಯ ಪತಿಯವರಾದ



ಜನನ : 06-06-1952
ಲಿಂಗೈಕ್ಯ : 18-09-2021

ಶ್ರೀ ಗುರಾಳರ ಪರಮೇಶ್ವರಪ್ಪನವರು


ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ 26.09.2021ನೇ ಭಾನುವಾರ ಬೆಳಿಗ್ಗೆ 10.30 ಗಂಟೆಗೆ
ಶ್ರೀ ಆಂಜನೇಯ ಸ್ವಾಮಿ ಕಲ್ಯಾಣ ಮಂಟಪ, ಶಾಮನೂರು
ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ✦ ಶ್ರೀಮತಿ ಶಾಂತಮ್ಮ ಪರಮೇಶ್ವರಪ್ಪ ಮತ್ತು ಮಕ್ಕಳು
✦ ಶ್ರೀಮತಿ ಮಧುರ ಮತ್ತು ಶ್ರೀ ಜಿ.ಪಿ. ಕವಿ ಹಾಗೂ ಮಕ್ಕಳು
✦ ಶ್ರೀಮತಿ ಶ್ವೇತ ಮತ್ತು ಶ್ರೀ ಚಿದಾನಂದ (ರವಿ) ಹಾಗೂ ಮಕ್ಕಳು
✦ ಶ್ರೀಮತಿ ಸುಮ ಮತ್ತು ಶ್ರೀ ಮಲ್ಲಿಕಾರ್ಜುನ್ ಹಾಗೂ ಮಕ್ಕಳು
✦ ಶ್ರೀಮತಿ ವೀಣಾ ಮತ್ತು ಶ್ರೀ ವಿಜಯಕುಮಾರ್ ಹಾಗೂ ಮಕ್ಕಳು
✦ ಮೃತರ ಸಹೋದರರು, ಮೊಮ್ಮಕ್ಕಳು, ಅಳಿಯಂದಿರು
✦ ಗುರಾಳರ ವಂಶಸ್ಥರು, ಶಾಮನೂರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು
ಚಿದು ಆಪ್ಟಿಕಲ್ಸ್, ಪಿ.ಜೆ. ಬಡಾವಣೆ, ದಾವಣಗೆರೆ. ಮೊ: 99644 66984, 83102 40764

ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


## 'ವಿಧಿ ಬಲಿ' ಪೋಸ್ಟರ್ ಬಿಡುಗಡೆಗೊಳಿಸಿದ ರಾಮುಲು

ಹೂವಿನಹಡಗಲಿ, ಸೆ.25- ಸ್ಥಳೀಯ ಯುವ ಚಲನಚಿತ್ರ ಕಲಾವಿದ ಎಸ್.ಎನ್. ಕ್ರಾಂತಿ ನಾಯಕ ನಟನಾಗಿ ಅಭಿನಯಿಸಿರುವ 'ವಿಧಿ ಬಲಿ' ಕಿರುಚಿತ್ರದ ಪೋಸ್ಟರ್ ಅನ್ನು ಸಾರಿಗೆ ಸಚಿವ ಬಿ. ಶ್ರೀರಾಮುಲು ಬೆಂಗಳೂರಿನಲ್ಲಿ ಬಿಡುಗಡೆಗೊಳಿಸಿದರು.



ಈಗಾಗಲೇ ಹಡಗಲಿ ಭಾಗದಲ್ಲಿ ಚಿತ್ರೀಕರಣ ಮುಗಿದಿದ್ದು, ಎಡಿಟಿಂಗ್, ಡಬ್ಬಿಂಗ್ ಕಾರ್ಯ ಪ್ರಗತಿಯಲ್ಲಿದೆ. ದಸರಾಗೆ ಚಿತ್ರದ ಟೀಸರ್ ಬಿಡುಗಡೆಯಾಗಿ, ದೀಪಾವಳಿಗೆ ಚಿತ್ರ ಬಿಡುಗಡೆಯಾಗಲಿದೆ ಎಂದು ನಿರ್ದೇಶಕ ಸಂದೀಪ (ಸ್ಯಾಂಡಿ) ಸಚಿವರಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ವಿಧಿ ಬಲಿ ಚಿತ್ರ ತಂಡದ ನಾಯಕ ನಟ ಎಸ್.ಎನ್. ಕ್ರಾಂತಿ, ಸಹನಟರು ಪಾಲ್ಗೊಂಡಿದ್ದರು. ತದ ನಂತರ ಸಚಿವ ಶ್ರೀರಾಮುಲು ಸಿಹಿ ವಿತರಿಸಿ, ಚಿತ್ರ ಯಶಸ್ವಿಯಾಗಿ ಮೂಡಿ ಬರಲಿ ಎಂದು ಶುಭ ಹಾರೈಸಿದರು.

## ನಲ್ಕುಂದ : ಇಂದು ಹೃದಯ ರೋಗ, ಕ್ಯಾನ್ಸರ್ ತಪಾಸಣಾ ಶಿಬಿರ

ಶ್ರೀ ಆಂಜನೇಯ ಸ್ವಾಮಿ ಸೇವಾ ಸಮಿತಿ, ಸಪ್ತಗಿರಿ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹೃದಯರೋಗ, ನರರೋಗ, ಮೂತ್ರಪಿಂಡದ ಕಲ್ಲು, ಕ್ಯಾನ್ಸರ್ ತಪಾಸಣಾ ಶಿಬಿರ ನಡೆಯಲಿದೆ. ಉದ್ಘಾಟನೆ : ಜಿ.ಎಂ. ಸಿದ್ದೇಶ್ವರ. ಅಧ್ಯಕ್ಷತೆ : ಕೆ. ರಂಗಸ್ವಾಮಿ. ಅತಿಥಿಗಳು : ಎಸ್.ಎ. ರವೀಂದ್ರನಾಥ್, ಪ್ರೊ.ಎನ್. ಲಿಂಗಣ್ಣ, ಅಣಬೇರು ಜೀವನಮೂರ್ತಿ, ಡಾ. ಟಿ. ರುದ್ರಪ್ಪ, ಡಾ. ಕಿರಣ್ ಕೆ. ಗಂಗೂರ್, ಓ.ಎಸ್. ದಯಾನಂದ್, ಯು.ಎಸ್.ಮಮತಾ ಮಹಾದೇವಪ್ಪ, ಪ್ಯಾಟಿ ಹನುಮಪ್ಪ, ಯು.ಆರ್. ಸಾವಿತ್ರಮ್ಮ ಕರಿಬಸಪ್ಪ, ಕೆ. ಓಂಕಾರಪ್ಪ, ಚನ್ನಮ್ಮ ದೇವೇಂದ್ರಪ್ಪ, ಎ.ಕೆ. ಶಿವಲಿಂಗಪ್ಪ ಮತ್ತಿತರರು ಭಾಗವಹಿಸಲಿದ್ದಾರೆ.

## ಹರಿಹರ ತಾಲ್ಲೂಕು ಜೆಡಿಎಸ್ ಅಧ್ಯಕ್ಷರಾಗಿ ಹಳ್ಳಿಹಾಳ್ ಪರಮೇಶ್ವರಪ್ಪ




ಮಲೇಬೆನ್ನೂರು ಸೆ.25- ಹಳ್ಳಿಹಾಳ್ ಗ್ರಾಮದ ಹೆಚ್.ಟಿ. ಪರಮೇಶ್ವರಪ್ಪ ಅವರನ್ನು ಹರಿಹರ ತಾಲ್ಲೂಕು ಗ್ರಾಮಾಂತರ ಜೆಡಿಎಸ್ ಅಧ್ಯಕ್ಷರನ್ನಾಗಿ ನೇಮಕ ಮಾಡಿ, ಪಕ್ಷದ ರಾಜ್ಯಾಧ್ಯಕ್ಷ ಹೆಚ್.ಕೆ. ಕುಮಾರಸ್ವಾಮಿ ಆದೇಶ ಹೊರಡಿಸಿದ್ದಾರೆ.

ಜೆಡಿಎಸ್ ಜಿಲ್ಲಾಧ್ಯಕ್ಷ ಬಿ. ಚಿದಾನಂದಪ್ಪ, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಸಮ್ಮುಖದಲ್ಲಿ ಪರಮೇಶ್ವರಪ್ಪ ಅವರಿಗೆ ನೇಮಕಾತಿ ಆದೇಶ ಪತ್ರವನ್ನು ನೀಡಿ, ಅಭಿನಂದಿಸಿದರು.

ಜಿ. ಬೇವಿನಹಳ್ಳಿಯ ಬಂಡೇರ ತಿಮ್ಮಣ್ಣ ಅವರು 2007 ರಿಂದ ಇಲ್ಲಿಯವರೆಗೆ ಸತತ 14 ವರ್ಷಗಳ ಕಾಲ ಹರಿಹರ ತಾಲ್ಲೂಕು ಗ್ರಾಮಾಂತರ ಜೆಡಿಎಸ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದನ್ನು ಇಲ್ಲಿ ಸ್ಮರಿಸಬಹುದು.


ಪ್ರಥಮ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀಮತಿ ಸುವರ್ಣಮ್ಮ ಮಹೇಶ್ವರಪ್ಪನವರು
ನಿಧನ : 26.09.2020

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ಸದಾ ನಿಮ್ಮ ಸ್ಮರಣೆಯಲ್ಲಿರುವ...

ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು,
ಮರಿಮೊಮ್ಮಕ್ಕಳು ಮತ್ತು ಕುರ್ಕಿ ಗೌಡ್ರ ವಂಶಸ್ಥರು
ಹಾಗೂ ಗ್ರಾಮಸ್ಥರು, ಕುರ್ಕಿ.


## ಹೊನ್ನಾಳಿ : 29ರಂದು ತಮಟೆ ಚಳುವಳಿ

ಹೊನ್ನಾಳಿ, ಸೆ.25- ಇದೇ ದಿನಾಂಕ 29 ಭಾನುವಾರ ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಯಥಾವತ್ತಾಗಿ ಜಾರಿ ಮಾಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ರಾಜ್ಯ ಸರ್ಕಾರಕ್ಕೆ ಆಗ್ರಹಿಸಿ ಹೊನ್ನಾಳಿ ನಗರದಲ್ಲಿ ಬೃಹತ್ ತಮಟೆ ಚಳುವಳಿ ಹಮ್ಮಿಕೊಳ್ಳಲಾಗಿದೆ ಎಂದು ಮಾದಿಗ ದಂಡೋರ ಸಮಿತಿ ತಾಲ್ಲೂಕು ಅಧ್ಯಕ್ಷ ದಿಡಗೂರು ತಮ್ಮಣ್ಣ ಹೇಳಿದರು.

ಸುದ್ದಿಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿ, ಸುಮಾರು ನೂರಕ್ಕೂ ಹೆಚ್ಚು ತಮಟೆಗಳನ್ನು ಭಾರಿಸುವ ಮೂಲಕ ಪ್ರತಿಭಟನಾಕಾರರು ದೇವನಾಯಕನಹಳ್ಳಿಯ ಕನಕದಾಸ ವೃತ್ತದಿಂದ ಬೆಳಿಗ್ಗೆ 10 ಗಂಟೆಗೆ ಮೆರವಣಿಗೆ ಹೊರಟು ತಹಶೀಲ್ದಾರರಿಗೆ ಮನವಿ ಪತ್ರ ಸಲ್ಲಿಸಲಿದ್ದಾರೆ ಎಂದರು.

ಸದಾಶಿವ ಆಯೋಗದ ವರದಿಯನ್ನು ಕೆಲವು ಸ್ಪೃಶ್ಯ ಜಾತಿಗಳ ಮುಖಂಡರು ಜಾರಿಯಾಗದಂತೆ ಸರ್ಕಾರದ ಮೇಲೆ ಒತ್ತಡ ಹಾಕುತ್ತಿದ್ದಾರೆ. ಒಂದು ವೇಳೆ ಈ ವರದಿ ಜಾರಿಯಾಗದಿದ್ದರೆ, ಮಾದಿಗ ಮತ್ತು ಮಾದಿಗ ಸಮುದಾಯದ ಉಪಜಾತಿಗಳಿಗೆ ಮೀಸಲಾತಿ ಸಿಗುವುದಿಲ್ಲ. ಇದು ಮಾದಿಗ ಜಾತಿಯ ಅಳಿವು, ಉಳಿವಿನ ಪ್ರಶ್ನೆಯಾಗಿದೆ. ಕೇಂದ್ರ ಮಂತ್ರಿ ಎ. ನಾರಾಯಣಸ್ವಾಮಿಯವರು ಕೇಂದ್ರ ಸಚಿವರಾಗಿ ಈ ವರದಿ ಜಾರಿ ಮಾಡಲು ಬದ್ಧರಾಗಿದ್ದೇವೆ ಎಂದು ಹೇಳಿಕೆ ಕೊಟ್ಟ ನಂತರ ಈ ಬೆಳವಣಿಗೆಯಾಗಿದೆ ಎಂದರು.

ಮೊದಲು ರಾಜ್ಯ ಸರ್ಕಾರ ಈ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು ಎಂದು ಅವರು ಆಗ್ರಹಿಸಿದರು.

ಈ ಚಳುವಳಿಗೆ ರಾಜ್ಯ ಮುಖಂಡರು, ಜಿಲ್ಲಾ ಮುಖಂಡರು ಹಾಗೂ ಚಿಟ್ರನಟ ನರೇಶ್ ಆಗಮಿಸಲಿದ್ದಾರೆ. ಕ್ರಾಂತಿಕಾರಿ ಹಾಡುಗಾರರಾದ ಅಂಬಣ್ಣ ಆರೋಲಿಕರ್, ಕೋಟೆ ಮುನಿರಾಜು, ನಮ್ಮ ಅವಳಿ ತಾಲ್ಲೂಕಿನ ಕಲಾತಂಡಗಳು ಭಾಗವಹಿಸಲಿವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹನುಮಂತಪ್ಪ ಸೊರಟೂರು, ಹರೀಶ್ ನ್ಯಾಮತಿ, ಮಂಜಪ್ಪ ಕೆಂಚಿಕೊಪ್ಪ, ಶಿವಕುಮಾರ್ ನ್ಯಾಮತಿ, ಮಾಲತೇಶ್ ಕಮ್ಮಾರಗಟ್ಟೆ, ಕುಮಾರ್ ಜೋಗ, ನರಸಿಂಹಪ್ಪ ಗೋವಿನಕೋವಿ, ಮಹೇಶ್ ದೊಡ್ಡೇರಹಳ್ಳಿ ಉಪಸ್ಥಿತರಿದ್ದರು.

# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಸೆಪ್ಟೆಂಬರ್ 26, 2021






## ಹಿಂದೂ ಮಹಾ ಗಣಪತಿ ಸಂಭ್ರಮದ ವಿಸರ್ಜನೆ

### ರಾಜಕೀಯ ಮುಖಂಡರಿಂದ ದರ್ಶನ, ಮುಗಿಲು ಮುಟ್ಟಿದ ಡೊಳ್ಳಿನ ಸದ್ದಿಗೆ ಯುವ ಪಡೆ ನೃತ್ಯ

ದಾವಣಗೆರೆ, ಸೆ.25- ನಗರದ ಹೈಸ್ಕೂಲ್ ಮೈದಾನದಲ್ಲಿ ಪ್ರತಿಷ್ಠಾಪಿಸಲಾಗಿದ್ದ ಹಿಂದೂ ಮಹಾ ಗಣಪತಿಯನ್ನು ಶನಿವಾರ ಭರ್ಜರಿ ಯುವ ಸಮೂಹದೊಂದಿಗೆ ಸಂಭ್ರಮದಿಂದ ವಿಸರ್ಜಿಸಲಾಯಿತು.

ಮಧ್ಯಾಹ್ನ 2.15ರ ವೇಳೆಗೆ ವಿನಾಯಕ ಮೂರ್ತಿಗೆ ಪೂಜೆ ಸಲ್ಲಿಸಿ, ಬೃಹತ್ ಗಾತ್ರದ ಹೂವಿನ ಹಾರ ಹಾಗೂ ಹಿಂಬದಿಯಲ್ಲಿ ನಾನಾ ಬಗೆಯ ಹೂಗಳಿಂದ ಅಲಂಕೃತವಾದ ಟ್ರ್ಯಾಕ್ಟರ್‌ನಲ್ಲಿ ಕೂರಿಸಲಾಯಿತು.

ಹಿಂದೂ ಮಹಾ ಗಣಪತಿ ಸಂಘಟನೆಯ ಸಂಸ್ಥಾಪಕ ಅಧ್ಯಕ್ಷ ಜೊಳ್ಳಿ ಗುರು, ಪಾಲಿಕೆ ಮಾಜಿ ಸದಸ್ಯ ಶಿವಗಂಗಾ ಬಸವರಾಜ್ ಅವರು ಗಣಪತಿ ಮೂರ್ತಿಗೆ ಪುಷ್ಪಾರ್ಚನೆ ನೆರವೇರಿಸಿ ಶೋಭಾಯಾತ್ರೆಗೆ ಚಾಲನೆ ನೀಡಿದರು.

ಸಂಸದ ಜಿ.ಎಂ. ಸಿದ್ದೇಶ್ವರ್, ಶಾಸಕರುಗಳಾದ ಶಾಮನೂರು ಶಿವಶಂಕರಪ್ಪ, ಎಸ್.ಎ. ರವೀಂದ್ರನಾಥ್, ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ಪಾಲಿಕೆ ಮೇಯರ್ ಎಸ್. ಟಿ.ವೀರೇಶ್, ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್. ಶಿವಯೋಗಿ ಸ್ವಾಮಿ, ಹೆಚ್.ಎಸ್. ನಾಗರಾಜ್ ಮೊದಲುಗೊಂಡಂತೆ ವಿವಿಧ ಪಕ್ಷಗಳ ನಾಯಕರು ಆಗಮಿಸಿ ಗಣೇಶನ ದರ್ಶನ ಪಡೆದರು.

ಬಸವಣ್ಣ, ಛತ್ರಪತಿ ಶಿವಾಜಿ ಸೇರಿದಂತೆ ಕೆಲ ಪ್ರತಿಮೆಗಳು ಮೆರವಣಿಗೆಯಲ್ಲಿದ್ದವು. ಡಿಜೆಯ ಅನುಪಸ್ಥಿತಿ (7ನೇ ಪುಟಕ್ಕೆ)

## ತಿಂಗಳಲ್ಲೇ ಕೈಗಾರಿಕೆಗಳಿಗೆ ಜಮೀನು ವಶ: ಸಂಸದ

### ರಫ್ತುದಾರರ ಸಮಾವೇಶ ಉದ್ಘಾಟಿಸಿದ ಜಿ.ಎಂ. ಸಿದ್ದೇಶ್ವರ

ದಾವಣಗೆರೆ, ಸೆ. 25 – ಕೈಗಾರಿಕೆಗಳನ್ನು ಸ್ಥಾಪಿಸಲು ಜಮೀನು ವಶಪಡಿಸಿಕೊಳ್ಳಲು ಸರ್ಕಾರಕ್ಕೆ ಜಿಲ್ಲಾಡಳಿತದ ಮೂಲಕ ಪ್ರಸ್ತಾವನೆ ಕಳಿಸಲಾಗಿದ್ದು, ತಿಂಗಳಲ್ಲೇ ಅಧಿಕಾರಿಗಳು ವೀಕ್ಷಣೆ ಮಾಡಿ ಜಾಗವನ್ನು ವಶಕ್ಕೆ ಪಡೆಯಲಿದ್ದಾರೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ತಿಳಿಸಿದ್ದಾರೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ, ಜಿಲ್ಲಾ ಕೈಗಾರಿಕಾ ಕೇಂದ್ರ ಮತ್ತು ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿರುವ ವಾಣಿಜ್ಯ ಸಪ್ತಾಹದ ಅಂಗವಾಗಿ ನಗರದ ಓಶನ್ ಪಾರ್ಕ್‌ನಲ್ಲಿ ರಫ್ತುದಾರರ ಸಮಾವೇಶ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಕೈಗಾರಿಕೆಗಳಿಗೆ ಜಾಗ ಇಲ್ಲ ಎಂಬ ದೂರು ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಕೈಗಾರಿಕೆಗಳಿಗೆ 2,300 ಎಕರೆ ಜಾಗವನ್ನು ಈಗಾಗಲೇ ಗುರುತಿಸಿದ್ದೇವೆ. ಇನ್ನೊಂದು ತಿಂಗಳಲ್ಲಿ ಅಧಿಕಾರಿಗಳು ವೀಕ್ಷಣೆ ಮಾಡಿ ಜಾಗವನ್ನು ವಶಕ್ಕೆ ತೆಗೆದುಕೊಳ್ಳಲಿದ್ದಾರೆ ಎಂದು ಸಿದ್ದೇಶ್ವರ ಹೇಳಿದ್ದಾರೆ.

ಬೃಹತ್ ಕೈಗಾರಿಕೆ ಸ್ಥಾಪನೆಗೆ ಸಂಬಂಧಿಸಿದಂತೆ ಮಾತನಾಡಿದ ಸಚಿವರು, ಈಗಿರುವ ಸಾರ್ವಜನಿಕ ವಲಯದ ಶೇ.90ರಷ್ಟು ಕೈಗಾರಿಕೆಗಳು ಮುಳುಗಿವೆ. ಸರ್ಕಾರ ಹೊಸ ಸಾರ್ವಜನಿಕ (7ನೇ ಪುಟಕ್ಕೆ)

### 500 ಎಕರೆಯಲ್ಲಿ ಕೈಗಾರಿಕಾ ನಗರ ಸ್ಥಾಪನೆ

ಜಿಲ್ಲೆಯಲ್ಲಿ ಕೆ.ಎಸ್.ಎಸ್.ಐ.ಡಿ.ಸಿ. ಮೂಲಕ 500 ಎಕರೆ ಪ್ರದೇಶದಲ್ಲಿ ಕೈಗಾರಿಕಾ ನಗರ ಸ್ಥಾಪಿಸುವ ಪ್ರಸ್ತಾಪವಿದೆ. ಖಾಸಗಿ ಸಹಭಾಗಿತ್ವದ ಈ ಯೋಜನೆಗೆ ಅಕ್ಟೋಬರ್ ಮೊದಲ ವಾರದಲ್ಲಿ ಭೂಸ್ವಾಧೀನಕ್ಕೆ ಚಾಲನೆ ದೊರೆಯಲಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ. ವಿಮಾನ ನಿಲ್ದಾಣಕ್ಕೆ ಜಮೀನು ಗುರುತಿಸುವ ಜೊತೆಗೆ ವಾಯು ಗುಣಮಟ್ಟವನ್ನು ಪರಿಶೀಲಿಸಲಾಗಿದೆ. ಸರ್ಕಾರದ ಮಟ್ಟದಲ್ಲಿ ಪ್ರಯತ್ನ ಮಾಡಿದರೆ ವಿಮಾನ ನಿಲ್ದಾಣ ನಿರ್ಮಾಣ ಸಾಧ್ಯವಾಗಲಿದೆ ಎಂದರು.

## ಜಿಎಸ್‌ಟಿ ರೀಫಂಡ್‌ಗೆ ಆಧಾರ್ ಕಡ್ಡಾಯ

ನವದೆಹಲಿ, ಸೆ. 25 - ಜಿಎಸ್‌ಟಿ ರೀಫಂಡ್‌ಗಾಗಿ ಆಧಾರ್ ದೃಢಪಡಿಸುವುದನ್ನು ಕೇಂದ್ರ ಸರ್ಕಾರ ಕಡ್ಡಾಯಗೊಳಿಸಿದೆ.

ಕೇಂದ್ರ ಪರೋಕ್ಷ ತೆರಿಗೆ ಹಾಗೂ ಸುಂಕಗಳ ಮಂಡಳಿ (ಸಿ.ಬಿ.ಐ.ಸಿ.) ಇದಕ್ಕಾಗಿ ಜಿ.ಎಸ್.ಟಿ. ನಿಯಮಗಳಲ್ಲಿ ತಿದ್ದುಪಡಿ ತಂದಿದೆ. ಜಿ.ಎಸ್.ಟಿ. ನೋಂದಣಿ ಪಡೆಯುವಾಗ ಪ್ಯಾನ್ ಜೋಡಣೆ ಮಾಡಲಾಗಿದ್ದ ಬ್ಯಾಂಕ್ ಖಾತೆಗೇ ರೀಫಂಡ್ ಜಮಾ ಮಾಡಲಾಗುವುದು. ಜನವರಿ 1, 2022ರಿಂದ ಮಾಸಿಕ ಜಿ.ಎಸ್.ಟಿ. ಪಾವತಿ ಮಾಡದವರು ಹಾಗೂ ರಿಟರ್ನ್ ದಾಖಲಿಸದವರು ಮುಂದಿನ ತಿಂಗಳಿನಿಂದ ಜಿಎಸ್‌ಟಿಆರ್ - 1 ಮಾರಾಟ ರಿಟರ್ನ್ ದಾಖಲಿಸಲು ಸಾಧ್ಯವಾಗುವುದಿಲ್ಲ.

ಸೆಪ್ಟೆಂಬರ್ 17ರಂದು ನಡೆಸಲಾದ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ತೆಗೆದುಕೊಂಡ ನಂತರ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಈ ಕ್ರಮದಿಂದಾಗಿ ರೀಫಂಡ್ ವಂಚನೆ ಮಾಡುವುದು ತಪ್ಪಲಿದೆ ಎಂದು ಹೇಳಲಾಗುತ್ತಿದೆ.

## ಆರೋಗ್ಯ ಇಲಾಖೆಯ ಭಾನುವಾರದ ರಜೆ ಬದಲಿಸು ಚಿಂತನೆ

ಬೆಂಗಳೂರು,ಸೆ.25- ಆರೋಗ್ಯ ಇಲಾಖೆ ಸಿಬ್ಬಂದಿ ಭಾನುವಾರ ಕೆಲಸ ನಿರ್ವಹಿಸುವಂತೆ ಮಾಡಿ, ಬೇರೆ ದಿನಗಳಲ್ಲಿ ರಜೆ ನೀಡುವ ಬಗ್ಗೆ ಚಿಂತನೆ ನಡೆದಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಾನುವಾರ ರಜೆ ಇರುವುದರಿಂದ ಚಿಕಿತ್ಸೆ ಪಡೆದುಕೊಳ್ಳಲು ಜನರು ಆಸ್ಪತ್ರೆಗಳಿಗೆ ಬರುತ್ತಾರೆ.

ಆದರೆ ಆ ಸಮಯದಲ್ಲಿ ವೈದ್ಯರೂ ಸೇರಿದಂತೆ ಇತರೆ ಸಿಬ್ಬಂದಿ ರಜೆಯಲ್ಲಿದ್ದರೆ ಚಿಕಿತ್ಸೆ ದೊರೆಯುವುದಿಲ್ಲ. ಹೀಗಾಗಿ ವೈದ್ಯರು ಮತ್ತು ಇತರೆ ಸಿಬ್ಬಂದಿಗೆ ರಜೆ ಬದಲಿಸುವ ಚಿಂತನೆ ನಡೆದಿದೆ. (7ನೇ ಪುಟಕ್ಕೆ)

## ಶೀಘ್ರದಲ್ಲೇ ನೂತನ ಸಹಕಾರಿ ನೀತಿ

ನವದೆಹಲಿ, ಸೆ. 25 - ದೇಶವನ್ನು 5 ಟ್ರಿಲಿಯನ್ ಡಾಲರ್ ಆರ್ಥಿಕ ವ್ಯವಸ್ಥೆ ಮಾಡುವಲ್ಲಿ ಸಹಕಾರಿಗಳು ಮಹತ್ವದ ಪಾತ್ರ ಹೊಂದಿದ್ದಾರೆ ಎಂದಿರುವ ಕೇಂದ್ರ ಸಹಕಾರ ಸಚಿವ ಅಮಿತ್ ಷಾ, ಶೀಘ್ರದಲ್ಲೇ ಸರ್ಕಾರ ಹೊಸ ಸಹಕಾರಿ ನೀತಿ ಜಾರಿಗೆ ತರಲಿದೆ ಎಂದು ಹೇಳಿದ್ದಾರೆ.

ಮುಂದಿನ ಐದು ವರ್ಷಗಳಲ್ಲಿ ದೇಶದ ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಸಂಖ್ಯೆ 3 ಲಕ್ಷ ದಾಟಲಿದೆ ಎಂದು ಷಾ ಹೇಳಿದ್ದಾರೆ. ಪ್ರಸಕ್ತ 65 ಸಾವಿರ ಸಂಘಗಳಿವೆ.

ಸಹಕಾರ ಸಂಸ್ಥೆಗಳಿಗಾಗಿ ಸಾಮಾನ್ಯ ಸೇವಾ ಕೇಂದ್ರಗಳು, ರಾಷ್ಟ್ರೀಯ ಮಾಹಿತಿ ಕೇಂದ್ರ ಹಾಗೂ ರಾಷ್ಟ್ರೀಯ ಸಹಕಾರ ವಿಶ್ವವಿದ್ಯಾನಿಲಯ ಆರಂಭಿಸುವುದಾಗಿಯೂ ಅವರು (7ನೇ ಪುಟಕ್ಕೆ)

### ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಸಂಖ್ಯೆ 3 ಲಕ್ಷಕ್ಕೆ ಹೆಚ್ಚಳ : ಅಮಿತ್ ಷಾ

## ಒತ್ತಡ ಎದುರಿಸಲು ಕ್ರೀಡಾ ಚಟುವಟಿಕೆಗೆ ಸಮಯ ಮೀಸಲಿಡಿ



### ದಾವಣಗೆರೆ ಕ್ಲಬ್‌ನಲ್ಲಿ ಟೆನ್ನಿಸ್ ಕೋರ್ಟ್‌ನ ಹೊನಲು-ಬೆಳಕಿನ ದೀಪಗಳ ಉದ್ಘಾಟನೆಯಲ್ಲಿ ಐಜಿಪಿ ರವಿ

ದಾವಣಗೆರೆ, ಸೆ.25- ನಿತ್ಯ ಜೀವನದಲ್ಲಿನ ಒತ್ತಡಗಳನ್ನು ಸಮರ್ಥವಾಗಿ ಎದುರಿಸಲು ಕ್ರೀಡಾ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗುವುದು ಸೂಕ್ತ. ಇದಕ್ಕಾಗಿಯೇ ಬಿಡುವಿನ ಸಮಯವನ್ನು ಮೀಸಲಿಡಬೇಕು ಎಂದು ಪೂರ್ವ ವಲಯ ಐಜಿಪಿ ಎಸ್. ರವಿ ಅಭಿಪ್ರಾಯಪಟ್ಟರು.

ಅವರು, ಇಂದು ಸಂಜೆ ನಗರದ ಪಿ.ಬಿ. ರಸ್ತೆಯ ಪ್ರವಾಸಿ ಮಂದಿರ ಬಳಿಯ ದಿ ದಾವಣಗೆರೆ ಕ್ಲಬ್‌ನ ಆವರಣದಲ್ಲಿನ ಟೆನ್ನಿಸ್ ಕೋರ್ಟ್ ನಲ್ಲಿ ಅಳವಡಿಸಿರುವ ಹೊನಲು-ಬೆಳಕಿನ ದೀಪಗಳನ್ನು ಉದ್ಘಾಟಿಸಿದರು. ಅದಕ್ಕೂ ಮುಂಚೆ ನಡೆದ ವೇದಿಕೆ ಸಮಾರಂಭವನ್ನೂ ಉದ್ಘಾಟಿಸಿ ಮಾತನಾಡಿದರು.

ನಿತ್ಯ ಜೀವನದಲ್ಲಿ ಕೆಲಸದ ಒತ್ತಡ ಹಾಗೂ ಬದುಕಿನ ಒತ್ತಡಗಳು ಸಾಮಾನ್ಯ. ಆದರೆ, ಕೇವಲ ಒತ್ತಡಗಳಲ್ಲೇ ನಮ್ಮ ಜೀವನ ಕಳೆದು ಹೋಗುವಂತಾಗಬಾರದು ಎಂದು ಹಿತ ನುಡಿದರು.

ನಮ್ಮ ಕಾರ್ಯ ಚಟುವಟಿಕೆಗಳು, ಬದುಕು ಆರೋಗ್ಯಪೂರ್ಣವಾಗಿ ಕ್ರಿಯಾಶೀಲದಿಂದಿರಲು ಒತ್ತಡಗಳಿಂದ ಮುಕ್ತವಾಗಬೇಕು. ಇದಕ್ಕೆ ಕ್ರೀಡಾ, ಸಾಂಸ್ಕೃತಿಕ ಚಟುವಟಿಕೆಗಳು ಪ್ರೇರಕವಾಗಲಿವೆ. ಕನಿಷ್ಠ ಒಂದು ಗಂಟೆಯನ್ನಾ (7ನೇ ಪುಟಕ್ಕೆ)

## ರಾಜ್ಯೋತ್ಸವ ಪ್ರಶಸ್ತಿಗೆ ಸಾರ್ವಜನಿಕರಿಂದಲೇ ಸಾಧಕರ ಆಯ್ಕೆ

ಬೆಂಗಳೂರು,ಸೆ.25- ರಾಜ್ಯೋತ್ಸವ ಪ್ರಶಸ್ತಿಗೆ ಆನ್‌ಲೈನ್ ಮೂಲಕ ಸಾರ್ವಜನಿಕರೇ ಸಾಧಕರನ್ನು ಶಿಫಾರಸ್ಸು ಮಾಡಬಹುದೆಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನಿಲ್‌ಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ನವೆಂಬರ್ ಒಂದರಂದು 66ನೇ ಕರ್ನಾಟಕ ರಾಜ್ಯೋತ್ಸವ ಆಚರಣೆಯನ್ನು ರಾಜ್ಯ ಸರ್ಕಾರದಿಂದ ಆಚರಿಸಲಾಗುತ್ತಿದ್ದು, ಪ್ರತಿವರ್ಷದಂತೆ ಈ ವರ್ಷವೂ ಸಾಧಕರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಈ ಬಾರಿಯ ವಿಶೇಷವೆಂದರೆ ,ಈ ವರ್ಷ ರಾಜ್ಯೋತ್ಸವ ಪ್ರಶಸ್ತಿಗೆ ಅರ್ಹರನ್ನು ಗುರುತಿಸಿ ಆನ್ಲೈನ್ ಮೂಲಕ ಅವರ ಹೆಸರು ಶಿಫಾರಸ್ಸು ಮಾಡಲು ಸಾರ್ವಜನಿಕರಿಗೇ ಅವಕಾಶ ಕಲ್ಪಿಸಲಾಗಿದೆ ಎಂದು ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್ ಹೇಳಿದ್ದಾರೆ.

ಈ ವರ್ಷ 66 ಅರ್ಹ ಸಾಧಕರನ್ನು ಗುರುತಿಸಿ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗುತ್ತದೆ, ಸಾರ್ವಜನಿಕರು ಯಾರೇ ಆಗಲಿ ಅವರು ಸೇವಾ ಸಿಂಧು ಪೋರ್ಟಲ್ ಮೂಲಕ ರಾಜ್ಯೋತ್ಸವ ಪ್ರಶಸ್ತಿಗಾಗಿ ಸಿದ್ಧಪಡಿಸಲಾಗಿರುವ ವಿಶೇಷ ನಮೂನೆಯ ಅರ್ಜಿಯಲ್ಲಿ ಮೂರು ಹೆಸರುಗಳನ್ನು ಶಿಫಾರಸ್ಸು ಮಾಡಬಹುದಾಗಿದೆ. ಈ ಮೂವರು ಸಾಧಕರುಗಳ ಹೆಸರು, ಅವರು ಯಾವ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ, ಅವರ ಊರು, ವಿಳಾಸ, ಸಂಪರ್ಕ ಸಂಖ್ಯೆ ಇತ್ಯಾದಿ ವಿವರಗಳನ್ನು ಒದಗಿಸಲು ಈ ಅರ್ಜಿ ನಮೂನೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ರಾಜ್ಯದ ಮೂಲೆ ಮೂಲೆಯಲ್ಲಿ ವಾಸ ಮಾಡುತ್ತಿರುವ ಹಾಗೂ (7ನೇ ಪುಟಕ್ಕೆ)

## ಎಪಿಎಂಸಿ ದಲ್ಲಾಲರ ಸಂಘದ ಅಧ್ಯಕ್ಷರಾಗಿ ಪಂಚಾಕ್ಷರಪ್ಪ



ಕಂಸಾಗರದ ಪಂಚಾಕ್ಷರಪ್ಪ | ಹೆಚ್.ಎಂ. ಬಸವರಾಜಪ್ಪ | ಬಿ.ಜಿ.ಆರ್. ಹಾಲೇಶ್ | ರಾಮಗೊಂಡನಹಳ್ಳಿ ಹೆಚ್. ದಯಾನಂದ | ಅಣಬೇರು ಎ.ಸಿ. ಜಗದೀಶ್ | ಕೆ.ಜಿ.ಕೆ. ಬಸವರಾಜ್ | ಕಬ್ಬೂರು ಕೆ.ಜಿ. ಪ್ರಕಾಶ್

ದಾವಣಗೆರೆ, ಸೆ. 25 - ನಗರದ ಎಪಿಎಂಸಿ ಯಾರ್ಡ್‌ನ ದಲ್ಲಾಲರ ಸಂಘದ ಅಧ್ಯಕ್ಷರಾಗಿ ಕಂಸಾಗರದ ಪಂಚಾಕ್ಷರಪ್ಪ, ಗೌರವಾಧ್ಯಕ್ಷರುಗಳಾಗಿ ಜಿ.ಎಸ್. ಪರಮೇಶ್ವರ ಗೌಡ್ರು ಮತ್ತು ಎಸ್.ಟಿ. ಕುಸುಮಶೆಟ್ರು ಆಯ್ಕೆಯಾಗಿದ್ದಾರೆ.


ಉಪಾಧ್ಯಕ್ಷರುಗಳಾಗಿ ಹೆಚ್.ಎಂ. ಬಸವರಾಜಪ್ಪ, ಬಿ.ಜಿ.ಆರ್. ಹಾಲೇಶ್, ಕಾರ್ಯದರ್ಶಿಯಾಗಿ ರಾಮಗೊಂಡನಹಳ್ಳಿ ಹೆಚ್. ದಯಾನಂದ, ಸಹ ಕಾರ್ಯದರ್ಶಿಗಳಾಗಿ ಎ.ಸಿ. ಜಗದೀಶ್, ಕೆ.ಜಿ.ಕೆ. ಬಸವರಾಜ್, ಕೋಶಾಧಿಕಾರಿಯಾಗಿ ಕೆ.ಜಿ. ಪ್ರಕಾಶ್ ಆಯ್ಕೆಯಾಗಿದ್ದಾರೆ.

ಕೆ. ರಾಜಗೋಪಾಲರೆಡ್ಡಿ, ಹೆಚ್.ಜಿ. (7ನೇ ಪುಟಕ್ಕೆ)

## ಸಂಸದೀಯ ಪ್ರಜಾಪ್ರಭುತ್ವದ 75 ಸಮಾರಂಭ

ಬೆಂಗಳೂರು, ಸೆ. 25 - ದೇಶದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಸಂಸದೀಯ ಪ್ರಜಾಪ್ರಭುತ್ವದ ಕುರಿತು 75 ಸಮಾರಂಭಗಳನ್ನು ಆಯೋಜಿಸಲಾಗುವುದು ಎಂದು (7ನೇ ಪುಟಕ್ಕೆ)

## ಪ್ರಥಮ ವರ್ಷದ ಪುಣ್ಯಸ್ಮರಣೆ



ಎಲ್. ಕೃಷ್ಣಮೂರ್ತಿ ಇವರ ಪುತ್ರ

### ಶ್ರೀ ರಾಜೀವ್ ಎಲ್.ಕೆ.

ಹಗಲು-ಇರುಳುಗಳು ಕಳೆದು, ಮೂಡುತಿರುವ ಹೊಸತಿನಂತೆ ನಿಮ್ಮ ನೆನಪು ನಮಗೆಲ್ಲಾ ದಾರಿ ದೀಪವಾಗಿದೆ. ನೀವು ಕಣ್ಮರೆಯಾಗಿ ಹೋದರೂ, ನೀವು, ನಿಮ್ಮ ನೆನಪು ನಮ್ಮೆಲ್ಲರ ಹೃದಯಗಳಲ್ಲಿ ಶಾಶ್ವತವಾಗಿ ಉಳಿದಿದೆ. ಕಷ್ಟ-ಸುಖಗಳ ತೊಳಲಾಟದ ಬದುಕಿಗೆ ನಿಮ್ಮ ಮನೋಬಲ ನಮಗೆ ದೃಢತೆ ನೀಡಿದೆ. ನಿಮ್ಮ ಆತ್ಮಕ್ಕೆ ಆ ಶಿವಪರಮಾತ್ಮನು ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುವ,

ಇಂತಿ ದುಃಖತಪ್ತ

ತಂದೆ, ಧರ್ಮಪತ್ನಿ, ಮಕ್ಕಳು, ಸೊಸೆಯಂದಿರು, ಮೊಮ್ಮಗಳು ಮತ್ತು ಅಂಗಂಪಲ್ಲಿ ವಂಶಸ್ಥರು ಹಾಗೂ ಬಂಧು-ಮಿತ್ರರು.

ಅಮ್ಮ ನಿಲಯ, ಆಂಜನೇಯ ದೇವಸ್ಥಾನದ ಹಿಂಭಾಗದ ರಸ್ತೆ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.

94814 18236, 97402 20332, 95915 93314

# ವಾರ ಭವಿಷ್ಯ

**ದಿನಾಂಕ : 26.09.2021 ರಿಂದ 02.10.2021**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ರಾಜಕಾರಣಿಗಳಿಗೆ ಶ್ರಮ ಹಾಗೂ ಸಂಘಟನಾ ಸಾಮರ್ಥ್ಯಕ್ಕೆ ತಕ್ಕಂತೆ ಸ್ಥಾನಮಾನಗಳು, ಹಿಂಬಾಲಕರ ಮೇಲೆ ಹಿಡಿತವಿರಲಿ, ಉದ್ಯಮಿಗಳಿಗೆ ಲಾಭ ಅಷ್ಟಕ್ಕಷ್ಟೇ. ಕೊಟ್ಟ ಸಾಲಗಳು ಅಲ್ಪಪ್ರಮಾಣದಲ್ಲಿ ಮರಳಿ ಬರುವುದರಿಂದ ಯಾವುದೇ ಹೊಸ ಯೋಜನೆಗಳಿಗೆ ಕೈಹಾಕಬೇಡಿ. ಕುಟುಂಬದ ಹಿರಿಯರು ಹೊರಿಸಬಹುದಾದ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಪ್ರಯತ್ನಿಸಬೇಡಿ.ಇದರ ಪ್ರಯೋಜನ ಮುಂದೆ ನಿಮಗೆ ಕಾಣಲಿದೆ. ಅತಿಯಾದ ಮೋಜು-ಮಸ್ತಿಗಳು ಒಳ್ಳೆಯದಲ್ಲ. ಮಕ್ಕಳ ವಿದ್ಯಾಭ್ಯಾಸ ಗಮನಿಸದಿರುವುದು ಸೂಕ್ತವಲ್ಲ. ಮತ್ತೊಬ್ಬರಾಡುವ ಮಾತುಗಳನ್ನು ಕನಿಷ್ಟಪಕ್ಷ ಕೇಳಿಸಿಕೊಳ್ಳುವಷ್ಟು ಸಹನೆಯನ್ನು ಉಳಿಸಿಕೊಳ್ಳಿ. ಸೋಮ -ಮಂಗಳ -ಬುಧ -ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಸ್ತ್ರೀ ವರ್ಗದವರಿಗೆ ಈ ವಾರವೆಲ್ಲಾ ಶುಭದಾಯಕ, ಅಂದುಕೊಂಡ ಕೋರಿಕೆಗಳೆಲ್ಲವೂ ನೆರವೇರಲಿವೆ. ಕುಟುಂಬದ ಒಗ್ಗಟ್ಟನ್ನು ಕಾಪಾಡಿಕೊಳ್ಳಲು ಹರಸಾಹಸ, ಮಂದಗತಿಯಲ್ಲಿದ್ದ ಆದಾಯದಲ್ಲಿ ಕ್ರಮೇಣ ಏರಿಕೆ. ಹಿತಶತ್ರುಗಳ ನಿರಂತರ ಕಾಡಾಟದಿಂದ ಮುಕ್ತಿ ದೊರೆಯಲಿದೆ. ಚಿನ್ನಾಭರಣಗಳ ಖರೀದಿಗೆಂದು ಕೊಂಚ ಹೆಚ್ಚೇ ಎನ್ನಬಹುದಾದ ವೆಚ್ಚವಾಗಲಿದೆ. ಸರ್ಕಾರದಿಂದ ಆಗಬೇಕಾಗಿರುವ ಕೆಲಸಗಳು, ಪ್ರಭಾವೀ ವ್ಯಕ್ತಿಗಳ ಸಹಾಯದಿಂದ ನೆರವೇರಲಿವೆ. ವೃತ್ತಿಯಲ್ಲಿ ಭಾರೀ ಬದಲಾವಣೆ , ಅದಕ್ಕೆ ಮಾನಸಿಕವಾಗಿ ಸಿದ್ಧರಿರುವುದು ಉತ್ತಮ. ವಿದ್ಯಾರ್ಥಿಗಳ ಉನ್ನತಾಧ್ಯಯನಕ್ಕೆ ಸರ್ಕಾರದಿಂದ ನೆರವು, ಗುರುಗಳ ಸೇವೆಯಿಂದ ಪುಣ್ಯಪ್ರಾಪ್ತಿ. ಬುಧ -ಶುಕ್ರ -ಶನಿ -ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಚ.ಕೆ.ಕೋ.ಹ.)**

ಕರ್ತವ್ಯದಲ್ಲಿ ಎಚ್ಚರ ವಹಿಸಿರಿ. ಪಿತ್ರಾರ್ಜಿತ ಆಸ್ತಿ ಹಿಸ್ಸೆ ಬಗ್ಗೆ ಹಿರಿಯರ ಆಣತಿಯಂತೆ ನಡೆದುಕೊಳ್ಳಿ. ಇದರಿಂದಾಗಿ ಹಳಸಿಹೋಗಿದ್ದ ಸಂಬಂಧಗಳು ಮತ್ತೆ ಗಟ್ಟಿಗೊಳ್ಳಲಿವೆ. ಗೆಳೆಯರೊಂದಿಗಿರುವ ಭಿನ್ನಾಭಿಪ್ರಾಯವನ್ನು ಮುಕ್ತವಾಗಿ ಚರ್ಚಿಸಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದು ಉತ್ತಮ. ಮಹಿಳೆಯರೊಂದಿಗೆ ವಿನಾಕಾರಣ ಜಗಳವಾಡುವುದರಿಂದ ಅವಮಾನ, ಗೃಹಾಲಂಕಾರಿಕೆ ವಸ್ತುಗಳ ಖರೀದಿ. ಹದಗೆಟ್ಟಿದ್ದ ಆದಾಯಕ್ಕೆ ಹಿತೈಷಿಗಳಿಂದ ಉತ್ತಮ ಮಾರ್ಗದರ್ಶನ, ಹೊಸ ಸ್ವತ್ತುಗಳನ್ನು ತೆಗೆದುಕೊಳ್ಳುವ ಮೊದಲು, ಅದರ ದಾಖಲೆಗಳನ್ನು ಎರಡೆರಡು ಬಾರಿ ಪರಿಶಿಲಿಸುವುದು ಲೇಸು ಮಡದಿ-ಮಕ್ಕಳ ಖರ್ಚಿಗೊಂದು ಕಡಿವಾಣವಿರಲಿ, ಕುಲದೇವತಾರಾಧನೆ ಮಾಡಿ. ಭಾನು -ಬುಧ -ಗುರು -ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ತಪ್ಪು ತಿಳುವಳಿಕೆಯಿಂದ ಮನೆಯಲ್ಲಿ ಉಂಟಾಗಿರುವ ಅಶಾಂತಿಯನ್ನು ಕುಳಿತು ಮಾತನಾಡಿ ಬಗೆಹರಿಸಿಕೊಳ್ಳುವುದು ಉತ್ತಮ. ಮಹಿಳೆಯರು ತಾವಾಡುವ ಮಾತಿನ ಬಗ್ಗೆ ಮುಂದಾಲೋಚಿಸಿ, ತಮ್ಮದಲ್ಲದ ತಪ್ಪಿಗೆ ಅನಿರೀಕ್ಷಿತ ವರ್ಗವಣೆ, ಕೈಕೆಳಗಿನ ನೌಕರರೊಂದಿಗೆ ಸೌಹಾರ್ದತೆಯಿಂದ ವರ್ತಿಸುವುದು ಮೇಲು. ರಾಜಕಾರಣಿಗಳಿಗೆ ಉನ್ನತ ಸ್ಥಾನ, ತುಸು ಶ್ರಮಪಟ್ಟಲ್ಲಿ ಸಚಿವ ಸ್ಥಾನವೂ ಗಟ್ಟಿಯಾಗಲಿದೆ. ನಿರುದ್ಯೋಗಿಗಳಿಗೆ ಸಾಧಾರಣ ವೇತನದ ನೌಕರಿ, ದಿನಸಿ ವ್ಯಾಪಾರದಲ್ಲಿ ಕ್ರಮೇಣ ಏರಿಕೆ, ಯಾವುದೇ ರಂಗದಲ್ಲಿ ಹೂಡಿಕೆ ಮಾಡುವುದು ಈಗಿನ ಪರಿಸ್ಥಿತಿಯಲ್ಲಿ ಸೂಕ್ತವಲ್ಲ. ಹೈನುಗಾರಿಕೆ, ಹೂವು -ಹಣ್ಣು, ತರಕಾರಿ, ವ್ಯಾಪಾರಿಗಳಿಗೆ ಉತ್ತಮ. ಸೋಮ -ಗುರು -ಶುಕ್ರ -ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ವಾಹನಗಳ ಮಾರಾಟಗಾರರಿಗೆ ಹೆಚ್ಚಿನ ವಹಿವಾಟು, ಲಾಭಾಂಶ ಸಾಧಾರಣ. ವೈಯಕ್ತಿಕ ವಿಚಾರಗಳನ್ನು ಬಹಿರಂಗವಾಗಿ ಚರ್ಚಿಸಬೇಡಿ, ಸಹೋದ್ಯೋಗಿಗಳೊಂದಿಗೆ ಮಾಡಿಕೊಳ್ಳಬಹುದಾದ ಭಿನ್ನಾಭಿಪ್ರಾಯ, ಬೇರೆಯವರಿಂದ ನಿಮಗೆ ಸಿಗಬಹುದಾದ ನೆರವಿಗೆ ಕಂಟಕವಾಗಿ ಪರಿಣಿಮಿಸಬಹುದು. ಕೆಲಸಗಳ ಒತ್ತಡದಿಂದಾಗಿ ಬೆನ್ನು ನೋವು, ವಿದ್ಯಾರ್ಥಿಗಳಿಗೆ ಉತ್ತಮ ಸೌಲಭ್ಯಗಳು, ಕಳೆದುಹೋಗಿದ್ದ, ಮತ್ತೆಂದೂ ಸಿಗದೆಂದು ಭಾವಿಸಿದ್ದ ಅಮೂಲ್ಯ ವಸ್ತು ಅಥವಾ ಆಸ್ತಿಗೆ ಸಂಬಂಧಿಸಿದ ದಾಖಲೆಗಳು ಮತ್ತೆ ಸಿಗಲಿವೆ. ಹಣದ ಹರಿವು ಸಾಧಾರಣವಾಗಿರುವುದರಿಂದ ವೆಚ್ಚವು ಇತಿಮಿತಿಯಲ್ಲಿರಲಿ, ಭಾನು -ಮಂಗಳ-ಗುರು -ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಮಕ್ಕಳ ವೃತ್ತಿಯಲ್ಲಿನ ಬದಲಾವಣೆಯಿಂದ ಆರ್ಥಿಕ ಸ್ಥಿತಿಗತಿ ಮೇಲೆ ಕೆಟ್ಟ ಪರಿಣಾಮ. ಆದಾಯದಲ್ಲಿ ಹೆಚ್ಚಳವಾದರೂ ಉಳಿತಾಯಕ್ಕೆ ಸಾಲುವುದಿಲ್ಲ. ಶಿಕ್ಷಣ ಕ್ಷೇತ್ರದಲ್ಲಿರುವವರಿಗೆ ಸಮಾಜದಲ್ಲಿ ಗೌರವ. ಮಡದಿಯ ಮಾತುಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕಿಲ್ಲ. ಉನ್ನತಾಧ್ಯಯನ ಮಾಡುವವರಿಗೆ ಹಾದಿ ಸುಗಮ. ನವ ದಂಪತಿಗಳು ಪರಸ್ಪರ ಅರಿತು ನಡೆಯುವುದು ಲೇಸು. ಅವಿವಾಹಿತರಿಗೆ ಕಂಕಣ ಭಾಗ್ಯ. ನಿವೃತ್ತಿಯಂಚಿನಲ್ಲಿರುವವರು ಮುಂದಿನ ಜೀವನದ ಬಗ್ಗೆ ಈಗಲೇ ನಿರ್ಧಾರಕ್ಕೆ ಬರುವುದು ಉತ್ತಮ. ಆದಾಯದ ಮೂಲ ಹೆಚ್ಚಿಸಿಕೊಳ್ಳಲು ಮಾರ್ಗ ಕಾಣಲಿದೆ. ಚಿಕ್ಕ ಮಕ್ಕಳ ಆರೋಗ್ಯದ ಕಡೆ ಗಮನ ಕೊಡಿ. ಅನಾವಶ್ಯಕ ಪ್ರಯಾಣ ಬೇಡ. ಮಂಗಳ, ಬುಧ, ಗುರು ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಬೇರೆಯವರ ವೈಯಕ್ತಿಕ ವಿಚಾರದ ಮಾತುಕತೆಯಿಂದ ನೀವೇ ಅಪರಾಧಿ ಸ್ಥಾನದಲ್ಲಿರಬೇಕಾಗಬಹುದು. ನೀತಿಪಾಠ ಹೇಳಲು ಹೋಗಬೇಡಿ. ಅಪರಿಚಿತರಿಗೆ ಆಸ್ತಿ ಕೊಡಿಸಲು ಹೋಗಿ, ತೊಂದರೆಗೆ ಸಿಲುಕುವಿರಿ. ಸಂಗಾತಿಯು ನಿಮ್ಮ ಇಚ್ಛೆಗೆ ಅನುಸಾರ ನಡೆದುಕೊಳ್ಳುವುದರಿಂದ ಮನಸ್ಸಿಗೆ ತುಸು ನೆಮ್ಮದಿ. ಸಾರ್ವಜನಿಕ ಹಣಕಾಸು ಕೆಲಸ ಮಾಡುವವರು ಲೆಕ್ಕಪತ್ರ ಕ್ರಮವಾಗಿಟ್ಟುಕೊಳ್ಳುವುದು ಲೇಸು. ವಿದೇಶದಲ್ಲಿರುವ ಮಗನ ನೌಕರಿ ವಿಚಾರ ತುಸು ಜಟಿಲ. ಗಳಿಕೆ-ಉಳಿಕೆ ವಿಚಾರ ಸಾಧ್ಯವಾದಷ್ಟು ಗುಟ್ಟಾಗಿಡಿ. ಹಿರಿಯರ ಕೋರಿಕೆ ಪೂರೈಸಲು ಯತ್ನಿಸಿ. ಸಮಾಜ ಸೇವೆಯಲ್ಲಿ ತೊಡಗಿಕೊಳ್ಳುವ ಮುನ್ನ ಕುಟುಂಬದ ಬಗ್ಗೆ ಯೋಚಿಸಿ, ನಿರ್ಧರಿಸಿ. ತೀರ್ಥಯಾತ್ರೆ ಮಾಡುವ ಪ್ರಸಂಗ ತಪ್ಪಿಸಿಕೊಳ್ಳಬೇಡಿ. ಬುಧ, ಗುರು, ಶುಕ್ರ ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಪರಿಚಯದವರಿಂದಲೇ ಹಣಕಾಸಿನ ವಿಚಾರದಲ್ಲಿ ಮೋಸ, ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವವರು ತಾಳ್ಮೆಯಿಂದಿರುವುದು ಲೇಸು. ಆದಾಯದ ಮೂಲದಲ್ಲಿ ಹರಿವು, ಪ್ರತಿಯೊಂದಕ್ಕೂ ಯೋಚಿಸಿ ಖರ್ಚು ಮಾಡುವುದು ಲೇಸು. ಮಗಳ ಮದುವೆಗೆ ಪ್ರಯತ್ನಿಸಲು ಸಕಾಲ. ಅನಿರೀಕ್ಷಿತ ವಾಸ ಸ್ಥಳದಿಂದ ಕೆಲಕಾಲ ದೂರವಿರಬೇಕಾಗೀತು. ಬೇರೆಯವರ ಮನ ನೋಯುವಂತೆ ಮಾತನಾಡಬೇಡಿ. ನೆರೆಹೊರೆಯವರೊಂದಿಗೆ ಕೆಟ್ಟು ಹೋಗಿದ್ದ ವಿಶ್ವಾಸ ಮತ್ತೆ ಮೂಡಲಿದೆ. ಸೋದರನ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ ಕಂಡು ಬರಲಿದೆ. ಬೇರೆಯವರಿಗೆ ಭರವಸೆ ಕೊಡಬೇಡಿ. ಬ್ಯಾಂಕ್ ನೌಕರರು ಹಳೆಯ ಪ್ರಕರಣಕ್ಕೆ ಸಂಬಂಧಿಸಿದ ವಿಚಾರಣೆ ಎದುರಿಸಬೇಕಾದೀತು. ಔಷಧಿ ವ್ಯಾಪಾರಿಗಳಿಗೆ ಹೆಚ್ಚಿನ ವಹಿವಾಟು. ಭಾನು, ಮಂಗಳ, ಗುರು ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಸಣ್ಣ ಉದ್ಯಮದಲ್ಲಿರುವವರು ದೊಡ್ಡ ಉದ್ಯಮಿಗಳಿಂದ ಸಲಹೆ ಪಡೆಯುವುದರಿಂದ ಸಮಸ್ಯೆ ಕಡಿಮೆಯಾಗಲಿದೆ. ನಿಮ್ಮ ಕುಟುಂಬ ಹಾಗೂ ಬಂಧುಗಳಿಗೆ ಸರ್ಕಾರದಿಂದಾಗಬೇಕಾಗಿದ್ದ ಕೆಲಸಗಳು ಶೀಘ್ರದಲ್ಲಿ ನೆರವೇರಲಿವೆ. ನ್ಯಾಯಾಲಯದ ವ್ಯಾಜ್ಯಗಳು ನಿಮ್ಮಂತೆ ಆಗುವ ಸಂಭವವಿದ್ದರೂ, ಸಾಧ್ಯವಾದಷ್ಟು ಕೋರ್ಟ್ ಹೊರಗೆ ರಾಜೀ ಪಂಚಾಯ್ತಿ ಮೂಲಕ ಬಗೆಹರಿಸಿಕೊಳ್ಳುವುದು ಉತ್ತಮ. ಆದಾಯದ ಕೊರತೆ ಇದ್ದರೂ ಕಡಿಮೆ ಖರ್ಚಿನಿಂದ ಸರಿದೂಗಿಸಲು ಪ್ರಯತ್ನಿಸಿ. ಉತ್ತಮ ನಿರ್ಧಾರದಿಂದ ವ್ಯವಹಾರ ಸ್ಪಷ್ಟ ತಿರುವು ಪಡೆಯಲಿದೆ. ಪಕ್ಷದ ವರಿಷ್ಠರು ನಿಮ್ಮ ಶ್ರಮ ಗುರುತಿಸಿ ಪ್ರಶಂಸಿಸುವರು. ಆರಕ್ಷಣಾ ಇಲಾಖೆಯವರಿಗೆ ಸರ್ಕಾರದಿಂದ ಬರಬೇಕಾಗಿದ್ದ ಸವಲತ್ತುಗಳು ಸಿಗಲಿವೆ. ಲೇವಾದೇವಿ ವ್ಯವಹಾರದಲ್ಲಿ ಹೆಚ್ಚಿನ ಹೂಡಿಕೆ ಮಾಡುವುದರಿಂದ ನಷ್ಟ. ಸೋಮ, ಬುಧ, ಗುರು ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ವಿದ್ಯಾರ್ಥಿಗಳು ಶ್ರಮ ಪಡದೇ ಬೇರೆ ದಾರಿಯಿಲ್ಲ. ಅನನುಭವಿಗಳ ಮಾತು ಕೇಳದಿರುವುದು ಲೇಸು. ಸರ್ಕಾರಿ ನೌಕರರಿಗೆ ಬರುವ ವರ್ಗಾವಣೆ ಆದೇಶ ಬಯಸದೇ ಬಂದ ಭಾಗ್ಯವಾಗಲಿದೆ. ಕುಟುಂಬದಲ್ಲಿನ ಸಮಸ್ಯೆ ಬೆಳೆಯಲು ಅವಕಾಶ ಕೊಡಬೇಡಿ, ಸಾಲ ಕೊಡುವುದೆಂದರೆ ತೊಂದರೆ ಆಹ್ವಾನಿಸಿದಂತೆ. ಬೆಲೆಬಾಳುವ ವಸ್ತ್ರಾಭರಣಗಳ ಖರೀದಿ ಬಗ್ಗೆ ಮನೆಯಲ್ಲಿ ಚರ್ಚೆ. ಸ್ವಯಂ ಉದ್ಯಮಿಗಳಿಗೆ ಶ್ರಮಕ್ಕೆ ತಕ್ಕ ಆದಾಯ. ಹೆಚ್ಚಿನ ಲಾಭವಿಲ್ಲದಿದ್ದರೂ ನಷ್ಟವಂತೂ ಇಲ್ಲ. ಹಿರಿಯರು ಮಕ್ಕಳಿಗೆ ಜವಾಬ್ದಾರಿ ವಹಿಸುವುದರಲ್ಲಿ ಅವರ ಕ್ಷೇಮವಿದೆ. ಭೋಜನ ಕೂಟದಿಂದ ಆರೋಗ್ಯದಲ್ಲಿ ವ್ಯತ್ಯಾಸ. ವಾರಾಂತ್ಯದಲ್ಲಿ ಹಣಕಾಸಿನ ಪರಿಸ್ಥಿತಿ ಸುಧಾರಿಸಲಿದೆ. ಸಾಧು ಸಂತರನ್ನು ಗೌರವಿಸಿದಲ್ಲಿ ತೊಂದರೆಗಳು ದೂರವಾಗಲಿವೆ. ಭಾನು, ಗುರು, ಶನಿ ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ದೈವಾನುಕೂಲದಿಂದ ಆದಾಯದ ಮೂಲದಲ್ಲಿ ಹೆಚ್ಚಳ. ಹಣಕಾಸಿನ ಸಮಸ್ಯೆ ಬಗೆಹರಿಯಲಿವೆ. ಸಾಲ ತೀರಿಸಲು ಇದು ಸಕಾಲ. ಮಡದಿ ಮಕ್ಕಳ ಮನರಂಜನೆಗೆ ಹೆಚ್ಚಿನ ವೆಚ್ಚ ಅನಿವಾರ್ಯ. ಹಿರಿಯರಿಗೆ ಬರಲಿರುವ ವಿಮೆ ಹಣಕ್ಕೊಂದು ವ್ಯವಸ್ಥೆಯನ್ನು ಸಾಧ್ಯವಾದಷ್ಟು ಬೇಗ ಮಾಡುವುದು ಉತ್ತಮ. ಯುವಕರು ದೊಡ್ಡವರೊಂದಿಗೆ ನಯವಿನಯದಿಂದ ವರ್ತಿಸಿ. ಗೃಹಾಲಂಕಾರ ಸಾಮಗ್ರಿಗಳಿಗೆ ಹೆಚ್ಚಿನ ಬೇಡಿಕೆ ಬರಲಿದೆ. ಚಿನಿವಾರಪೇಟೆಯಲ್ಲಿ ಅತಿ ಹೆಚ್ಚಿನ ವಹಿವಾಟು ಕಂಡು ಬರಲಿದೆ. ಲಾಭಾಂಶ ದ್ವಿಗುಣಗೊಳ್ಳಲಿದೆ. ವಿದೇಶ ಪ್ರಯಾಣದ ಕನಸು ನನಸಾಗಲಿದೆ. ಅಪರಿಚಿತ ಮಹಿಳೆಯರೊಂದಿಗೆ ಅತಿ ಸಲುಗೆ ಬೇಡ. ಸಂಗೀತಗಾರರಿಗೆ ಉತ್ತಮ ಅವಕಾಶದಿಂದ ಸಂಪಾದನೆಯೂ ಹೆಚ್ಚಲಿದೆ. ಸಂಶೋಧನಾ ರಂಗದಲ್ಲಿರುವವರಿಗೆ ಸರ್ಕಾರದಿಂದ ನೆರವು ಸಿಗಲಿದೆ. ಹರಿತಾಯುಧಗಳಿಂದ ಎಚ್ಚರ. ಸೋಮ, ಬುಧ, ಶನಿ ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಹೊಸ ಮನೆ ಕಟ್ಟಲು ಆರಂಭಿಸಿರುವ ನಿಮಗೆ ತೊಂದರೆಯಿಲ್ಲ. ಬಂಧುಗಳ ನೆರವು ಮಾತ್ರವಲ್ಲದೇ, ಹಣಕಾಸು ಸಂಸ್ಥೆಗಳೂ ಕೂಡ ನೆರವಿಗೆ ಧಾವಿಸಲಿವೆ. ವಿದ್ಯಾರ್ಥಿಗಳಿಗೆ ಅವಕಾಶಗಳ ಮಹಾಪೂರವೇ ಹರಿದು ಬರಲಿದೆ. ಜಾಣತನದಿಂದ ಸೂಕ್ತವಾದ ಆಯ್ಕೆ ಮಾಡಿಕೊಳ್ಳುವುದು ಉತ್ತಮ. ಶ್ರಮಪಟ್ಟು ಯಶಸ್ಸಿನ ಹಾದಿಯಲ್ಲಿ ಹೊರಟಿರುವ ನಿಮಗೆ ನಯವಂಚಕರು ಎದುರಾಗುವರು. ಉಪಾಯದಿಂದ ದೂರವಿರಿ. ಉನ್ನತ ಹುದ್ದೆಯಲ್ಲಿರುವವರಿಗೆ ಕೆಲಸಗಾರರಿಂದ ಸಮಸ್ಯೆ ಎದುರಾಗಲಿದೆ. ಆರೋಗ್ಯದ ಕಡೆ ಗಮನವಿಡಿ. ಮಾತೃ ವರ್ಗದಿಂದ ನಿಮ್ಮ ವ್ಯವಹಾರಗಳಿಗೆ ಸಾಕಷ್ಟು ಧನ ಸಹಾಯವಾಗಲಿದೆ. ಗುರು-ಹಿರಿಯರ ಸೇವೆ ವಿಶೇಷವಾಗಿ ಮಾಡಿ. ಹೆಚ್ಚಿನ ಪುಣ್ಯ ಸಂಪಾದನೆಯಾಗಲಿದೆ. ಮನಸ್ಸು ಅಧ್ಯಾತ್ಮದ ಕಡೆ ತಿರುಗುವುದರಿಂದ ಮನೆವಾರ್ತೆ ಬಗ್ಗೆ ಆಸಕ್ತಿ ಕಡಿಮೆಯಾಗಲಿದೆ. ಸೋಮ, ಗುರು, ಶುಕ್ರ ಶುಭ ದಿನಗಳು.

# ದೇಶಕ್ಕೆ ಕನಿಷ್ಠ 600 ವೈದ್ಯಕೀಯ ಕಾಲೇಜುಗಳು ಬೇಕು : ಗಡ್ಕರಿ

ಪುಣೆ, ಸೆ. 25 – ದೇಶಕ್ಕೆ ಕನಿಷ್ಠ 600 ವೈದ್ಯಕೀಯ ಕಾಲೇಜುಗಳು, 50 ಎಐಐಎಂಎಸ್ ಸಂಸ್ಥೆಗಳು ಹಾಗೂ 200 ಸೂಪರ್ - ಸ್ಪೆಷಾಲಿಟಿ ಆಸ್ಪತ್ರೆಗಳ ಅಗತ್ಯವಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದು, ಆರೋಗ್ಯ ಹಾಗೂ ಶಿಕ್ಷಣ ವಲಯದಲ್ಲೂ ಸೌಲಭ್ಯ ಹೆಚ್ಚಿಸಲು ಖಾಸಗಿ ಸಹಭಾಗಿತ್ವದ ಅಗತ್ಯವಿದೆ ಎಂದಿದ್ದಾರೆ.

ಮಹಾರಾಷ್ಟ್ರದ ಸತಾರಾದ ಕರಾಡ್ ಜಿಲ್ಲೆಯಲ್ಲಿ ಕೊರೊನಾ ವಾರಿಯರ್‌ಗಳಿಗೆ ಆಯೋಜಿಸಲಾಗಿದ್ದ ಸನ್ಮಾನ ಸಮಾರಂಭದಲ್ಲಿ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವ ಗಡ್ಕರಿ ಮಾತನಾಡುತ್ತಿದ್ದರು. ಸಹಕಾರಿ ವಲಯ ಸಹ ವೈದ್ಯಕೀಯ ಸೌಲಭ್ಯ ಕಲ್ಪಿಸಲು ಮುಂದೆ ಬರಬೇಕು ಎಂದವರು ಅಭಿಪ್ರಾಯ ಪಟ್ಟಿದ್ದಾರೆ.


ಒಮ್ಮೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಜೊತೆ ಮಾತನಾಡುತ್ತಿದ್ದಾಗ ವೆಂಟಿಲೇಟರ್ ಕೊರತೆ ಕುರಿತು ಪ್ರಸ್ತಾಪಿಸಿದ್ದೆ. ಆಗ ಅವರು, ದೇಶದಲ್ಲಿ ಎಷ್ಟು ವೆಂಟಿಲೇಟರ್‌ಗಳಿವೆ ಗೊತ್ತೇ? ಎಂದು ಕೇಳಿದ್ದರು. ಆಗ ನಾನು 2.5 ಲಕ್ಷದಷ್ಟಿರಬಹುದು ಎಂದು ಉತ್ತರಿಸಿದ್ದೆ. ಅದಕ್ಕೆ ಪ್ರತಿಕ್ರಿಯಿಸಿದ್ದ ಮೋದಿ, ದೇಶದಲ್ಲಿ ಕೊರೊನಾ ಸೋಂಕು ಹರಡಿದಾಗ ಕೇವಲ 13 ಸಾವಿರ ವೆಂಟಿಲೇಟರ್‌ಗಳಿದ್ದವು ಎಂದಿದ್ದರು.

ಆಕ್ಸಿಜನ್, ಬೆಡ್ ಹಾಗೂ ಇತರೆ ಸೌಲಭ್ಯಗಳ ಕೊರತೆ ಆ ಸಮಯದಲ್ಲಿ ಹೆಚ್ಚಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ವೈದ್ಯರು, ನರ್ಸ್‌ಗಳು ಹಾಗೂ ಪ್ಯಾರಾಮೆಡಿಕಲ್ ಸಿಬ್ಬಂದಿ ನೆರವಾದರು. ಅವರ ಕೆಲಸಕ್ಕೆ ಪ್ರಶಂಸಿಸುತ್ತೇನೆ ಎಂದು ಗಡ್ಕರಿ ತಿಳಿಸಿದ್ದಾರೆ.

# ಹರಿಹರದಲ್ಲಿ ಇಂದು ಕುರುಬ ಸಮಾಜದ ಸಭೆ

ಇದೇ ದಿನಾಂಕ 29 ರಂದು ದಾವಣಗೆರೆಯಲ್ಲಿ ನಮ್ಮನ್ನಗಲಿದ ಕುರುಬ ಸಮಾಜದ ಮುಖಂಡರ ಶ್ರದ್ಧಾಂಜಲಿ ಸಭೆಯನ್ನು ಹಮ್ಮಿಕೊಂಡಿದ್ದು, ಮಾಜಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಇಂದು ಸಂಜೆ 4 ಗಂಟೆಗೆ ಕಾಳಿದಾಸ ವಿದ್ಯಾಸಂಸ್ಥೆಯಲ್ಲಿ ಹರಿಹರ ತಾಲ್ಲೂಕು ಕುರುಬ ಸಮಾಜದ ಸಭೆಯನ್ನು ಸಮಾಜದ ಅಧ್ಯಕ್ಷ ಕೆ.ಜಡಿಯಪ್ಪನವರ ಅಧ್ಯಕ್ಷತೆ ಹಾಗೂ ಶಾಸಕ ಎಸ್.ರಾಮಪ್ಪ ಅವರ ಸಮ್ಮುಖದಲ್ಲಿ ಕರೆಯಲಾಗಿದೆ ಎಂದು ಸಮಾಜದ ಕಾರ್ಯದರ್ಶಿ ಕೆ.ಪಿ.ಗಂಗಾಧರ್ ತಿಳಿಸಿದ್ದಾರೆ.

# ಮೊರಾರ್ಜಿ ಶಾಲೆ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ



**ಹರಪನಹಳ್ಳಿ**

ಹರಪನಹಳ್ಳಿ, ಸೆ.25- ತಾಲ್ಲೂಕಿನ ಶೃಂಗಾರತೋಟದ ಬಳಿ ನಿರ್ಮಾಣವಾಗುತ್ತಿರುವ ನೂತನ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಕಟ್ಟಡ ಕಾಮಗಾರಿಗೆ ಶಾಸಕ ಜಿ. ಕರುಣಾಕರ ರೆಡ್ಡಿ ಭೂಮಿ ಪೂಜೆ ನೆರವೇರಿಸಿದರು.

ಕರ್ನಾಟಕ ಗೃಹ ಮಂಡಳಿ (ದಾವಣಗೆರೆ) ಇಲಾಖೆಯ ಯೋಜನೆಯಡಿಯಲ್ಲಿ 7.85 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ಈ ವಸತಿ ಶಾಲಾ ಕಟ್ಟಡವು ಪ್ರತ್ಯೇಕ ಬಾಲಕ, ಬಾಲಕಿಯರ ಕೊಠಡಿ ಸೇರಿ ಒಟ್ಟು ನಾಲ್ಕು ಹಂತದ ಕೊಠಡಿಗಳನ್ನು ನವೀನ ಮಾದರಿಯಲ್ಲಿ ಒಂದು ವರ್ಷದ ಕಾಲಾವಧಿ ಒಳಗೆ ಮುಗಿಸಬೇಕೆಂದು ಶ್ರೀ ಬಿಲ್ಡರ್ಸ್ ಗುತ್ತಿಗೆದಾರರಿಗೆ ತಿಳಿಸಲಾಗಿದೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರ ಶರಣಪ್ಪ ತಿಳಿಸಿದರು.

ಗ್ರಾಮ ಪಂಚಾಯ್ತಿ ಸದಸ್ಯ ಎಂ. ಬಸವರಾಜ್, ಕಾಮಗಾರಿ ಉಸ್ತುವಾರಿ ದಾದಾಪೀರ್, ಶೃಂಗಾರತೋಟ ಗ್ರಾಮದ ಸಿ. ನಿಂಗರಾಜ್, ಎಸ್.ಎಂ. ಗಿರೀಶ್, ಸಿ. ಸುರೇಶ್, ನಂದಿಬೇವೂರು ರಾಜಪ್ಪ, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾಂಶುಪಾಲ ಚಂದ್ರಶೇಖರ್, ಸಹ ಶಿಕ್ಷಕರಾದ ದುರ್ಗೇಶ್, ಮಾದಾಪುರದ ಟಿ. ಶಿವಣ್ಣ ಇನ್ನಿತರರಿದ್ದರು.

# ನಗರದಲ್ಲಿ ಇಂದು ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ

ದಾವಣಗೆರೆ, ಸೆ.25- ಕಲಾವಿದ ಶಾಂತಯ್ಯ ಪರಡಿಮಠ ಅವರು ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವು ನಾಳೆ ದಿನಾಂಕ 26 ರಿಂದ ಮೂರು ದಿನಗಳ ಕಾಲ ತರಳಬಾಳು ಬಡಾವಣೆಯಲ್ಲಿರುವ ಸ್ವಸ್ತಿ ಆರ್ಟ್ ಗ್ಯಾಲರಿಯಲ್ಲಿ ನಡೆಯಲಿದೆ.

ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಹಿರಿಯ ಚಿತ್ರ ಕಲಾವಿದರೂ, ಉಪನ್ಯಾಸಕರೂ ಆದ ದತ್ತಾತ್ರೇಯ ಭಟ್ ಅವರು, ಭಾನುವಾರ ಬೆಳಿಗ್ಗೆ 10.30ಕ್ಕೆ ಸರ್ವಶಿಕ್ಷಣ ಅಭಿಯಾನ ಉಪ ಯೋಜನೆ ಸಮನ್ವಯ ಅಧಿಕಾರಿ ಮಂಜುನಾಥ ಸ್ವಾಮಿ ಪ್ರದರ್ಶನಕ್ಕೆ ಚಾಲನೆ ನೀಡಲಿದ್ದಾರೆ ಎಂದರು. ಮುಖ್ಯ ಅತಿಥಿಗಳಾಗಿ ಮನೋಹರ್ ಎಸ್.ಚಿಗಟೇರಿ, ಶಿವಕುಮಾರ ಕಣಸೋಗಿ ಆಗಮಿಸಲಿದ್ದು, ಡಾ.ಸಿದ್ದಲಿಂಗಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಇದೇ ಪ್ರಥಮ ಬಾರಿಗೆ ತಾವು ರಚಿಸಿರುವ 25-30 ಕಲಾಕೃತಿಗಳ ಪ್ರದರ್ಶನ ನಡೆಯಲಿರುವುದಾಗಿ ಶಾಂತಯ್ಯ ಪರಡಿಮಠ ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ರವಿ ಶ್ಯಾಮ ಹುದ್ದಾರ ಉಪಸ್ಥಿತರಿದ್ದರು.

# ಗಿಡಮೂಲಿಕೆ ಎಕ್ಕ...

- ಮಮತಾ ನಾಗರಾಜ್, ಪಾರಂಪರಿಕ ವೈದ್ಯೆ, ದಾವಣಗೆರೆ.

ಎಕ್ಕವನ್ನು ಹಿಂದೂಗಳು ದೈವೀಕ ಗಿಡವೆಂದು ಕರೆದರೂ ಅವರಾಗೇ ಬೆಳೆಸುವುದಿಲ್ಲ. ಎಲ್ಲೆಂದರಲ್ಲಿ ತಾನಾಗೇ ಬೆಳೆಯುವ ಅಪಾರ ಔಷಧೀಯ ಗುಣಗಳನ್ನು ಹೊಂದಿರುವ, ಪೂಜೆಗೂ ಉಪಯೋಗಿಸಲ್ಪಡುವ ಈ ಸಸ್ಯದ ಬಗ್ಗೆ ಎಲ್ಲರಿಗೂ ಸಂಪೂರ್ಣ ತಿಳಿವಳಿಕೆ ಇಲ್ಲ. ಆದರೆ, ಭಯಭಕ್ತಿ ಇದೆ. ಸೂರ್ಯನು (ಅದಕ್ಕೆ ಅರ್ಕ ಎಂದು ಈ ಗಿಡದ ಇನ್ನೊಂದು ಹೆಸರು) ಈ ಗಿಡದ ಅಧಿಪತಿ. ಇದನ್ನು ತಂತ್ರ ವಿದ್ಯೆ ಕಲಿತವರು ಬಹಳವಾಗಿ ಉಪಯೋಗಿಸುತ್ತಾರೆ. ಹಲವಾರು ನಂಬಿಕೆ, ಮೂಢನಂಬಿಕೆಗಳು ಈ ಗಿಡದ ಬಗ್ಗೆ ಪ್ರಚಲಿತದಲ್ಲಿದ್ದು, ವೈದ್ಯಕೀಯವಾಗಿ ಸರಿಯಾಗಿ ಬಳಸಿದಲ್ಲಿ ಉತ್ತಮ ಫಲಿತಾಂಶ ಕೊಡುವ ರಹಸ್ಯಮಯ ಗಿಡವಾಗಿದೆ.

ಎಕ್ಕದ ಹಾಲು ಕಣ್ಣಿಗೆ ಬಿದ್ದರೆ ತುಂಬಾ ಅಪಾಯ. ಆದ್ದರಿಂದ ಹೂ ಕೀಳುವಾಗ ತುಂಬಾ ಜಾಗ್ರತೆ ವಹಿಸಿರಿ. ಅಕಸ್ಮಾತ್ ಕಣ್ಣಿಗೆ ಹಾಲು ಬಿದ್ದರೆ ಪ್ರಥಮ ಚಿಕಿತ್ಸೆಯಾಗಿ ತಕ್ಷಣ ವಿಭೂತಿ ಪುಡಿಯನ್ನು ಹಾಕಿ ಹಾಗೂ ಗೋಮೂತ್ರದಿಂದ ತೊಳೆಯಬೇಕು. ಕಣ್ಣು ಉಜ್ಜಬೇಡಿ. ಡಾಕ್ಟರ್ ಬಳಿ ಚಿಕಿತ್ಸೆ ಮಾಡಿಸಿ. ಮಕ್ಕಳಿಗೂ ಇದರ ಬಗ್ಗೆ ತಿಳಿವಳಿಕೆ ನೀಡಿರಿ.

ನೇರಳೆ ಛಾಯೆ ಬಣ್ಣದ ಹೂ ಬಿಡುವ ಗಿಡಕ್ಕಿಂತ ಬಿಳಿ ಎಕ್ಕವನ್ನು ದೈವಿಕ ಕಾರ್ಯಗಳಲ್ಲಿ ಬಳಸುತ್ತಾರೆ. ಗಣಪತಿಗೆ ಬಿಳಿ ಎಕ್ಕ ತುಂಬಾ ಪ್ರೀತಿ ಎನ್ನುವ ನಂಬಿಕೆ. ಬಿಳಿ ಎಕ್ಕದ ಗಿಡದ ಬೇರಿನಲ್ಲಿ ಗಣಪತಿ ರೂಪ ಒಡಮೂಡಿರುತ್ತದೆ. ಗಣಪತಿ ವಾಸಿಸುತ್ತಾನೆ ಎಂಬ ಪ್ರತೀತಿ ಇದೆ. ಹೀಗಾಗಿ ಈ ಗಿಡ ಮನೆಯ ಬಳಿ ಬೆಳೆದಾಗ, ಬೇಡದಿದ್ದರೂ ಕಿತ್ತು ಹಾಕಲು ಹಿಂದೆ ಮುಂದೆ ನೋಡುತ್ತಾರೆ. ಆದರೆ, ಗಣಪತಿ ರೂಪದ ಬೇರು ಇರುವುದಿಲ್ಲ. 4 - 5 ವರ್ಷದ ಹಳೆಯ ಬೇರಿನಿಂದ ಗಣಪತಿ ಪ್ರತಿಮೆ ಮಾಡುತ್ತಾರೆ.

ಎಕ್ಕದ ಬೇರು, ಬೇರಿನ ತೊಗಟೆ, ಎಲೆ, ಹಾಲಿನಂತಹ ದ್ರವ ಮತ್ತು ಹೂಗಳು ಹೀಗೆ ಎಲ್ಲಾ



ಭಾಗಗಳು ಔಷಧೀಯ ಗುಣಗಳನ್ನು ಹೊಂದಿದೆ.


ಎಕ್ಕದ ಎಲೆಯನ್ನು ದೇಹದ ಸರ್ವಾಂಗಗಳಿಗೆ ಸ್ಪರ್ಶಿಸಿ, ಸ್ನಾನ ಮಾಡಿದರೆ ಮೂಳೆ ನೋವು ನಿವಾರಣೆ ಆಗುವುದು. ಈ ಕಾರಣಕ್ಕಾಗಿಯೇ ರಥಸಪ್ತಮಿ ದಿನ ಎಕ್ಕದ ಎಲೆಯ ಸ್ನಾನ ಮಾಡುವುದು.

ಎಕ್ಕವನ್ನು ವಾತ ನಿವಾರಣೆಗೆ, ಯಕೃತ್ ದೋಷ ನಿವಾರಣೆಗೆ, ಉದರ ಸಂಬಂಧಿ ಕಾಯಿಲೆಗಳಿಗೆ ಬಳಸುತ್ತಾರೆ. ಎಕ್ಕದ ಹಾಲನ್ನು ಮೂಲವ್ಯಾಧಿಯ ನಿವಾರಣೆಯಲ್ಲಿ ಬಳಸುತ್ತಾರೆ.

ಮಹಿಳೆಯರ ಬಿಳಿ ಸೆರಗಿನ ದೋಷಕ್ಕೆ ಬಿಳಿ ಎಕ್ಕದ ಹೂವು ಪರಿಣಾಮಕಾರಿಯಾದ ಚಿಕಿತ್ಸೆಯಾಗಿದೆ. ಮಾಸಿಕ ಋತುಸ್ರಾವದಲ್ಲಿ ಏರುಪೇರಾಗುತ್ತಿದ್ದರೆ ಅಥವಾ ಅನಿಯಮಿತವಾಗಿದ್ದಲ್ಲಿ ಎಕ್ಕದ ಹೂವು, ಬೆಲ್ಲ ಸೇರಿಸಿ, ಅರೆದು ಗುಳಿಗೆ ಮಾಡಿಕೊಂಡು, ದಿನಕ್ಕೆ 3 - 4 ಮಾತ್ರೆಯಂತೆ ಸೇವಿಸುವುದು ಉತ್ತಮ. ಬಿಳಿ ಎಕ್ಕದ ಎಲೆಯ ಕಷಾಯ ಸೇವಿಸಿದರೆ ಹೊಟ್ಟೆ ನೋವು ಶಮನವಾಗುವುದು.

ಯಾವುದೇ ಬಗೆಯ ಜ್ವರವಿದ್ದರೆ, ಎಕ್ಕದ ಬೇರನ್ನು ನಿಂಬೆಹಣ್ಣಿನ ರಸದಲ್ಲಿ ಅರೆದು ಸೇವಿಸಿದರೆ ಉಪಶಮನವಾಗುತ್ತದೆ. ಅಜೀರ್ಣವಿದ್ದರೆ ಎಕ್ಕದ ಹೂಗಳಿಗೆ ಒಂದು ಚಿಟಿಕೆ ಉಪ್ಪು ಬೆರೆಸಿ ತಿನ್ನಬೇಕು ಅಥವಾ ಎಕ್ಕದ ಬೇರಿನ ಭಸ್ಮವನ್ನು ಪ್ರತಿ ದಿನ ಬೆಳಿಗ್ಗೆ

# ಸಾಯಿ ಅಕಾಡೆಮಿಯಿಂದ ಪುರಸ್ಕಾರ




ದಾವಣಗೆರೆ, ಸೆ.25- ನಗರದ ಹೆಚ್.ಕೆ.ಆರ್ ವೃತ್ತ ಮತ್ತು ಎಸ್.ನಿಜಲಿಂಗಪ್ಪ ಬಡಾವಣೆಯಲ್ಲಿರುವ ಸಾಯಿ ಅಕಾಡೆಮಿ ವತಿಯಿಂದ ಅಕಾಡೆಮಿಯ ಕಚೇರಿ ಆವರಣದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು.

ಸಂಸ್ಥೆಯು ಪ್ರತಿ ವರ್ಷ ಶೇ.98 ಅಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ 50 ಸಾವಿರ ರೂ. ಪ್ರೋತ್ಸಾಹ ಧನ ಹಾಗೂ ನೆನಪಿನ ಕಾಣಿಕೆ, ಪ್ರಶಸ್ತಿ ಪತ್ರವನ್ನು ನೀಡಿ ಅಭಿನಂದಿಸಲಾಗುತ್ತಿದೆ ಎಂದು ಸಂಸ್ಥೆ ಗೌರವ ಅಧ್ಯಕ್ಷ ದೇವರಮನೆ ನಾಗರಾಜ್ ತಿಳಿಸಿದ್ದಾರೆ.

ಈ ವರ್ಷ ಅಕಾಡೆಮಿಯಲ್ಲಿ ಅಧ್ಯಯನ ಮಾಡಿ, ಶೇ.98.08 (613) ಅಂಕ ಗಳಿಸಿದ ಋತು ಡಿ.ರಾವ್ ಅವರನ್ನು ಸಂಸ್ಥೆ ವತಿಯಿಂದ 50 ಸಾವಿರ ರೂ. ನಗದು ಬಹುಮಾನ, ನೆನಪಿನ ಕಾಣಿಕೆ, ಪ್ರಶಸ್ತಿ ಪತ್ರ ನೀಡಿ ಸಮಾರಂಭದಲ್ಲಿ ಅಭಿನಂದಿಸಲಾಯಿತು. ವಿದ್ಯಾರ್ಥಿನಿಯು ಕನ್ನಡ, ಇಂಗ್ಲಿಷ್, ವಿಜ್ಞಾನದಲ್ಲಿ ಶೇ.100 ರಷ್ಟು ಅಂಕಗಳನ್ನು ಗಳಿಸಿದ್ದಾಳೆ.

ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ಶ್ರೀ ಕನ್ಯಕಾಪರಮೇಶ್ವರಿ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಆರ್.ಜಿ. ಶ್ರೀನಿವಾಸಮೂರ್ತಿ, ಜಿಲ್ಲಾ ಲಯನ್ಸ್ ಉಪ ರಾಜ್ಯಪಾಲ ವೀರಭದ್ರಪ್ಪ, ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್. ಓಂಕಾರಪ್ಪ, ಲಯನ್ಸ್ ಟ್ರಸ್ಟ್ ಕಾರ್ಯದರ್ಶಿ ಅಜ್ಜಂಪುರ ಶೆಟ್ರು ಮೃತ್ಯುಂಜಯ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಅವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಸಂಸ್ಥೆ ಗೌರವ ಅಧ್ಯಕ್ಷ ದೇವರಮನೆ ನಾಗರಾಜ್, ಕಾರ್ಯದರ್ಶಿ ಜಿ.ಎನ್.ಕುಮಾರ್, ನಿರ್ದೇಶಕರಾದ ಶ್ವೇತಾ ಮತ್ತಿತರರು ಕಾರ್ಯಕ್ರಮಕ್ಕೆ ಆಗಮಿಸಿದ ಅತಿಥಿ ಗಣ್ಯರನ್ನು ಸ್ವಾಗತಿಸಿದರು.

# ಹರಿಹರದಲ್ಲಿ ದೂಡಾ ಅಧ್ಯಕ್ಷರಿಂದ ಕಾಮಗಾರಿ ವೀಕ್ಷಣೆ




ದಾವಣಗೆರೆ, ಸೆ.25 - ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದೇವರಮನಿ ಶಿವಕುಮಾರ್ ಅವರು ಹರಿಹರ ನಗರ ಸಭೆ 4ನೇ ವಾರ್ಡಿನ ಲೇಬರ್ ಕಾಲೋನಿ ಪಾರ್ಕ್ ಹಾಗೂ ವಿದ್ಯಾನಗರದ ಉದ್ಯಾನವನಕ್ಕೆ ಭೇಟಿ ನೀಡಿ, ಪ್ರಗತಿಯಲ್ಲಿರುವ ಕಾಮಗಾರಿ ವೀಕ್ಷಿಸಿದರು.

ಈ ಸಂದರ್ಭದಲ್ಲಿ ಪ್ರಾಧಿಕಾರದ ಸದಸ್ಯರಾದ ಗೌರಮ್ಮ ಪಾಟೀಲ್, ಮಾರುತಿರಾವ್ ಘಾಟ್ಗೆ, ಆರ್.ಲಕ್ಷ್ಮಣ, ಬಾತಿ ಚಂದ್ರಶೇಖರ್, ಮಾಜಿ ಸದಸ್ಯ ರಾಜು ರೋಖಡೆ, ನಗರ ಸಭೆ ಸದಸ್ಯೆ ಅಶ್ವಿನಿ ಕೃಷ್ಣ, ಆಟೋ ಹನುಮಂತಪ್ಪ

ಪ್ರಾಧಿಕಾರದ ಸಹಾಯಕ ಕಾರ್ಯಪಾಲಕ ಅಭಿಯಂತರ ಶ್ರೀಕರ್, ಕಿರಿಯ ಅಭಿಯಂತರ ಅಕ್ಷತ ಕೆ. ಟಿ., ಸೃಜಯ, ಉಪಸ್ಥಿತರಿದ್ದರು.

# ಡೂನ್ ಶಾಲೆಯಿಂದ ರೆಡ್ ಕ್ರಾಸ್ ಸಂಸ್ಥೆಗೆ ಆಂಬ್ಯುಲೆನ್ಸ್ ಕೊಡುಗೆ




ದಾವಣಗೆರೆ, ಸೆ. 25- ಡೂನ್ ಸ್ಕೂಲ್ ಡೆಹ್ರಾಡೂನ್ ಹಳೆ ವಿದ್ಯಾರ್ಥಿಗಳ ಸಂಘದ ವತಿಯಿಂದ ದಾವಣಗೆರೆ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಸೇವೆಗೆ ಆಂಬ್ಯುಲೆನ್ಸ್ ಕೊಡುಗೆಯಾಗಿ ನೀಡಿದರು.

ಹಳೆಯ ವಿದ್ಯಾರ್ಥಿಗಳ ಸಂಘದ ಡಾ. ಸುಹೈಲ್ ಖಾನ್, ಡಿ.ಕೆ. ಸಿಂಗ್ ಇವರುಗಳು ರೆಡ್ ಕ್ರಾಸ್ ಸಂಸ್ಥೆಯ ಛೇರ್ಮನ್ ಡಾ. ಶಿವಕುಮಾರ್ ಅವರಿಗೆ ಆಂಬ್ಯುಲೆನ್ಸ್ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ರೆಡ್ ಕ್ರಾಸ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಉಮೇಶ್ ಶೆಟ್ಟಿ, ಕಾರ್ಯದರ್ಶಿ ಡಿ.ಎಸ್. ಸಾಗರ್, ನಿರ್ದೇಶಕರುಗಳಾದ ಇನಾಯತ್ ವುಲ್ಲಾ, ಡಿ. ಎನ್. ಶಿವಾನಂದ, ಎ. ಜೆ. ರವಿಕುಮಾರ್, ಕೆ.ಕೆ. ನಾಗರಾಜ್, ಗುರುಪ್ರಸಾದ್, ಅಮರೇಶ್, ಭರತ್ ಮತ್ತಿತರರು ಉಪಸ್ಥಿತರಿದ್ದರು.

# ಯೋಜನೆಗಳ ಸಮರ್ಪಕ ಬಳಕೆಗೆ ಸಂಸದರು ಮಾದರಿ




**ಬಾಡಾದ ಆನಂದರಾಜ್ ಪ್ರಶಂಸೆ**

ದಾವಣಗೆರೆ, ಸೆ.25- ಕೇಂದ್ರ ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಂಡು ಅಭಿವೃದ್ಧಿ ಕಾರ್ಯಗಳನ್ನು ಮಾಡಿರುವುದರಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಮಾದರಿಯಾಗಿದ್ದಾರೆ ಎಂದು ಶೋಷಿತ ವರ್ಗಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಬಾಡದ ಆನಂದರಾಜ್ ಅಭಿಪ್ರಾಯಿಸಿದ್ದಾರೆ.

ನಗರದ ಜಿಎಂಐಟಿ ಅತಿಥಿ ಗೃಹದಲ್ಲಿ ಮೊನ್ನೆ ನಡೆದ ಸೌಹಾರ್ದ ಕಾರ್ಯಕ್ರಮದಲ್ಲಿ ಸಂಸದರನ್ನು ಅಭಿನಂದಿಸಿ ಮಾತನಾಡಿದ ಅವರು, ಸ್ಮಾರ್ಟ್ ಸಿಟಿ ಯೋಜನೆಯಡಿ ದಾವಣಗೆರೆ ಜಿಲ್ಲೆಯನ್ನು ಸೇರಿಸಿ, ಸರ್ವತೋಮುಖವಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಪ್ರಶಂಸಿಸಿದರು.

ಚಿತ್ರದುರ್ಗ-ದಾವಣಗೆರೆ- ಹುಬ್ಬಳ್ಳಿವರೆಗೆ 6 ಪಥದ ರಾಷ್ಟ್ರೀಯ ಹೆದ್ದಾರಿಗೆ ಕೇಂದ್ರದಿಂದ 3 ಸಾವಿರ ಕೋಟಿ ಅನುದಾನ ತರುವ ಮೂಲಕ ಹೊರ ರಾಜ್ಯಗಳಿಗೆ ಹೋಗುವ ವಾಹನ ಸವಾರರಿಗೆ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ. ಚಿತ್ರದುರ್ಗ ಹಾಗೂ ಹರಿಹರ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಆಕ್ಸಿಜನ್ ಪೂರೈಕೆ ಘಟಕ ಸ್ಥಾಪಿಸಿ, ಜೀವ ಉಳಿಸುವ ಕೆಲಸ ಮಾಡಿದ್ದಾರೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ನೇಕಾರ ಸಮುದಾಯದ ಯುವ ಮುಖಂಡ ಸಿ.ವಿ. ನರೇಂದ್ರಕುಮಾರ್, ರೇಣುಕ ಶ್ರೀನಿವಾಸ್, ಚನ್ನಗಿರಿಯ ಗಿರೀಶ್, ಮಂಜುನಾಯ್ಕ್ ಮತ್ತಿತರರು ಇದ್ದರು.

ವೈಧೀಶ್ವರನ್ ಕೋವಿಲ್ ಶಿವನಾಡಿ
ಜ್ಯೋತಿಷ್ಯಾಲಯ
ನಿಮ್ಮ ಹೆಬ್ಬೆಟ್ಟಿನ ಆಧಾರದ ಮೇಲೆ ನಿಮ್ಮ ಭವಿಷ್ಯದಲ್ಲಿ ಬರುವ ಎಲ್ಲಾ ವಿಷಯಗಳನ್ನೂ ಫೋನಿನ ಮುಖಾಂತರ ಮತ್ತು ನೇರ ಭೇಟಿಯಾಗಿ ನಿಖರವಾಗಿ ನುಡಿಯುವರು. ಇಂದೇ ಭೇಟಿ ಕೊಡಿ.
ಎ. ರಾಮಲಿಂಗಸ್ವಾಮಿ S/O. ಎಸ್.ವಿ. ಆರ್ಮುಗಂ
#1962/5, ಪ್ರಶಾಂತ ನಿಲಯ, 1ನೇ ಮೇನ್, 5ನೇ ಕ್ರಾಸ್, ವಿನಾಯಕ ಬಡಾವಣೆ, ವಿದ್ಯಾನಗರ, ದಾವಣಗೆರೆ-577 005.
ಫೋನ್ : 95917 21017, 99722-65555
ಬೆಳಿಗ್ಗೆ 9.30 ರಿಂದ ಸಂಜೆ 7ರ ವರೆಗೆ.

SHREE VEERABHADRESHWARA CONSULTANCY SERVICES
CIVIL ENGINEERS AND DEVELOPERS
# 80/18, Opp. P.J. Lodge, A.V.K. College Road, P.J. Extension, DAVANGERE-577 002.
Cell: 9916173399, 9343277422
WE OFFER THE FOLLOWING SERVICE :
✦ CONSTRUCTION CONSULTANTS
✦ ARCHITECTURAL VASTU PLAN
✦ ESTIMATION & VALUATION
✦ 3D VIEW & INTERIOR DESIGN .
✦ ASSISTANCE FOR BUILDING LICENSE PLAN
✦ ASSISTANCE FOR LAY OUT DESIGN & LAND DEVELOPMENT
✦ A4 TO AO PLOTTER PRINTS & BLUE PRINTS

**ಸಾರ್ವಜನಿಕ ಪ್ರಕಟಣೆ**

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ದಾವಣಗೆರೆ ತಾಲ್ಲೂಕು ಸಬ್‌ರಿಜಿಸ್ಟ್ರಾರ್‌ವವರ ಆಫೀಸ್ ಅಧಿಕಾರಕ್ಕೆ ಸೇರಿದ ದಾವಣಗೆರೆ ತಾಲ್ಲೂಕು ಕಸಬಾ ಸಮ್ಮತ್ತು ಯರಗುಂಟೆ ಗ್ರಾಮದ ಖಾನೇಷುಮಾರಿ ನಂ. 191 ರಲ್ಲಿ ವಿಂಗಡಿಸಿರುವ ಸೈಟುಗಲ ಪೈಕಿ ಸೈಟ್ ನಂ.58 ಅಳತೆ 30x56, 6+57.6/2 ಅಡಿ ಖಾಲಿ ಜಾಗಕ್ಕೆ ಚಕ್ಕುಬಂದಿ: ಪೂರ್ವಕ್ಕೆ: ಇದೇ ನಂಬರ್ ಪೈಕಿ ಜಾಗ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ: ಸೈಟ್ ನಂ. 56ನೇ ಜಾಗ, ದಕ್ಷಿಣ : ಸೈಟ್ ನಂ.60ನೇ ಜಾಗ ಈ ಮಧ್ಯದ ನಿವೇಶನವನ್ನು ಶ್ರೀಮತಿ ಗೀತಾ ಭೀಮಣ್ಣ ತಹಶೀಲ್ದಾರ್ ಇವರು ಖರೀದಿಸಿದ್ದು, ಇದೀಗ ಸದರಿ ಸೊತ್ತನ್ನು ಖರೀದಿಸಲು ಶ್ರೀ ಸೈಯದ್ ಷಾ ಸಾಹೇಬ್ ಎಸ್. ಪಾಟೀಲ್ ಬಿನ್ ಸೈಯದ್ ಅಹಮದ್ ಇವರು ರೆಪ್ಕೋ ಹೋಂ ಫೈನಾನ್ಸ್ ಲಿಮಿಟೆಡ್ ದಾವಣಗೆರೆ ಶಾಖೆ ಇವರಲ್ಲಿ ಅಡಮಾನ ಸಾಲದ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿರುತ್ತಾರೆ.
ಆದ್ದರಿಂದ ಸದರಿ ಸೊತ್ತಿನ ಮೇಲೆ ಯಾವುದಾದರೂ ವ್ಯಕ್ತಿಗಳಿಗಾಗಲೀ, ಹಣಕಾಸು ಸಂಸ್ಥೆಗಳಿಗಾಗಲೀ, ಯಾವುದೇ ವಿಧದ ಹಕ್ಕಿದ್ದಲ್ಲಿ , ಹೊಣೆಗಾರಿಕೆಗಳಿದ್ದಲ್ಲಿ, ಪಾಲುದಾರಿಕೆ ಇದ್ದಲ್ಲಿ, ಅಡವಿನ ಅಧಿಕಾರವಿದ್ದಲ್ಲಿ ಅಥವಾ ಯಾವುದೇ ರೂಪದ ತಕರಾರುಗಳಿದ್ದಲ್ಲಿ ಅವರು ತಮ್ಮ ಆಕ್ಷೇಪಣೆಗಳನ್ನು ದೃಢೀಕರಿಸುವ ದಾಖಲೆ ಪತ್ರಗಳೊಂದಿಗೆ ರೆಪ್ಕೋ ಹೋಂ ಫೈನಾನ್ಸ್ ಲಿಮಿಟೆಡ್ ದಾವಣಗೆರೆ ಶಾಖೆಗಾಗಲೀ ಈ ಕೆಳಗೆ ಸಹಿ ಮಾಡಿರುವವರಿಗೆ ಈ ಪ್ರಕಟಣೆ ಪ್ರಕಟವಾದ ಏಳು (7) ದಿನಗಳೊಳಗಾಗಿ ಸಲ್ಲಿಸಬೇಕೆಂದು ಕೋರಲಾಗಿದೆ.

ದಾವಣಗೆರೆ
ದಿನಾಂಕ: 23.09.2021

**ಶಾಮನೂರು ಪ್ರಕಾಶ್**, ವಕೀಲರು
2159/2, 4ನೇ ಮುಖ್ಯರಸ್ತೆ, ಎಂ.ಸಿ.ಸಿ. ಎ ಬ್ಲಾಕ್, ದಾವಣಗೆರೆ
ಮೊ: 94495 12232

**ಸಾರ್ವಜನಿಕ ಪ್ರಕಟಣೆ**

ದಿವಂಗತ ರಹೀಂ ಖಾನ್ ಇವರ ಮಕ್ಕಳಾದ ಮಹಬೂಬ್ ಖಾನ್, ಗೌಸ್ ಖಾನ್ ಮತ್ತು ಇವರ ಮಕ್ಕಳಾದ ಶ್ರೀಮತಿ ಯಾಸ್ಮೀನ್ ಖಾನಂ ಕೋಂ ಅಮಜದ್‌ವುಲ್ಲಾ ಖಾನ್, ಹನೀಫ್ ಖಾನ್, ಜಮಾಲ್ ಖಾನ್, ಜಾಫರ್ ಖಾನ್ ಇವರಿಗೆ ಸೇರಿದ ದಾವಣಗೆರೆ ಸಬ್ ರಿಜಿಸ್ಟಾರ್ ಕಚೇರಿ ಅಧಿಕಾರಕ್ಕೆ ಒಳಪಟ್ಟ ದಾವಣಗೆರೆ ಕಸಬಾ ಹೋಬಳಿ ದೊಡ್ಡ ಬೂದಿಹಾಳ ಗ್ರಾಮದ ಸರ್ವೇ ನಂಬರ್ 69/4 ರ ವಿಸ್ತೀರ್ಣ ಎಕರೆ ಒಂದು ಗುಂಟೆ ಇಪ್ಪತ್ತೊಂದು (01-21) ವುಳ್ಳ ಜಮೀನು ಮತ್ತು ಇದಕ್ಕೆ ಲಗತ್ತಾದ ರಿ.ಸರ್ವೆ ನಂಬರ್ 70/4ರಲ್ಲಿ ರಹೀಂ ಖಾನ್ ಇವರ ಹೆಸರಿಗೆ ಖಾತೆ ಇರತಕ್ಕ ಜಮೀನಿನ ವಿಸ್ತೀರ್ಣ ಎಕರೆ ಇಲ್ಲಾ ಗುಂಟೆ ಇಪ್ಪತ್ತೈದು (00-25) ವುಳ್ಳ ಜಮೀನು ಈ ಎರಡು ಜಮೀನುಗಳ ಒಟ್ಟು ವಿಸ್ತೀರ್ಣ ಎಕರೆ ಎರಡು ಗುಂಟೆ ಆರು (02-06) ವುಳ್ಳ ಜಮೀನು ದಾವಣಗೆರೆ ರಜಾವುಲ್ ಮುಸ್ತಾಫಾ ನಗರ ವಾಸಿ ಕೆ. ಇಸ್ಮಾಯಿಲ್ ಸಾಬ್ ಬಿನ್ ಲೇಟ್ ಖ್ವಾಜಾ ಸಾಬ್ ಹಾಗೂ ದಾವಣಗೆರೆ ಎಸ್.ಎಸ್.ಎಂ ನಗರ ವಾಸಿ ಮೊಹಮ್ಮದ್ ಫಾರೂಕ್ ಬಿನ್ ಲೇಟ್ ನಜೀರ್ ಸಾಬ್ ಇವರುಗಳು ಜಂಟಿಯಾಗಿ ಜಮೀನಿನ ಶುದ್ಧ ಕ್ರಯದ ಕರಾರು ಮಾಡಿಕೊಂಡಿರುತ್ತೇವೆ. ಈ ಆಸ್ತಿಗೆ ಸಂಬಂಧಿಸಿದಂತೆ ಏನಾದರೂ ತಂಟೆ ತಕಾರರುಗಳಿದ್ದರೆ ಈ ಕೆಳಗಿರುವ ವ್ಯಕ್ತಿಗಳನ್ನು ಸಂಪರ್ಕಿಸಲು ಕೋರಲಾಗಿದೆ.

**ಕೆ.ಇಸ್ಮಾಯಿಲ್,** 98442 05736
**ಮೊಹಮ್ಮದ್ ಫಾರೂಕ್** 90602 78685
**ಅಬ್ದುಲ್ ಘನಿ** 98443 34892

# ಹಾಸ್ಯ ದರ್ಬಾರ್‌ನಲ್ಲಿ ಎಸ್ಸೆಸ್ ಹಾಗೂ ರೇಣುಕಾಚಾರ್ಯ ದಂಪತಿಗೆ ಸನ್ಮಾನ



ದಾವಣಗೆರೆ, ಸೆ.25- ಸಿರಿಕನ್ನಡ ವಾಹಿನಿ ವತಿಯಿಂದ ನಗರದ ಬಿಐಇಟಿ ಕಾಲೇಜು ಆವರಣದಲ್ಲಿರುವ ಎಸ್. ಎಸ್. ಮಲ್ಲಿಕಾರ್ಜುನ ಕಲ್ಚರಲ್ ಸೆಂಟರ್‌ನಲ್ಲಿ ಹಾಸ್ಯ ದರ್ಬಾರ್ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಹಾಸ್ಯ ಚಕ್ರವರ್ತಿಗಳೆಂದೇ ಖ್ಯಾತಿಯಾದ ಪ್ರಾಣೇಶ್, ಮುಖ್ಯಮಂತ್ರಿ ಚಂದ್ರು, ಎಂ.ಎಸ್. ನರಸಿಂಹಮೂರ್ತಿ, ದುಂಡಿರಾಜ್, ಸುಧಾ ಬರಗೂರ್, ಯಶವಂತ್ ಸರ್‌ದೇಶ್ ಪಾಂಡೆ, ಮಿಮಿಕ್ರಿ ದಯಾನಂದ್ ಗುಂಡೂರಾವ್ ಮುಂತಾದವರು ಬಹುದಿನಗಳ ನಂತರ ನಗರದ ಜನತೆಗೆ ಹಾಸ್ಯ ಉಣಬಡಿಸಿದರು.

ಇದೇ ವೇಳೆ ಸಿರಿಕನ್ನಡ ವಾಹಿನಿಯಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು ಸನ್ಮಾನಿಸಲಾಯಿತು. ಕೋವಿಡ್ ಸಂಕಷ್ಟದ ಸಮಯದಲ್ಲಿ ಜನರಿಗೆ ಉಚಿತವಾಗಿ ಲಸಿಕೆ ವ್ಯವಸ್ಥೆ ಮಾಡುವ ಮೂಲಕ ದೇಶಕ್ಕೆ ಮಾದರಿಯಾದ ಶಾಸಕ ಡಾ.ಶಾಮನೂರು ಶಿವಶಂಕರಪ್ಪ, ಕೋವಿಡ್ ವಾರಿಯರ್ ಆಗಿ ಕೊರೊನಾ ಸೋಂಕಿತರಲ್ಲಿ ಆತ್ಮವಿಶ್ವಾಸ ತುಂಬುವಲ್ಲಿ ಶ್ರಮಿಸಿದ ಶಾಸಕ ಎಂ.ಪಿ. ರೇಣುಕಾಚಾರ್ಯ ದಂಪತಿ, ಕೈಗಾರಿಕೋದ್ಯಮಿ ಅಥಣಿ ಎಸ್. ವೀರಣ್ಣ ಅವರುಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ರಾಜ್ಯ ಸರ್ಕಾರದಿಂದ ಉತ್ತಮ ಕೃಷಿಕ ಪ್ರಶಸ್ತಿ ಪಡೆದ ಹಾಲುವರ್ತಿ ಗ್ರಾಮದ ಹೆಚ್.ಎಂ. ದ್ಯಾವಪ್ಪ, ಪ್ರಾಯೋಗಿಕ ಶಿಕ್ಷಣ ಅಭ್ಯಾಸದ ಮೂಲಕ ಜಿಲ್ಲೆಯಲ್ಲಿ ಹೆಸರು ಮಾಡಿದ್ದ ಎಲೆಬೇತೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿಜ್ಞಾನ ಶಿಕ್ಷಕಿ ಅನ್ನಪೂರ್ಣ ಹಾಗೂ ಎಸ್ಸೆಸ್ಸೆಲ್ಸಿಯಲ್ಲಿ 625 ಅಂಕ ಪಡೆದ ಸಿದ್ಧಗಂಗಾ ಶಾಲೆಯ ವಿದ್ಯಾರ್ಥಿಗಳಾದ ಅನುಷಾ ಗ್ರೇಸ್ ಡಿ.ಸಿ. ವಿಜೇತ ಬಿ., ಇವರುಗಳನ್ನೂ ಸನ್ಮಾನಿಸಿ ಗೌರವಿಸಲಾಯಿತು.

# ಮೊಬೈಲ್ ಟವರ್ ಹಾಕುವ ನೆಪ : ವಂಚನೆ

ದಾವಣಗೆರೆ, ಸೆ.25- ಮೊಬೈಲ್ ಟವರ್ ಹಾಕುವ ನೆಪದಲ್ಲಿ ಸಮಾಜ ಸೇವಕರೋರ್ವರಿಗೆ ಆನ್ ಲೈನ್ ಮುಖಾಂತರ 23 ಲಕ್ಷದ 40 ಸಾವಿರದ 997 ರೂ. ವಂಚಿಸಿರುವ ಬಗ್ಗೆ ಇಲ್ಲಿನ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ ಸರಸ್ವತಿ ಬಡಾವಣೆಯ ಹೆಚ್.ಎಂ. ರಾಜು ಎಂಬುವರ ಮೊಬೈಲ್ ನಂಬರ್ ಗೆ ಜೂನ್ 30ರಂದು ಅಪರಿಚಿತರು ಸಂದೇಶ ಕಳುಹಿಸಿದ್ದು, ಅದರಲ್ಲಿದ್ದ ಜಿಯೋ ಟವರ್ ಅಳವಡಿಕೆಗೆ ಅರ್ಜಿ ಆಹ್ವಾನ ಎಂಬ ಸಂದೇಶವನ್ನೇ ನಂಬಿ, ಸಂದೇಶ ಬಂದಿದ್ದ ದೂರವಾಣಿಗೆ ಕರೆ ಮಾಡಿದಾಗ, ಅಪರಿಚಿತನು ಕರೆ ಸ್ವೀಕರಿಸಿ ತಾನು ರಾಕೇಶ್ ಎಂದು ಪರಿಚಯ ಮಾಡಿಕೊಂಡು ತಾನು ಜಿಯೋ ಕಂಪನಿಯ ನೌಕರನೆಂದು ತಿಳಿಸಿದ್ದು, ನಿಮ್ಮ ಜಮೀನು ಅಥವಾ ಮನೆಯ ಮಹಡಿಯ ಮೇಲೆ ಟವರ್ ಹಾಕಿ ಕೊಡುವುದಾಗಿ ಹೇಳಿದ್ದಾನೆ. ಈತನ ಮಾತನ್ನೇ ನಿಜವೆಂದು ಭಾವಿಸಿ, ಗಾಂಧಿನಗರ ಗ್ರಾಮದಲ್ಲಿ ತಂದೆಯ ಹೆಸರಿನಲ್ಲಿರುವ ಜಮೀನಿನಲ್ಲಿ ಟವರ್ ಹಾಕಿಸಬೇಕೆಂದಿದ್ದಾರೆ. ಇದನ್ನೇ ಬಂಡ ವಾಳವಾಗಿ ಸಿಕೊಂಡ ವಂಚಕನು ಜಮೀನಿನ ದಾಖಲಾತಿಗಳನ್ನು ವಾಟ್ಸಾಪ್ ಮುಖಾಂತರ ಕಳುಹಿಸಲು ತಿಳಿಸಿದ್ದು, ಅಂತೆಯೇ ಆತನಿಗೆ ಕಳುಹಿಸಿದ್ದಾರೆ. ಅಲ್ಲದೇ ಈತ ತಿಳಿಸಿದಂತೆ ಟವರ್ ಇನ್‌ಸ್ಟಾಲೇಷನ್‌ಗಾಗಿ ನೋಂದಣಿ ಶುಲ್ಕ 1,100 ರೂ. ಆನ್ ಲೈನ್ ಮುಖಾಂತರ ಕಳುಹಿಸಿದ್ದು, ನಂತರ ಜುಲೈ 16 ರಂದು ಪೋಸ್ಟ್ ಮುಖಾಂತರ 100 ರೂ. ಮುಖ ಬೆಲೆಯ ಬಾಂಡ್ ಪೇಪರ್ ಬಂದಿದ್ದು, ಟವರ್ ಅಳವಡಿಕೆಯ ಅಗ್ರಿಮೆಂಟ್ ಎಂದಿತ್ತು.

ಜುಲೈ 17 ರಂದು ಕರೆ ಮಾಡಿ ಕೇಳಿದಾಗ ಈಗಾಗಲೇ ಜಿಯೋ ಟವರ್ ಇನ್‌ಸ್ಟಾಲೇಷನ್ ಒಪ್ಪಂದ ಕಾರಣ ಪತ್ರ ತಲುಪಿದೆ. ಅದರಂತೆ ಪ್ರಾರಂಭಿಸಿದ್ದರಿಂದ ನೀವು ಪರವಾನಿಗೆ ಶುಲ್ಕ ಸೇರಿದಂತೆ ನಾನಾ ಶುಲ್ಕಗಳ ಕಟ್ಟುವಂತೆ ಹೇಳಿ ಒಟ್ಟು 23 ಲಕ್ಷದ 40 ಸಾವಿರದ 997 ರೂ. ವಂಚಿಸಿರುವುದಾಗಿ ದೂರಿನಲ್ಲಿ ತಿಳಿಸಲಾಗಿದೆ.


# ಮಹಿಳಾ ಪ್ರಥಮ ದರ್ಜೆ ಕಾಲೇಜಿಗೆ ಬಸ್

## ಶಾಸಕ ರವೀಂದ್ರನಾಥ್ ಭರವಸೆ, ಶ್ರದ್ಧೆಯಿಂದ ಓದಲು ವಿದ್ಯಾರ್ಥಿಗಳಿಗೆ ಸಲಹೆ

ದಾವಣಗೆರೆ, ಸೆ.25- ಮಹಾನಗರ ಪಾಲಿಕೆ ವತಿಯಿಂದ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಡಿ ನಗರದ ಮಹಿಳಾ ಪ್ರಥಮ ದರ್ಜೆ ಕಾಲೇಜುಗಳಿಗೆ ಡೆಸ್ಕ್‌ಗಳನ್ನು ವಿತರಿಸುವ ಕಾರ್ಯಕ್ರಮಕ್ಕೆ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ.ರವೀಂದ್ರನಾಥ್ ಚಾಲನೆ ನೀಡಿದರು.

ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಶಾಸಕ ರವೀಂದ್ರನಾಥ್, ವಿದ್ಯಾರ್ಥಿಗಳಿಗಾಗಿ ಸರ್ಕಾರ ಸಾಕಷ್ಟು ಹಣ ವೆಚ್ಚ ಮಾಡಿ, ಸೌಕರ್ಯ ಕಲ್ಪಿಸುತ್ತಿದೆ. ನಿಷ್ಠೆಯಿಂದ ಓದಿ ಹೆತ್ತವರಿಗೆ, ಕಾಲೇಜಿಗೆ, ಜಿಲ್ಲೆಗೆ ಉತ್ತಮ ಹೆಸರು ತರಬೇಕು ಎಂದು ಕಿವಿ ಮಾತು ಹೇಳಿದರು.

ಮಹಿಳಾ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕಾಲೇಜಿನ ಮುಂದೆಯೇ ಹಾದು ಹೋಗುವಂತೆ ನಗರ ಸಾರಿಗೆ ಬಸ್ ಸಂಚಾರ ಕಲ್ಪಿಸಲಾಗುವುದು ಎಂದು ಇದೇ ಸಂದರ್ಭದಲ್ಲಿ ಶಾಸಕರು ಹೇಳಿದರು.




ಮಹಿಳಾ ಪ್ರಥಮ ದರ್ಜೆ ಕಾಲೇಜುಗಳಿಗೆ ನೀಡಲಾದ ಹೊಸ ಡೆಸ್ಕ್‌ಗಳ ಮೇಲೆ ವಿದ್ಯಾರ್ಥಿಗಳಂತೆ ಕುಳಿತ ಸಂಸದರು, ಶಾಸಕರು, ಪಾಲಿಕೆ ಮೇಯರ್ ಹಾಗೂ ಸದಸ್ಯರು, ದೂಡಾ ಅಧ್ಯಕ್ಷರು ಮತ್ತು ಜಿಲ್ಲಾಧಿಕಾರಿಗಳು ತಮ್ಮ ವಿದ್ಯಾರ್ಥಿ ಜೀವನ ನೆನೆದು ಖುಷಿ ಪಟ್ಟರು.

125 ಸ್ಟೀಲ್ ಡೆಸ್ಕ್‌ಗಳನ್ನು, ಸಿಬ್ಬಂದಿಗಳಿಗೆ 20 ಟೇಬಲ್, 50 ಮಡಚಲ್ಪಡುವ ಕುರ್ಚಿಗಳು, 5 ಕಂಪ್ಯೂಟರ್ ಟೇಬಲ್, 20 ಲೈಬ್ರರಿಯಲ್ಲಿ ಬಳಕೆಗೆ ಓದುವ ಟೇಬಲ್‌ಗಳು, 2 ನ್ಯೂಸ್ ಪೇಪರ್ ಸ್ಟ್ಯಾಂಡ್, ಪ್ರಯೋಗಾಲಯಕ್ಕಾಗಿ 105 ಸ್ಟೂಲ್‌ಗಳು, ಫೈಬರ್ ಕುರ್ಚಿಗಳು ಸೇರಿದಂತೆ ವಿವಿಧ ಬಗೆಯ ಸುಮಾರು 80 ಲಕ್ಷ ರೂಪಾಯಿಯ ವಸ್ತು ಹಾಗೂ ಉಪಕರಣಗಳನ್ನು ಕಾಲೇಜಿಗೆ ನೀಡಲಾಯಿತು.

ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಉಪ ಮೇಯರ್ ಶಿಲ್ಪ ಜಯಪ್ರಕಾಶ್, ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷರುಗಳಾದ ಕೆ.ಪ್ರಸನ್ನ ಕುಮಾರ್, ಗೀತಾ ದಿಳ್ಯೆಪ್ಪ, ಸದಸ್ಯ ಶಿವನಗೌಡ ಟಿ.ಪಾಟೀಲ್, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರಾದ ದಿಳ್ಯೆಪ್ಪ ಬಿ., ಡಿ.ಎಸ್. ಶಿವಶಂಕರ್, ಪ್ರಾಂಶುಪಾಲರಾದ ಪ್ರೊ.ಎ.ಎಸ್. ಶೈಲಜಾ ಇತರರು ಉಪಸ್ಥಿತರಿದ್ದರು.

# ತರಳಬಾಳು ಕಾಲೇಜಿನಲ್ಲಿ ಕಾರ್ಯಾಗಾರ



ದಾವಣಗೆರೆ, ಸೆ.25- ನಗರದ ತರಳಬಾಳು ಪಿಯು ಕಾಲೇಜಿನಲ್ಲಿ ವಾಣಿಜ್ಯ ವಿದ್ಯಾರ್ಥಿಗಳಿಗೆ ವಾಣಿಜ್ಯ ವಿಭಾಗಕ್ಕೆ ಸಂಬಂಧಿಸಿದಂತೆ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಮಾಹಿತಿ ನೀಡುವ ಕಾರ್ಯಾಗಾರ ನಡೆಯಿತು.

ಫೌಂಡೇಷನ್ ಕೋರ್ಸ್‌ನಲ್ಲಿ ಬರುವ ವಿವಿಧ ವಿಷಯಗಳ ಮಾಹಿತಿಗಳನ್ನು ಪಿಪಿಟಿ ಪ್ರೆಸೆಂಟೇಷನ್ ಮೂಲಕ ಕಾಲೇಜು ಪ್ರಾಂಶುಪಾಲ ಡಾ. ಹೆಚ್. ಎನ್. ಪ್ರದೀಪ್ ನೀಡಿದರು.

ಪೋಷಕರ ಪರವಾಗಿ ಉದ್ಯಮಿ ಬಕ್ಕೇಶ್ ಮಾತನಾಡಿದರು. ಪ್ರಾಂಶುಪಾಲ ಕುಮಾರ್ ಹಿಂಡಸಗಟ್ಟೆ ಅವರ ಗೌರವ ಉಪಸ್ಥಿತಿ ಹಾಗೂ ಹಿರಿಯ ಉಪನ್ಯಾಸಕ ಕೆ.ಕೆ. ವಜ್ರೇಶಿ ಅವರು ಪೋಷಕರ ಅಭಿಪ್ರಾಯ ಸಂಗ್ರಹಿಸಿದರು.

ಪಿ. ಅಮೃತ, ಮೇಘನಾ ಹಾಗೂ ಪಲ್ಲವಿ ಪ್ರಾರ್ಥಿಸಿದರು. ವಾಣಿಜ್ಯ ವಿಭಾಗದ ಉಪನ್ಯಾಸಕ ಪಿ.ಎಸ್. ರಘುನಾಥ್ ಸ್ವಾಗತಿಸಿದರು. ಎಂ.ಕೆ. ಬಸವರಾಜ್ ವಂದಿಸಿದರು. ಆರ್.ಎನ್. ನಯನ ನಿರೂಪಿಸಿದರು.

# ಗಿಡಮೂಲಿಕೆ ಎಕ್ಕ...

**(5ನೇ ಪುಟದಿಂದ)** ಪ್ರತಿ ದಿನ ಬೆಳಿಗ್ಗೆ ಮತ್ತು ರಾತ್ರಿ ಜೇನುತುಪ್ಪದೊಂದಿಗೆ ಸೇವಿಸಬಹುದು. ಚರ್ಮದ ಕಾಯಿಲೆ ಇದ್ದರೆ, ಬಿಳಿ ಎಕ್ಕದ ಹಾಲು ಹಾಗೂ ಜೇನು ತುಪ್ಪವನ್ನು ಬೆರೆಸಿ ಹಚ್ಚಲಾಗುತ್ತದೆ. ಕ್ರಿಮಿಯುಕ್ತವಾದ ಕುಷ್ಠ, ಹುಣ್ಣುಗಳನ್ನು ಸಹ ವಾಸಿ ಮಾಡಬಹುದು. ಕ್ರಿಮಿಕೀಟಗಳು, ಕಜ್ಜಿ, ಊತ, ಉರಿ ಬಾಧಿಸುತ್ತಿದ್ದರೆ ಇದರ ಹಾಲನ್ನು ಅದರ ಮೇಲೆ ಲೇಪಿಸಿದರೆ ಉಪಶಮನವಾಗುತ್ತದೆ. ಚೇಳು ಕಡಿದರೆ, ಬೇರೆ ವಿಷ ಜಂತುಗಳು ಕಡಿದರೆ, ಎಕ್ಕದ ಬೇರನ್ನು ಅರಿಶಿಣದಿಂದ ತೇಯ್ದು ನೀರಿನಲ್ಲಿ ಸೇವಿಸಿದರೆ ವಿಷದ ಅಂಶ ಕರಗುವುದು. ಕಾಲಿಗೆ ಮುಳ್ಳು ಚುಚ್ಚಿದಾಗ ಎಕ್ಕದ ಹಾಲನ್ನು ಮುಳ್ಳು ಸೇರಿರುವ ಜಾಗಕ್ಕೆ ಹಾಕಿದರೆ ಮುಳ್ಳು ಮೇಲಕ್ಕೆ ಬರುತ್ತದೆ. ಈ ಗಿಡದ ಎಲೆಗಳನ್ನು ಬೆಂಕಿ ಕೆಂಡದ ಮೇಲೆ ಸೋಕಿಸಿ ಬೆನ್ನು ನೋವು, ಮಂಡಿನೋವು ಇರುವ ಕಡೆ ಶಾಖ ಕೊಟ್ಟರೆ ಕೆಲವೇ ದಿನಗಳಲ್ಲಿ ನೋವು ಶಮನವಾಗುತ್ತದೆ. ಪುಡಿ ಮಾಡಿದ ಒಣಗಿದ ಎಕ್ಕದ ತೊಗಟೆಯನ್ನು ಜೇನುತುಪ್ಪದೊಂದಿಗೆ ತಿಂದರೆ ಕೆಮ್ಮು, ನೆಗಡಿ, ಕಫ ಕಡಿಮೆಯಾಗುತ್ತದೆ.

ಮುಖದಲ್ಲಿ ಭಂಗು ಬಂದಿದ್ದರೆ ಇದರ ರಸ ಲೇಪಿಸಬೇಕು. ಹಲ್ಲು ನೋವಿಗೂ ಬಿಳಿ ಎಕ್ಕದ ರಸ ಒಳ್ಳೆಯ ಔಷಧ. ಎಕ್ಕದ ಕಾಂಡವನ್ನು ಹಲ್ಲುಜ್ಜಲು ಬಳಸಬಹುದು.

ಮೂತ್ರ ಕಟ್ಟಿದ್ದಲ್ಲಿ ಎಕ್ಕದ ಎಲೆಗಳನ್ನು ಒಣಗಿಸಿ ನಯವಾಗಿ ಪುಡಿ ಮಾಡಿಟ್ಟುಕೊಂಡು ಬಿಸಿ ನೀರಿನಲ್ಲಿ ಬೆರೆಸಿ ಕುಡಿಸುವುದರಿಂದ ಮೂತ್ರ ವಿಸರ್ಜನೆ ಸುಗಮವಾಗುತ್ತದೆ.

ಎಲ್ಲಕ್ಕಿಂತ ಮುಖ್ಯವಾಗಿ ಸಾಕುಪ್ರಾಣಿಗಳ (ನಾಯಿ, ಹಸು, ಎತ್ತು) ಬೆನ್ನು ಮೇಲೆ ಗಾಯವಾದಾಗ ನೊಣಗಳು ಕುಳಿತು ಮೊಟ್ಟೆ ಇಡುತ್ತವೆ (ಇಪ್ಪೆ ಇಡುವುದು). ಸಣ್ಣ ಗಾಯ ವ್ರಣವಾಗಿ, ಹುಳುಗಳು ತುಂಬಿ ಮೂಕ ಪ್ರಾಣಿಗಳಿಗೆ ತುಂಬಾ ತೊಂದರೆಯಾಗುತ್ತದೆ. ಆಗ ಆ ಗಾಯಗಳಿಗೆ ಎಕ್ಕದ ಹಾಲು ಹಾಕಿದರೆ ಎರಡೇ ಸಲಕ್ಕೇ ವಾಸಿಯಾಗುತ್ತದೆ. ಹುಳುಗಳು ಸಾಯುತ್ತವೆ. ಈ ಎಕ್ಕವನ್ನು ಬಳಸಿ ಮುಂದೆ ಜ್ವರ ಬರದ ಹಾಗೆಯೂ ನಾಟಿ ವೈದ್ಯರು ಔಷಧ ಮಾಡಬಲ್ಲರು.

ಈ ಗಿಡಮೂಲಿಕೆಯನ್ನು ಪೂಜೆಯ ಜೊತೆಗೆ ಮನೆಮದ್ದಾಗಿ ಬಳಸಿ.

# ಯುವ ಸಹಾಯವಾಣಿಗೆ ಚಾಲನೆ

ದಾವಣಗೆರೆ, ಸೆ.16 - ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸೌಲಭ್ಯಗಳ ಮಾಹಿತಿ ತಿಳಿದುಕೊಳ್ಳಲು ಪ್ರಸಕ್ತ ಸಾಲಿನಲ್ಲಿ 'ಯುವ ಸಹಾಯವಾಣಿ 155-265' ಎಂಬ ವಿಶಿಷ್ಟ ಸಂಖ್ಯೆಯನ್ನು ಯುವಜನರಿಗೆ ತಲುಪಿಸಲು ಸಹಾಯವಾಣಿಯನ್ನು ಚಾಲನೆಗೆ ತರಲಾಗಿದೆ.

ಯುವಜನರನ್ನು ತಲುಪಿ ಸರ್ಕಾರದ ಯೋಜನೆಗಳ ಮಾಹಿತಿಯನ್ನು ಸಕಾಲದಲ್ಲಿ ಒದಗಿಸಲು, ಸರ್ಕಾರ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಶಿಕ್ಷಣ ಮತ್ತು ಉದ್ಯೋಗಕ್ಕೆ ಸಂಬಂಧಿಸಿದಂತೆ ಇರುವ ಅವಕಾಶಗಳ ಬಗ್ಗೆ ಮಾಹಿತಿಯನ್ನು ಒದಗಿಸಲು ಅಪಾಯಕರ ಸಂದರ್ಭಗಳಲ್ಲಿರುವ ಮತ್ತು ಮಾನಸಿಕ ಒತ್ತಡದ ಸಂದರ್ಭಗಳಲ್ಲಿರುವ ಯುವಜನರಿಗೆ ಸ್ಥೈರ್ಯ ಒದಗಿಸಲು ಆಪ್ತ ಸಮಾಲೋಚನೆಗೆ ಸಹಾಯ, ಯುವಜನರಿಗೆ ಸಂದರ್ಭೋಚಿತವಾದ ಅಗತ್ಯ ಕೌಶಲ್ಯ ಮತ್ತು ತರಬೇತಿಗಳ ಮಾಹಿತಿ ಪಡೆಯಲು ಮತ್ತು ಒದಗಿಸಲು ಹಾಗೂ ಖಾಸಗಿ ಕ್ಷೇತ್ರಗಳಲ್ಲಿ ಲಭ್ಯವಿರುವ ಉದ್ಯೋಗಾವಕಾಶಗಳಿಗೆ ಸಂಬಂಧಿಸಿದಂತೆ ಅಗತ್ಯ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳ ಸದುಪಯೋಗ ಪಡೆಯುವಂತೆ ಪ್ರೋತ್ಸಾಹಿಸಲು ಉದ್ದೇಶಿಸಲಾಗಿದೆ.

# ಮಲೇಬೆನ್ನೂರಿನಲ್ಲಿ ಪಂಡಿತ್ ದೀನ್‌ದಯಾಳ್ ಜನ್ಮ ದಿನಾಚರಣೆ



ಮಲೇಬೆನ್ನೂರು, ಸೆ.25- ಪಟ್ಟಣದ ಬಿಜೆಪಿ ಕಾರ್ಯಕರ್ತ ಬೆಣ್ಣೆಹಳ್ಳಿ ಬಸವರಾಜ್ ಅವರ ಮನೆಯಲ್ಲಿ ಮತ್ತು ಕೊಮಾರನಹಳ್ಳಿ ಗ್ರಾಮದಲ್ಲಿ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಜನ್ಮ ದಿನಾಚರಣೆಯನ್ನು ಶನಿವಾರ ಆಚರಿಸಲಾಯಿತು.

ದೀನ್ ದಯಾಳ್ ಅವರ ಭಾವಚಿತ್ರಕ್ಕೆ ಮಹಿಳೆಯರು 101 ಆರತಿ ಬೆಳಗಿದ್ದು ವಿಶೇಷವಾಗಿತ್ತು. ಈ ವೇಳೆ ಮಾತನಾಡಿದ ಜಿ.ಪಂ. ಮಾಜಿ ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ, ದೀನ ದಯಾಳ್ ಅವರ ಸೇವೆಯನ್ನು ಸ್ಮರಿಸಿದರು. ಹರಿಹರ ತಾಲ್ಲೂಕು ಗ್ರಾಮಾಂತರ ಜೆಡಿಎಸ್ ಅಧ್ಯಕ್ಷ ಹಿಂಡಸಘಟ್ಟೆ ಲಿಂಗರಾಜ್, ಪ್ರಧಾನ ಕಾರ್ಯದರ್ಶಿ ಆದಾಪುರದ ವೀರೇಶ್, ದಿಶಾ ಸಮಿತಿ ಸದಸ್ಯ ಐರಣಿ ಅಣ್ಣಪ್ಪ, ಬಿಜೆಪಿ ಮುಖಂಡರಾದ ಕೆ.ಜಿ. ವೀರನಗೌಡ, ಮುದೇಗೌಡ್ರ ತಿಪ್ಪೇಶ್, ಉಳ್ಳಳ್ಳಿ ಸಿದ್ದೇಶ್, ಬಿ. ಚಂದ್ರಪ್ಪ, ಬೆಣ್ಣೆಹಳ್ಳಿ ಸಿದ್ದೇಶ್ ಉಪಸ್ಥಿತರಿದ್ದರು.

ಪುರಸಭೆ ನಾಮಿನಿ ಸದಸ್ಯರಾದ ಪಿ.ಆರ್. ರಾಜು, ಗೌಡ್ರ ಮಂಜಣ್ಣ, ಎ.ಕೆ. ಲೋಕೇಶ್, ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಐರಣಿ ಮೂರ್ತಿ, ಬಿ. ಮಂಜುನಾಥ್, ಪಾನಿಪೂರಿ ರಂಗನಾಥ್, ಕೊಮಾರನಹಳ್ಳಿಯ ಐರಣಿ ಮಹೇಶ್ವರಪ್ಪ, ರಾಮಣ್ಣ ಸ್ವಾಮಿ, ಕೆ. ಹನುಮಂತ, ಜಿ. ಸುನೀಲ್, ಜಿ. ರಂಗನಾಥ್, ಪಿ. ರಂಗಣ್ಣ, ಗೋವಿನಹಾಳ್ ಹಾಲಸ್ವಾಮಿ, ಹಾಲಿವಾಣದ ಮೋಹನ್ ಇನ್ನಿತರರು ಭಾಗವಹಿಸಿದ್ದರು.

# ನಾಳೆ ಎಲ್‌ಐಸಿ ಪ್ರತಿನಿಧಿಗಳ ಸಭೆ

ದಾವಣಗೆರೆ, ಸೆ.25- ನಗರದ ಎಲ್‌ಐಸಿ ಶಾಖೆ 1ರ ಪ್ರತಿನಿಧಿಗಳ ಸಂಘದ 15ನೇ ವಾರ್ಷಿಕ ಸಭೆಯು ನಾಡಿದ್ದು ದಿನಾಂಕ 27 ರ ಸೋಮವಾರ ಬೆಳಿಗ್ಗೆ 10-30ಕ್ಕೆ ಸಂಘದ ಸಮುದಾಯ ಭವನದಲ್ಲಿ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಶಿವಮೊಗ್ಗ ವಿಭಾಗದ ಹಿರಿಯ ವಿಭಾಗಾಧಿಕಾರಿಗಳಾದ ಜಯಸಿಂಹನ್, ಎಲ್‌ಐಸಿ ದಕ್ಷಿಣ ಮಧ್ಯವಲಯದ ಮಾರುಕಟ್ಟೆ ವ್ಯವಸ್ಥಾಪಕ ಯಶವಂತ ಎಂ.ಮುರಾಳ್ ಆಗಮಿಸುವರು ಎಂದು ಕಾರ್ಯದರ್ಶಿ ಡಿ.ಸಿ. ಶಿವಕುಮಾರ್ ತಿಳಿಸಿದ್ದಾರೆ.

# 29 ರಂದು ನಗರದಲ್ಲಿ ವಿಶ್ವಕರ್ಮ ಮಹೋತ್ಸವ

## ಅಖಿಲ ಭಾರತ ವಿಶ್ವಕರ್ಮ ಪರಿಷತ್ ಉದ್ಘಾಟನೆ

ದಾವಣಗೆರೆ, ಸೆ.25- ವಿಶ್ವಕರ್ಮ ಮಹೋತ್ಸವ ಹಾಗೂ ಅಖಿಲ ಭಾರತ ವಿಶ್ವಕರ್ಮ ಪರಿಷತ್ ಉದ್ಘಾಟನಾ ಸಮಾರಂಭವನ್ನು ಇದೇ ದಿನಾಂಕ 29ರಂದು ಬೆಳಿಗ್ಗೆ 10 ಗಂಟೆಗೆ ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಅರಕಲಗೂಡು ತಾಲ್ಲೂಕಿನ ವಿಶ್ವಕರ್ಮ ಮಹಾ ಸಂಸ್ಥಾನದ ಶ್ರೀ ಶಿವ ಸುಜ್ಞಾನತೀರ್ಥ ಸ್ವಾಮೀಜಿ, ಶಿವಾತ್ಮಾನಂದ ಸರಸ್ವತಿ ಸ್ವಾಮೀಜಿ ಹಾಗೂ ಶಂಕರಾತ್ಮಾನಂದ ಸರಸ್ವತಿ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸಲಿದ್ದು, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಿಶ್ವಕರ್ಮ ಪರಿಷತ್ ಉದ್ಘಾಟಿಸಲಿದ್ದಾರೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಕಾರ್ಯಾಧ್ಯಕ್ಷ ಸಲೀಮ್ ಅಹಮದ್ ನೆರವೇರಿಸಲಿದ್ದಾರೆ ಎಂದು ಅಖಿಲ ಭಾರತ ವಿಶ್ವಕರ್ಮ ಪರಿಷತ್‌ನ ರಾಷ್ಟ್ರೀಯ ಅಧ್ಯಕ್ಷ ಹೆಚ್.ವಿ. ಸತೀಶ್ ಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಂಗೀತ ನಿರ್ದೇಶಕ ಡಾ. ವಿ. ನಾಗೇಂದ್ರ ಪ್ರಸಾದ್ ವಿಶ್ವಕರ್ಮ ಸಮಾಜದ ಧ್ವನಿಸುರುಳಿ ಬಿಡುಗಡೆ ಮಾಡಲಿದ್ದಾರೆ ಹಾಗೂ ವಿಶ್ವಕರ್ಮ ಸಮಾಜ ಕುರಿತು ಉಪನ್ಯಾಸ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಶಾಸಕರುಗಳಾದ ಎಸ್. ರಾಮಪ್ಪ, ರಘು ಆಚಾರ್, ಪಬ್ಲಿಕ್ ಪ್ರಾಸಿಕ್ಯೂಟರ್ ಎಸ್.ವಿ. ಪಾಟೀಲ್, ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷ ಬಿ. ನಾಗೇಂದ್ರ ಚಾರ್, ಪ್ರದೇಶ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ವಿಭಾಗದ ಎಂ.ಡಿ. ಲಕ್ಷ್ಮಿ ನಾರಾಯಣ್, ಪಿ.ಬಿ. ಬಡಿಗೇರ್, ಮಾಜಿ ಶಾಸಕ ವಡ್ನಾಳ್ ರಾಜಣ್ಣ, ಹೆಚ್.ಪಿ. ರಾಜೇಶ್, ಡಿ.ಜಿ. ಶಾಂತನಗೌಡ್ರು, ಜಮ್ನಳ್ಳಿ ನಾಗರಾಜ್, ಹೊದಿಗೆರೆ ರಮೇಶ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ, ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಸೇರಿದಂತೆ, ಅತಿಥಿ ಗಣ್ಯರು, ಸಮಾಜದ ಮುಖಂಡರು ಭಾಗವಹಿಸಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಗೌರವಾಧ್ಯಕ್ಷ ಬಿ. ನಾಗೇಂದ್ರಾಚಾರ್ ಬಸಾಪುರ, ಉಪಾಧ್ಯಕ್ಷ ಕೆ. ಕಾಳಾಚಾರ್, ಪ್ರಧಾನ ಕಾರ್ಯದರ್ಶಿ ವಿ.ಎಂ. ಕೊಟ್ರೇಶಾಚಾರ್, ಬಿ.ವಿ. ಶಿವಾನಂದ್, ಬ್ರಹ್ಮಾಚಾರ್, ಷಣ್ಮುಖಪ್ಪ ಸೇರಿದಂತೆ ಇತರರು ಇದ್ದರು.

# ಹಿಂದುಳಿದವರು ಜಾತಿ ಸಮಾವೇಶ ನಡೆಸುವುದು ತಪ್ಪಲ್ಲ

ಬೆಂಗಳೂರು,ಸೆ.25- ತಮ್ಮ ಹಕ್ಕುಗಳಿಗಾಗಿ ಹಿಂದುಳಿದ ವರ್ಗದವರು ಜಾತಿ ಸಮಾವೇಶಗಳನ್ನು ನಡೆಸುವುದು ಅಪರಾಧವಲ್ಲ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಕರ್ನಾಟಕ ರಾಜ್ಯ ಮಡಿವಾಳರ ಸಂಘ ಇಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಅವರು ಭಾಗವಹಿಸಿ ಕೊರೊನಾದಿಂದ ಮೃತರಾದವರ ಕುಟುಂಬದವರಿಗೆ ಪರಿಹಾರ ಹಾಗೂ ದಿನಸಿ ಕಿಟ್‌ಗಳನ್ನು ವಿತರಿಸಿ ಮಾತನಾಡಿದರು.

ಮಡಿವಾಳ ಸಮುದಾಯ ಅತ್ಯಂತ ಹಿಂದುಳಿದಿದೆ. ನಾನು ಸಿಎಂ ಆಗಿದ್ದಾಗ ಈ ಸಮುದಾಯಕ್ಕೆ ಪ್ರತ್ಯೇಕ ಅನುದಾನ ನೀಡಿದ್ದೆ.

ಹಿಂದುಳಿದವರು ಜಾತಿ ಹೆಸರಿನಲ್ಲಿ ಸಮ್ಮೇಳನ ಮಾಡಿದರೆ ತಪ್ಪಲ್ಲ. ಹಿಂದುಳಿದವರೇ ಸಂಘಟಿತರಾಗಿ ಸಮ್ಮೇಳನ ಮಾಡಬೇಕು.

ಕೆಲವರು ಹೆಸರಿಗೆ ಮಾತ್ರ ಬಸವಣ್ಣನ ಹೆಸರು ಹೇಳುತ್ತಾರೆ. ಆದರೆ, ವಿರುದ್ಧ ದಿಕ್ಕಿನಲ್ಲಿ ನಡೆಯುತ್ತಾರೆ.

ಇವನಾರವ, ಇವನಾರವ, ಇವ ನಮ್ಮವ, ಇವ ನಮ್ಮವ ಎಂದು ವಚನ ಹೇಳುತ್ತಾರೆ. ಆದರೆ, ಪಕ್ಕದಲ್ಲಿ ನಿಂತು ನೀವು ಯಾವ ಜಾತಿ ಎಂದು ಕೇಳುತ್ತಾರೆ.

ಸಂವಿಧಾನ ಅತ್ಯಂತ ಒಳ್ಳೆಯದು. ಆದರೆ ಸಂವಿಧಾನ ಒಳ್ಳೆಯವರ ಕೈಯಲ್ಲಿರಬೇಕು. ಆಗ ಜನರಿಗೆ ಅನುಕೂಲವಾಗುತ್ತದೆ.

ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ನಡೆಸುತ್ತಿದ್ದ ಜಾತಿ ಸಮೀಕ್ಷೆ ವರದಿ ನಾನು ಸಿಎಂ ಆಗಿದ್ದಾಗ ಪೂರ್ಣಗೊಂಡಿರಲಿಲ್ಲ.

ಕುಮಾರಸ್ವಾಮಿಯವರು ಸಿಎಂ ಆಗಿದ್ದಾಗ ಪೂರ್ಣವಾಯಿತು. ಆಗ ಪುಟ್ಟರಂಗಶೆಟ್ಟಿ



ಹಿಂದುಳಿದ ವರ್ಗಗಳ ಸಚಿವರಾಗಿದ್ದರು. ವರದಿ ಪೂರ್ಣವಾಗಿದೆ ಎಂದು ಅವರು ಕುಮಾರಸ್ವಾಮಿಯವರಿಗೆ ಮಾಹಿತಿ ನೀಡಿದರು. ಆದರೆ, ವರದಿ ಬಿಡುಗಡೆ ಮಾಡಲು ಅವರಿಗೆ ಅವಕಾಶ ಕೊಡಲಿಲ್ಲ.

ಪುಟ್ಟರಂಗಶೆಟ್ಟಿ ಅವರನ್ನು ಹೆದರಿಸಿದ ಕುಮಾರಸ್ವಾಮಿಯವರು ವರದಿ ಬಿಡುಗಡೆ ಮಾಡಿಸಲಿಲ್ಲ. ಕುಮಾರಸ್ವಾಮಿಯವರಿಗೆ ಹೆದರಿ ಪುಟ್ಟರಂಗಶೆಟ್ಟಿ ವರದಿ ಬಿಡುಗಡೆ ಮಾಡುವ ಗೋಜಿಗೆ ಹೋಗಲಿಲ್ಲ.

ಇದ್ದುದನ್ನು ಇದ್ದ ಹಾಗೆ ಹೇಳಿದರೆ ಕುಮಾರಸ್ವಾಮಿಯವರಿಗೆ ಕೋಪ. ಸಿದ್ದರಾಮಯ್ಯ ಕೂತು ವರದಿ ಬರೆಸಿಬಿಟ್ಟಿದ್ದಾನೆ ಎನ್ನುತ್ತಾರೆ ಅವರು.

ಅದು ಎಲ್ಲ ಜಾತಿ, ಜನಾಂಗದವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿ ಅರಿಯುವ ವರದಿ. ಯಾರಿಗೂ ಅನ್ಯಾಯ ಮಾಡುವ ಉದ್ದೇಶ ಇಲ್ಲ. ಆದರೂ ವರದಿಗೆ ವಿರೋಧ ವ್ಯಕ್ತಪಡಿಸುತ್ತಾರೆ.

ಮುಂದಿನ ಬಾರಿ ನಾವು ಅಧಿಕಾರಕ್ಕೆ ಬಂದೇ ಬರುತ್ತೇವೆ. ಆಗ ಮಡಿವಾಳ ಸಮಾಜಕ್ಕೆ ಎಂಎಲ್‌ಸಿ ಸ್ಥಾನ ನೀಡುತ್ತೇವೆ ಎಂದು ಸಿದ್ದರಾಮಯ್ಯ ಅವರು ಹೇಳಿದರು.

# ಭೋವಿ ನಿಗಮದಿಂದ ಅರ್ಜಿ

ದಾವಣಗೆರೆ, ಸೆ.25- ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ವತಿಯಿಂದ ವಿವಿಧ ಯೋಜನೆಯಡಿ ಸಾಲ ಮತ್ತು ಸಹಾಯಧನ ಸೌಲಭ್ಯ ಕಲ್ಪಿಸಲು ಫಲಾಪೇಕ್ಷಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಇಂದಿನಿಂದ ಬರುವ ಅಕ್ಟೋಬರ್ 14 ರವರೆಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಕಛೇರಿಯನ್ನು ಸಂಪರ್ಕಿಸಬಹುದು.

# ಕಾರ್ಯಕಾರಿಣಿ ಯಶಸ್ವಿಗೊಳಿಸಿದ ಬಿಜೆಪಿ ಕಾರ್ಯಕರ್ತರಿಗೆ ಅಭಿನಂದನೆ

ದಾವಣಗೆರೆ, ಸೆ. 25 - ಕಳೆದ ಸೆಪ್ಟೆಂಬರ್ 18 - 19ರಂದು ನಗರದಲ್ಲಿ ಆಯೋಜಿಸಲಾಗಿದ್ದ ಬಿಜೆಪಿ ರಾಜ್ಯ ಕಾರ್ಯಕಾರಿಣಿಯಲ್ಲಿ ಪ್ರಬಂಧಕರಾಗಿ ಕಾರ್ಯ ನಿರ್ವಹಿಸಿದ ಕಾರ್ಯಕರ್ತರಿಗೆ ನಗರದ ತ್ರಿಶೂಲ್ ಕಲಾಭವನದಲ್ಲಿ ಅಭಿನಂದನಾ ಸಮಾರಂಭ ಆಯೋಜಿಸಲಾಗಿತ್ತು.

ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪಕ್ಷದ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಪಕ್ಷದ ಕಾರ್ಯಕರ್ತರು ಅಚ್ಚುಕಟ್ಟಾಗಿ ಕಾರ್ಯಕಾರಿಣಿಗೆ ಎಲ್ಲ ವ್ಯವಸ್ಥೆ ಮಾಡಿದ್ದಾರೆ. ಈ ಸಮಾರಂಭ ನಿಮಗೆಲ್ಲ ಗೌರವಿಸುವುದಾಗಿದೆ. ಕಾರ್ಯಕಾರಿಣಿ ಯಶಸ್ಸಿಗೆ ಕಾರ್ಯಕರ್ತರ ಅಭಿಪ್ರಾಯಗಳನ್ನು ಪಕ್ಷ ಗೌರವಿಸಲಿದೆ ಎಂದು ಹೇಳಿದರು. 36 ಸಮಿತಿಗಳ ಮೂಲಕ ಉತ್ಸಾಹದಿಂದ ಕೆಲಸ ಮಾಡುವ ಜೊತೆಗೆ ಜಿಲ್ಲೆಯಲ್ಲಿ ಮುಂದಿನ ಚುನಾವಣೆಗಳಲ್ಲಿ ಗೆಲ್ಲುವ ವಾತಾವರಣ ಕಂಡು




ಬಂದಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ಶಾಸಕ ಎಂ.ಪಿ. ರೇಣುಕಾಚಾರ್ಯ ಮಾತನಾಡಿ, ಜನಸಂಘದಿಂದ ಈಗಿನ ಬಿಜೆಪಿಯವರೆಗೆ ಸುದೀರ್ಘ ಕಾಲ ನಡೆದು ಬರಲು ಹಾಗೂ ಅಧಿಕಾರದ ಚುಕ್ಕಾಣಿ ಹಿಡಿಯಲು ಕಾರ್ಯಕರ್ತರೇ ಕಾರಣ. ಮುಂಬರುವ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯ್ತಿ ಚುನಾವಣೆಗಳು ಕಾರ್ಯಕರ್ತರ ಚುನಾವಣೆಗಳಾಗಿದ್ದು, ಕಾರ್ಯಕರ್ತರ ಗೆಲುವಿಗೆ ಶ್ರಮಿಸುತ್ತೇವೆ ಎಂದು ಹೇಳಿದರು.

ಕಾರ್ಯಕಾರಿಣಿಗೆ ಉಚಿತವಾಗಿ ತ್ರಿಶೂಲ್ ಸಭಾಭವನ ನೀಡಿದ ಮಾಲೀಕರಾದ ವೀರಣ್ಣ ಹಾಗೂ ಪ್ರಕಾಶ್ ಅವರನ್ನು ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ಸಂಘಟನಾ ಪ್ರಧಾನ ಕಾರ್ಯದರ್ಶಿ ಅರುಣ್ ಕುಮಾರ್, ರಾಜ್ಯ ಉಪಾಧ್ಯಕ್ಷ ನಂದೀಶ್, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ಎಸ್.ಎ. ರವೀಂದ್ರನಾಥ್, ಎಂ.ಪಿ. ರೇಣುಕಾಚಾರ್ಯ, ಎಸ್.ವಿ. ರಾಮಚಂದ್ರ, ಪ್ರೊ. ಲಿಂಗಣ್ಣ, ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಅಣಬೇರು ಜೀವನಮೂರ್ತಿ, ಜಿಲ್ಲಾಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಮಾಜಿ ಶಾಸಕ ಬಸವರಾಜನಾಯ್ಕ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತ ರಾವ್ ಜಾಧವ್, ಮುಖಂಡರಾದ ಎನ್.ಎಂ. ಕಲ್ಲೇಶ್, ಬಿ.ಎಸ್. ಜಗದೀಶ್, ಶ್ರೀನಿವಾಸ ದಾಸಕರಿಯಪ್ಪ ಮತ್ತಿತರರು ಉಪಸ್ಥಿತರಿದ್ದರು.

## ವಿಶ್ವಕರ್ಮ ಜಯಂತಿ ಸರಳ ಆಚರಣೆ



ದಾವಣಗೆರೆ, ಸೆ.25- ವಿಶ್ವಕರ್ಮ ಜಯಂತಿಯನ್ನು ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಿನ್ನೆ ಸರಳವಾಗಿ ಆಚರಿಸಲಾಯಿತು.

ವಿಶ್ವಕರ್ಮ ಅವರ ಭಾವಚಿತ್ರಕ್ಕೆ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ.ರಿಷ್ಯಂತ್ ಪುಷ್ಪಾರ್ಚನೆ ಮಾಡಿದರು. ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ, ವಿಶ್ವಕರ್ಮ ಸಮಾಜದ ಅಧ್ಯಕ್ಷ ಬಸಾಪುರದ ನಾಗೇಂದ್ರಾಚಾರ್, ಕಾರ್ಯದರ್ಶಿ ಬಿ.ವಿ. ಶಿವಾನಂದ, ಖಜಾಂಚಿ ಬೇತೂರು ವಿಜಯಕುಮಾರ, ಸಂಘಟನಾ ಕಾರ್ಯದರ್ಶಿ ವಿ.ಎಂ.ಕೊಟ್ರೇಶಾಚಾರ್, ನಿರ್ದೇಶಕ ಬಿ.ಸಿದ್ದಾಚಾರ್ ಮಾಯಕೊಂಡ, ನಾಗರಾಜಚಾರ್ ಹಾರ್ಮೋನಿಯಂ, ಬಸವರಾಜಚಾರ್, ಬ್ರಹ್ಮಾಚಾರ್, ಕಾಳಾಚಾರ್, ಸುರೇಶ್ ಕುಮಾರ್, ರಾಮಚಂದ್ರಚಾರ್, ಮೌನೇಶಚಾರ್, ವೀರೇಶಚಾರ್ ಆಚಾರ್ಯ ಹಾಗೂ ಕೆ.ಎಸ್. ರಾಮಾಚಾರಿ ಸೇರಿದಂತೆ ಸಮಾಜದ ಎಲ್ಲಾ ಮುಖಂಡರು ಪಾಲ್ಗೊಂಡಿದ್ದರು.

## ಕನ್ನಡ ನುಡಿ ಜಾಣ ಪ್ರಶಸ್ತಿಗೆ ಆನ್‌ಲೈನ್ ಅರ್ಜಿ ಆಹ್ವಾನ

ದಾವಣಗೆರೆ, ಸೆ.25- ನಗರದ ಗ್ರಂಥಸರಸ್ವತಿ ಪ್ರತಿಭಾರಂಗವು ರಾಜ್ಯಮಟ್ಟದ ಕನ್ನಡ ನುಡಿಜಾಣ ಪ್ರಶಸ್ತಿಗಾಗಿ ಆನ್‌ಲೈನ್ ಅರ್ಜಿ ಆಹ್ವಾನಿಸಿದೆ. ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯ ಕನ್ನಡ ಭಾಷಾ ವಿಷಯದಲ್ಲಿ ಶೇ. 90 ಅಂಕಗಳನ್ನು ಪಡೆದ ಪ್ರತಿಭಾನ್ವಿತ ಮಕ್ಕಳು ಪುರಸ್ಕಾರ ಪಡೆಯಲು ಅರ್ಹರಾಗಿರುತ್ತಾರೆ.

ಅಕ್ಟೋಬರ್ 21 ರೊಳಗೆ ಅರ್ಜಿಯನ್ನು ಸಲ್ಲಿಸಬಹುದು. ಆಸಕ್ತರು ಗೂಗಲ್ ಫಾರ್ಮ್ ಲಿಂಕ್ https://docs.google.com/forms/d/e/1FAIpQLSfW7nukCQbmJvRAuQ74qucUWU8o9V8FHVSAAO1qNT_6k8oVXw/viewform?usp=sf_link ಬಳಸಿ ಅರ್ಜಿ ಹಾಕಬಹುದು. ಹೆಚ್ಚಿನ ಮಾಹಿತಿಗೆ ಮೊ: 9980930788 ಸಂಪರ್ಕಿಸಲು ಪ್ರತಿಭಾರಂಗದ ಅಧ್ಯಕ್ಷ ಆರ್. ಶಿವಕುಮಾರಸ್ವಾಮಿ ಕುರ್ಕಿ ತಿಳಿಸಿದ್ದಾರೆ.

# ಸಂವಿಧಾನದ ಕೊಡುಗೆಯಿಂದ ಕಟ್ಟಕಡೆಯ ವ್ಯಕ್ತಿಗೂ ಉನ್ನತ ಹುದ್ದೆಗಳು ಲಭಿಸಿವೆ

### ಜಗಳೂರು : ಕಾನೂನು ಅರಿವು-ನೆರವು ಕಾರ್ಯಕ್ರಮದಲ್ಲಿ ನ್ಯಾ. ತಿಮ್ಮಯ್ಯ

ಜಗಳೂರು, ಸೆ.25- ಸಂವಿಧಾನದ ಮೂಲಕ ವಿಪುಲ ಅವಕಾಶಗಳು ದೊರೆತು ದೇಶದ ಕಟ್ಟಕಡೆಯ ವ್ಯಕ್ತಿಗೂ ಉನ್ನತ ಹುದ್ದೆಗಳು ಲಭಿಸಿವೆ ಎಂದು ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರಾದ ಜಿ.ತಿಮ್ಮಯ್ಯ ಹೇಳಿದರು.

ಪಟ್ಟಣದ ಗುರುಭವನದಲ್ಲಿ ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ, ತಾಲ್ಲೂಕು ಆಡಳಿತ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಾಲಂದ ಪದವಿಪೂರ್ವ ಕಾಲೇಜು ಇವರುಗಳ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಕಾನೂನು ಅರಿವು-ನೆರವು ಹಾಗೂ ಸಿಎಲ್‌ಎಟಿ ಪರೀಕ್ಷೆಯಲ್ಲಿ 176 ನೇ ರ್‍ಯಾಂಕ್ ಪಡೆದ ರೇವತಿ ನಾಯಕ್ ಅವರಿಗೆ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರೈತರ ದುಃಖ, ದುಮ್ಮಾನಗಳನ್ನು ಅರಿತ ನ್ಯಾಯವಾದಿಗಳ ಅಗತ್ಯ ದೇಶಕ್ಕಿದೆ. ರೈತ ಕುಟುಂಬದ ರೇವತಿ ನಾಯಕ್ ಅಂತಹವರು ಭವಿಷ್ಯದಲ್ಲಿ ಹೈಕೋರ್ಟ್, ಸುಪ್ರೀಂ ಕೋರ್ಟ್‌ಗಳ ನ್ಯಾಯವಾದಿಗಳಾಗಿ ಹೊರಹೊಮ್ಮಲಿ ಎಂದು ಆಶಿಸಿದರು.

ಗ್ರಾಮೀಣ ಭಾಗದ ಬಡ ರೈತರು ಸಾಲ ಸೋಲ ಮಾಡಿ, ತಮ್ಮ ಮಕ್ಕಳಿಗೆ ಇಂಜಿನಿಯರ್, ವೈದ್ಯಕೀಯ ಶಿಕ್ಷಣ ಕೊಡಿಸುವ ವ್ಯಾಮೋಹ ತೊರೆಯಬೇಕು. ಪರ್ಯಾಯವಾಗಿ ಲಭ್ಯವಿರುವ ಕೋರ್ಸ್‌ಗಳನ್ನು ಸರಿಯಾದ ಸಮಯದಲ್ಲಿ ಆಯ್ಕೆ ಮಾಡಿ ಉಜ್ವಲ ಭವಿಷ್ಯ ರೂಪಿಸಬೇಕು ಎಂದು ಸಲಹೆ ನೀಡಿದರು.

ಕಠಿಣ ಕಾನೂನು ಜಾರಿಯಿದ್ದರೂ ನಕಾರಾತ್ಮಕ ಚಿಂತನೆಗಳಿಂದ ವಿದ್ಯಾರ್ಥಿ ಯುವ ಸಮೂಹ ಮಾದಕ ವಸ್ತುಗಳ ಮೊರೆ ಹೋಗಿ




ವಿಕೃತ ಕೃತ್ಯಗಳಲ್ಲಿ ಭಾಗವಹಿಸುತ್ತಿದ್ದಾರೆ. ಪೋಷಕರು ಮಕ್ಕಳ ಬಗ್ಗೆ ನಿಗಾವಹಿಸಬೇಕು ಎಂದು ಕಿವಿಮಾತು ಹೇಳಿದರು.

ಕೊಟ್ಟೂರು ತಾಲ್ಲೂಕು ಪಂಚಾಯ್ತಿ ಇಓ ಹಲ್ಲುಮನಿ ತಿಮ್ಮಣ್ಣ ಮಾತನಾಡಿ, ಸಂತೆಪೇಟೆ ಸರ್ಕಾರಿ ಶಾಲೆಗೆ ನನ್ನ ಮಗನ ಜೊತೆ ನ್ಯಾಯಾಧೀಶರ ಮಗನನ್ನು ದಾಖಲಿಸಿದ್ದು, ಹೆಮ್ಮೆಯ ಸಂಗತಿಯಾಗಿದೆ. ನ್ಯಾಯಾಧೀಶರು ಕನ್ನಡದಲ್ಲಿ ತೀರ್ಪು ಆದೇಶ ಮಾತ್ರವಲ್ಲದೆ, ಮಕ್ಕಳನ್ನು ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿಸಬೇಕಿದೆ. ಇದಕ್ಕೆ ನ್ಯಾಯಾಧೀಶರಾದ ತಿಮ್ಮಯ್ಯ ಅವರು ಸಾಕ್ಷಿಯಾಗಿದ್ದಾರೆ ಎಂದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ ಮಾತನಾಡಿ, ಸಮಾಜ ಕಲ್ಯಾಣ ಇಲಾಖೆಯಿಂದ ಪರಿಶಿಷ್ಟ ಜಾತಿ, ಪಂಗಡದ ಅಭ್ಯರ್ಥಿಗಳಿಗೆ ದೆಹಲಿ, ಹೈದರಾಬಾದ್‌ನಲ್ಲಿ ಯುಪಿಎಸ್‌ಸಿ, ಕೆಪಿಎಸ್‌ಸಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸ್ಟೈಫಂಡ್‌ನೊಂದಿಗೆ ವಸತಿ ಸಹಿತ ತರಬೇತಿ, ಮೆರಿಟ್ ಸ್ಕಾಲರ್ ಶಿಪ್ ಸೌಲಭ್ಯಗಳಿದ್ದು, ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ರೇವತಿ ನಾಯಕ, ತಮ್ಮ ಸಾಧನೆಗೆ ಕೈಜೋಡಿಸಿದ ಪ್ರತಿಯೊಬ್ಬರಿಗೂ ಕೃತಜ್ಞತೆಗಳನ್ನು ಸಲ್ಲಿಸುವುದಾಗಿ ತಿಳಿಸಿದರು.

ರೈತ ಸಂಘದ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್, ತಹಶೀಲ್ದಾರ್ ಡಾ. ನಾಗವೇಣಿ, ಸಿಪಿಐ ಮಂಜುನಾಥ್ ಪಂಡಿತ್, ಪಿಎಸ್‌ಐ ಸಂತೋಷ್ ಕುಮಾರ್ ಬಾಗೋಜಿ, ವಕೀಲರ ಸಂಘದ ಅಧ್ಯಕ್ಷ ಬಸವರಾಜಪ್ಪ, ರೈತ ಸಂಘದ ಕಾರ್ಯದರ್ಶಿ ಚಿರಂಜೀವಿ, ಪ್ರಾಧ್ಯಾಪಕ ಲಾಲ್‌ಸಿಂಗ್ ನಾಯ್ಕ, ಉಪನ್ಯಾಸಕ ಬಿ.ಎನ್. ಸ್ವಾಮಿ, ವಕೀಲರಾದ ತಿಪ್ಪೇಸ್ವಾಮಿ, ಕರಿಬಸಪ್ಪ, ರುದ್ರೇಶ್ , ಕಾನನಕಟ್ಟೆ ತಿಪ್ಪೇಸ್ವಾಮಿ, ಲೋಕೇಶ್ ಇನ್ನಿತರರಿದ್ದರು.

## ಚಟುವಟಿಕೆಗೆ ಸಮಯ ಮೀಸಲಿಡಿ

**(3ನೇ ಪುಟದಿಂದ)** ದರೂ ಈ ಚಟುವಟಿಕೆಗಳಿಗೆ ಸಮಯ ಮೀಸಲಿಟ್ಟು ಅದರಲ್ಲಿ ತೊಡಗಿಕೊಳ್ಳಬೇಕು ಎಂದು ಅಭಿಲಾಷೆ ವ್ಯಕ್ತಪಡಿಸಿದರು.

ದಾವಣಗೆರೆ ಕ್ಲಬ್ ನಲ್ಲೂ ಸಹ ಉತ್ತಮ ವಾತಾವರಣ ನಿರ್ಮಾಣವಾಗಿದ್ದು, ಟೆನ್ನಿಸ್ ಸೇರಿದಂತೆ, ಕೆಲ ಕ್ರೀಡಾ ಚಟುವಟಿಕೆಗೂ ಒತ್ತು ನೀಡಿರುವುದು ಸಂತಸದ ವಿಚಾರ. ಕ್ಲಬ್ ನನ್ನ ಮೇಲೆ ತೋರಿಸಿದ ಪ್ರೀತಿ, ವಿಶ್ವಾಸಕ್ಕೆ ಮನಸೋಲುವಂತೆ ಮಾಡಿದೆ. ಕ್ಲಬ್ ಮೇಲೆ ಮತ್ತಷ್ಟು ಗೌರವ ಹೆಚ್ಚಿಸಿದೆ ಎಂದು ಹರುಷ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಗಳಾಗಿದ್ದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಮಾತನಾಡಿ, 1935ರಿಂದ ಈ ಕ್ಲಬ್ ಸ್ಥಾಪಿತಗೊಂಡಿದೆ. ಅಂದರೆ ಸ್ವಾತಂತ್ರ್ಯ ಪೂರ್ವದಲ್ಲಿ, ಬ್ರಿಟೀಷರ ಕಾಲದಲ್ಲಿ ಸ್ಥಾಪಿತವಾದ ದಿ ದಾವಣಗೆರೆ ಕ್ಲಬ್ ದಾವಣಗೆರೆಯಲ್ಲಿನ ಹಳೆಯ ಕ್ಲಬ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಲ್ಲಿ ಅನೇಕ ಮಹನೀಯರು ಸೇವೆ ಸಲ್ಲಿಸಿರುವ ಇತಿಹಾಸ ಹೆಮ್ಮೆಯ ಸಂಗತಿ.

ಟೆನ್ನಿಸ್ ಪಂದ್ಯದ ತಳಪಾಯವೇ ಈ ಕ್ಲಬ್ ಆಗಿದ್ದು, ಸಾಕಷ್ಟು ಆಟಗಾರರು ಪಂದ್ಯಗಳಲ್ಲಿ ಉತ್ತಮ ಆಟಗಾರರಾಗಿ ಹೊರಹೊಮ್ಮಿರುವುದು ಹೆಮ್ಮೆಯ ವಿಚಾರ ಎಂದು ಪ್ರಶಂಸಿಸಿದರು.

ಕಾರ್ಯಕ್ರಮದಲ್ಲಿ ಕ್ಲಬ್ ನ ಅಧ್ಯಕ್ಷ ಮತ್ತಿಹಳ್ಳಿ ವೀರಣ್ಣ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಎ.ಬಿ. ಚಂದ್ರಶೇಖರ್, ಕಾರ್ಯದರ್ಶಿ ರವಿಶಂಕರ್ ಪಲ್ಲಾಗಟ್ಟೆ, ನಿರ್ದೇಶಕರುಗಳಾದ ಬೆಳ್ಳೂಡಿ ಸದಾನಂದ, ಹೆಚ್.ವಿ. ರುದ್ರೇಶ್, ಅಭಿಷೇಕ್ ಬೇತೂರು, ಮಲ್ಲಿಕಾರ್ಜುನ್ ಬಾದಾಮಿ, ಎಸ್.ಕೆ. ತಿಮ್ಮರಾಜ್ ಗುಪ್ತ, ಪ್ರಶಾಂತ್ ಜಿ. ಗುಪ್ತ, ರವಿಶಂಕರ್ ಪಲ್ಲಾಗಟ್ಟೆ ಸೇರಿದಂತೆ ಇತರರು ಇದ್ದರು. ಕ್ಲಬ್‌ನ ಕೋಶಾಧ್ಯಕ್ಷ ಲಿಂಗರಾಜ್ ವಾಲಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹ ಕಾರ್ಯದರ್ಶಿ ಎಸ್.ಜಿ. ಉಳುವಯ್ಯ ಸ್ವಾಗತಿಸಿದರು. ಅಜಯ್ ನಾರಾಯಣ ನಿರೂಪಿಸಿದರು.

## ರಜೆ ಬದಲಿಸುವ ಚಿಂತನೆ

**(3ನೇ ಪುಟದಿಂದ)** ಸಾರ್ವಜನಿಕರಿಂದ ಭಾನುವಾರ ಸೇವೆ ಲಭ್ಯವಿರಬೇಕೆಂದು ಕೋರಿಕೆಗಳು ಬಂದಿವೆ. ಅವರ ಕೋರಿಕೆಯಲ್ಲೂ ಸತ್ಯಾಂಶಗಳಿವೆ.

ಕೋವಿಡ್-19 ರಂತಹ ಸಾಂಕ್ರಾಮಿಕ ರೋಗದ ಪರಿಸ್ಥಿತಿಯಲ್ಲಿ 24x7 ಪೂರ್ಣ ಅವಧಿಯಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಸೇವೆ ಲಭ್ಯವಿರಬೇಕು. ಈ ಕಾರಣಕ್ಕಾಗಿ ಇಂತಹ ನಿರ್ಣಯ ಕೈಗೊಳ್ಳಲಾಗುವುದು. ರಾಜ್ಯಾದ್ಯಂತ ಲಸಿಕೆ ನೀಡುವಿಕೆಯಲ್ಲಿ ದಾಪುಗಾಲು ಇಟ್ಟಿರುವುದರಿಂದ ಕೊರೊನಾ ಸೋಂಕು ನಿಯಂತ್ರಣ ಸಾಧ್ಯವಾಗಿದೆ. ತಜ್ಞರು ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದು, ಯಾರು ಲಸಿಕೆ ಹಾಕಿಸಿಕೊಂಡಿಲ್ಲವೋ ಅಂತಹವರು ಮೊದಲು ಲಸಿಕೆ ಪಡೆದುಕೊಳ್ಳಬೇಕು.

ಈ ವರ್ಷದ ಅಂತ್ಯದೊಳಗೆ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಲಸಿಕೆ ದೊರಕಿಸುವ ಗುರಿ ಹೊಂದಲಾಗಿದೆ. ಇಂತಹ ಪ್ರಯತ್ನವೂ ನಡೆದಿದೆ ಎಂದರು.

ಚಾಣಕ್ಯ ವಿಶ್ವವಿದ್ಯಾಲಯಕ್ಕೆ ಜಮೀನು ನೀಡಿರುವುದನ್ನು ಸಮರ್ಥಿಸಿಕೊಂಡ ಮುಖ್ಯಮಂತ್ರಿಯವರು ಕಾಂಗ್ರೆಸ್ ಸರ್ಕಾರ ಇದ್ದ ಸಂದರ್ಭದಲ್ಲಿ ಎಷ್ಟು ಸಂಸ್ಥೆಗಳಿಗೆ ಜಮೀನು ಕೊಟ್ಟಿದ್ದಾರೆ ಎಂಬುದು ಗೊತ್ತಿದೆ. ಅವರಿಂದ ನಾವು ನೀತಿ ಪಾಠ ಕಲಿಯಬೇಕಿಲ್ಲ.

## ನೂತನ ಸಹಕಾರಿ ನೀತಿ

**(3ನೇ ಪುಟದಿಂದ)** ಹೇಳಿದ್ದಾರೆ. ಕಳೆದ ಜುಲೈನಲ್ಲಿ ಕೇಂದ್ರ ಸಹಕಾರ ಸಚಿವಾಲಯವನ್ನು ಸ್ಥಾಪಿಸಲಾಗಿತ್ತು. ನಂತರ ಮೊದಲ ಬಾರಿಗೆ ಆಯೋಜಿಸಲಾಗಿದ್ದ ಸಹಕಾರ ಸಮ್ಮೇಳನದಲ್ಲಿ ಅಮಿತ್ ಷಾ ಮಾತನಾಡುತ್ತಿದ್ದರು.

ದೇಶದ ವಿವಿಧ ವಲಯಗಳ 2,100 ಸಹಕಾರಿಗಳು ಕಾರ್ಯಕ್ರಮದಲ್ಲಿ ನೇರವಾಗಿ ಹಾಗೂ 6 ಕೋಟಿ ಜನರು ಆನ್‌ಲೈನ್ ಮೂಲಕ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಸಹಕಾರ ರಾಜ್ಯ ವಿಷಯವಾಗಿರುವುದರಿಂದ ಕೇಂದ್ರ ಸರ್ಕಾರ ಏಕೆ ಸಹಕಾರಿ ಸಚಿವಾಲಯ ರೂಪಿಸಿದೆ ಎಂಬ ಪ್ರಶ್ನೆಗಳೂ ಇವೆ. ಈ ವಿಷಯವನ್ನು ಕಾನೂನಿನ ಮೂಲಕ ಆರಾಮವಾಗಿ ಪ್ರತಿಕ್ರಿಯಿಸಬಹುದು. ಆದರೆ, ರಾಜ್ಯಗಳ ಜೊತೆ ಜಗಳ ಬಯಸುವುದಿಲ್ಲ. ರಾಜ್ಯಗಳ ಜೊತೆ ಸಹಕರಿಸುತ್ತೇವೆಯೇ ಹೊರತು ಸಂಘರ್ಷಕ್ಕೆ ಮುಂದಾಗುವುದಿಲ್ಲ ಎಂದು ಷಾ ಹೇಳಿದರು.

ಸ್ಪರ್ಧಾತ್ಮಕ ವಾತಾವರಣದಲ್ಲಿ ಸಹಕಾರಿಗಳನ್ನು ರಕ್ಷಿಸಬೇಕಿದೆ. ದೇಶಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷಗಳಾಗಿರುವ ಸಂದರ್ಭದಲ್ಲಿ ನೂತನ ಸಹಕಾರಿ ನೀತಿ ಜಾರಿಗೆ ತರಲಾಗುವುದು ಎಂದು ಷಾ ತಿಳಿಸಿದ್ದಾರೆ.

ಪ್ರಸಕ್ತ ಪ್ರತಿ ಹತ್ತು ಹಳ್ಳಿಗಳಿಗೆ ಒಂದರಂತೆ ಕೃಷಿ ಸಹಕಾರ ಸಂಘಗಳಿವೆ. ಮುಂದಿನ ಐದು ವರ್ಷಗಳಲ್ಲಿ ಪ್ರತಿ ಹಳ್ಳಿಗೆ ಒಂದು ಸಹಕಾರಿ ಸಂಘ ರೂಪಿಸಲಾಗುವುದು ಎಂದವರು ಹೇಳಿದ್ದಾರೆ.

ಸಹಕಾರ ಸಂಘಗಳನ್ನು ಡಿಜಿಟಲೀಕರಣ ಮಾಡಲಾಗುವುದು. ಸ್ಥಳೀಯ ಭಾಷೆಯಲ್ಲಿ ಲೆಕ್ಕಗಳನ್ನು ನಿರ್ವಹಿಸುವ ತಂತ್ರಾಂಶ ರೂಪಿಸಲಾಗುವುದು ಎಂದು ಅಮಿತ್ ಷಾ ತಿಳಿಸಿದ್ದಾರೆ.

ಸಹಕಾರಿ ಸಂಸ್ಥೆಗಳು ತೆರಿಗೆ ವಲಯದಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿರುವುದು ಗಮನಕ್ಕೆ ಬಂದಿದೆ. ಸಹಕಾರಿಗಳಿಗೆ ಈ ವಿಷಯದಲ್ಲಿ ಅನ್ಯಾಯವಾಗದಂತೆ ನೋಡಿಕೊಳ್ಳಲಾಗುವುದು ಎಂದವರು ಹೇಳಿದ್ದಾರೆ.

## 16ನೇ ವಾರ್ಡ್‌ನಲ್ಲಿ ದೀನ ದಯಾಳ್ ಉಪಾಧ್ಯಾಯ ಜನ್ಮ ದಿನಾಚರಣೆ



ದಾವಣಗೆರೆ, ಸೆ. 25- ನಗರದ 16ನೇ ವಾರ್ಡ್‌ನಲ್ಲಿ ಬಿಜೆಪಿ ಕಾನೂನು ಪ್ರಕೋಷ್ಠದ ವತಿಯಿಂದ ಪಂಡಿತ್ ದೀನ ದಯಾಳ್ ಉಪಾಧ್ಯಾಯ ಇವರ ಜನ್ಮ ದಿನಾಚರಣೆ ಆಚರಿಸಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ, ಕಾನೂನು ಪ್ರಕೋಷ್ಠದ ಜಿಲ್ಲಾ ಸಂಚಾಲಕ ಹಾಗೂ ವಕೀಲರ ಸಂಘದ ನಿಕಟಪೂರ್ವ ಉಪಾಧ್ಯಕ್ಷ ಹೆಚ್. ದಿವಾಕರ್, ದಕ್ಷಿಣದ ಸಂಚಾಲಕ ಎ.ಎಸ್. ಮಂಜುನಾಥ, ದೂಡಾ ಸದಸ್ಯರಾದ ಶ್ರೀಮತಿ ಗೌರಮ್ಮ ಪಾಟೀಲ್, ಮಹಿಳಾ ಮೋರ್ಚಾ ಕಾರ್ಯದರ್ಶಿ ಶ್ರೀಮತಿ ಪುಷ್ಪ ವಾಲಿ, ದ್ರಾಕ್ಷಾಯಣಮ್ಮ ಯುವ ಮೋರ್ಚಾ ಕಾರ್ಯದರ್ಶಿ ರಾಜು, ಸಂಗೀತ ಮಂಜು, ತಿಪ್ಪೇಶ್, ಪ್ರೀತಂ, ಅಮಿತ್ ಮತ್ತಿತರರು ಹಾಜರಿದ್ದರು.

## ಸಂಘದ ಅಧ್ಯಕ್ಷರಾಗಿ ಪಂಚಾಕ್ಷರಪ್ಪ

**(3ನೇ ಪುಟದಿಂದ)** ನಾಗೇಂದ್ರಪ್ಪ, ದೊಗ್ಗಳ್ಳಿ ಮಲ್ಲಿಕಾರ್ಜುನ್, ಕಬ್ಬೂರು ಸುರೇಂದ್ರ, ದೊಗ್ಗಳ್ಳಿ ಬಸವರಾಜ್, ಎಂ.ಎಸ್.ಎಂ. ದರ್ಶನ್, ಕಾವಲಹಳ್ಳಿ ಜಗದೀಶ್, ಬಿ.ಎಂ. ರೇವಣಸಿದ್ದಪ್ಪ, ಡಿ. ಸುರೇಂದ್ರಪ್ಪ, ಎಂ. ಸೋಮಶೇಖರಪ್ಪ, ಸಿಂಗ್ರಿಹಳ್ಳಿ ಷಣ್ಮುಖಪ್ಪ, ಎಂ.ಎನ್. ಬಕ್ಕೇಶ್, ಎಸ್.ಜಿ. ನಾಗರಾಜ್, ಬಿ.ಎನ್. ಟಿ. ಸದಾನಂದ, ಬಿ.ಪಿ. ಲಿಂಗರಾಜ್, ಎಂ.ಬಿ. ಶಿವಮೂರ್ತಿ ಅವರುಗಳು ಕಾರ್ಯಕಾರಿ ಸಮಿತಿಯ ಸದಸ್ಯರುಗಳಾಗಿದ್ದಾರೆ.


## ಪ್ರಜಾಪ್ರಭುತ್ವದ 75 ಸಮಾರಂಭ

**(3ನೇ ಪುಟದಿಂದ)** ಲೋಕಸಭಾಧ್ಯಕ್ಷ ಓಂ ಬಿರ್ಲಾ ಹೇಳಿದ್ದಾರೆ. ಪೀಠಾಸೀನಾಧಿಕಾರಿಗಳ ಸಮಾವೇಶಗಳನ್ನು ಆಯೋಜಿಸುವ ಪದ್ಧತಿಗೆ 100 ವರ್ಷಗಳು ತುಂಬಿವೆ. 1921ರಲ್ಲಿ ಮೊದಲ ಪೀಠಾಸೀನಾಧಿಕಾರಿಗಳ ಸಮಾವೇಶ ನಡೆಸಲಾಗಿತ್ತು. ಈ ಹಿನ್ನೆಲೆಯಲ್ಲೂ ಸಮಾರಂಭಗಳು ಪ್ರಾಮುಖ್ಯತೆ ಪಡೆದುಕೊಂಡಿವೆ ಎಂದವರು ಹೇಳಿದ್ದಾರೆ.

## ನಗರಕ್ಕೆ ಇಂದು ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ್

ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ್ ಅವರು ಇಂದು ಮಧ್ಯಾಹ್ನ 2 ಗಂಟೆಗೆ ನಗರಕ್ಕೆ ಆಗಮಿಸಿ, ಪ್ರವಾಸಿ ಮಂದಿರದಲ್ಲಿ ವಾಸ್ತವ್ಯ ಮಾಡುವರು. ನಾಳೆ ಸೋಮವಾರ ಬೆಳಿಗ್ಗೆ 10 ಗಂಟೆಗೆ ಆನಗೋಡಿನ ಶ್ರೀ ಮರುಳಸಿದ್ದೇಶ್ವರ ಸಮುದಾಯ ಭವನದಲ್ಲಿ ನಡೆಯುವ ಮಾಯಕೊಂಡ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಚರ್ಮ ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರ, ಚರ್ಮ ಶಿಲ್ಪಿ ಭವನ ಮತ್ತು ಮೂಲಭೂತ ಸೌಕರ್ಯಗಳ ನಿರ್ಮಾಣ ಕಾರ್ಯಾಗಾರದ ಶಂಕುಸ್ಥಾಪನೆ ಮತ್ತು ಸವಲತ್ತು ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಧ್ಯಾಹ್ನ 1 ಗಂಟೆಗೆ ಬೆಂಗಳೂರಿಗೆ ಪ್ರಯಾಣ ಬೆಳೆಸುವರು.

## ನಗರದಲ್ಲಿ ಇಂದು ಶರಣ ಸಾಹಿತ್ಯ ಪರಿಷತ್ ಸಭೆ



ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಕಾರ್ಯಕಾರಿ ಸಮಿತಿಯ ಮಾಸಿಕ ಸಭೆಯು ಇಂದು ಬೆಳಿಗ್ಗೆ 11 ಕ್ಕೆ ಭಾರತ ಸೇವಾದಳ ಭವನದಲ್ಲಿ ನಡೆಸಲು ಯೋಜಿಸಲಾಗಿದೆ ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಬಿ.ಪರಮೇಶ್ವರಪ್ಪ ತಿಳಿಸಿದ್ದಾರೆ.

## ನರಸಗೊಂಡನಹಳ್ಳಿಯಲ್ಲಿ ಇಂದು ಶ್ರವಣ ದೋಷ ತಪಾಸಣೆ ಶಿಬಿರ

ದಾವಣಗೆರೆ ಲಯನ್ಸ್ ಕ್ಲಬ್ ಹಾಗೂ ಲಯನ್ಸ್ ಕ್ವೆಸ್ಟ್ ವಾಕ್ ಮತ್ತು ಶ್ರವಣ ಕೇಂದ್ರಗಳ ಆಶ್ರಯದಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ಹರಿಹರ ತಾಲ್ಲೂಕಿನ ನರಸಗೊಂಡನಹಳ್ಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಆವರಣದಲ್ಲಿ ಉಚಿತ ಶ್ರವಣ ದೋಷ ತಪಾಸಣೆ ಶಿಬಿರ ನಡೆಯಲಿದೆ.

ವಿವರಗಳಿಗೆ ಡಾ|| ಸುಬ್ಬರಾಜು ಟಿ.ವಿ. (97437 80492) ಅವರನ್ನು ಸಂಪರ್ಕಿಸಲು ಲಯನ್ಸ್ ಕಾರ್ಯದರ್ಶಿ ಕೋರಿ ಶಿವಕುಮಾರ್ ತಿಳಿಸಿದ್ದಾರೆ.

## ಗಣಪತಿ ಸಂಭ್ರಮದ ವಿಸರ್ಜನೆ

**(3ನೇ ಪುಟದಿಂದ)** ನಡುವೆಯೂ ಯುವಕರ ಡೊಳ್ಳು ಕುಣಿತದ ಸದ್ದು ಹಾಗೂ ಕೇಕೆ ಮುಗಿಲು ಮುಟ್ಟಿತ್ತು. ಕಾಲೇಜು ಯುವಕರೇ ಹೆಚ್ಚಾಗಿ ಶೋಭಾಯಾತ್ರೆಯಲ್ಲಿ ಪಾಲ್ಗೊಂಡಿದ್ದುದು ಕಂಡು ಬಂತು. ಮೆರವಣಿಗೆಯುದ್ದಕ್ಕೂ ಕೇಸರಿ ಬಾವುಟಗಳು ಹಾರಾಡುತ್ತಿದ್ದವು. ಡೊಳ್ಳಿನ ಸದ್ದಿಗೆ ಯುವ ಪಡೆ ಬಿಸಿಲನ್ನೂ ಲೆಕ್ಕಿಸದೆ ಹೆಜ್ಜೆ ಹಾಕಿತು.

ಹೈಸ್ಕೂಲ್ ಮೈದಾನದಿಂದ ಆರಂಭವಾದ ಮೆರವ ಣಿಗೆ ಎವಿಕೆ ಕಾಲೇಜು ರಸ್ತೆಯ ಮೂಲಕ ಚೇತನಾ ಹೋಟೆಲ್ ರಸ್ತೆ ತಲುಪಿತು. ಆನಂತರ ಅಂಬೇಡ್ಕರ್ ವೃತ್ತ, ಹದಡಿ ರಸ್ತೆಯ ಮೂಲಕ ಜಯದೇವ ವೃತ್ತಕ್ಕೆ ತಲುಪಿ, ನಂತರ ಬಾತಿ ಬಳಿ ತೆರಳಿ ವಿಸರ್ಜಿಸಲಾಯಿತು. ಬಿಗಿ ಪೊಲೀಸ್ ಬಂದೋಬಸ್ತ್ ನಡೆಯಿತು.

ಮುಂಜಾನೆ ಡಿಜೆ ಬಳಸಲು ಅನುಮತಿ ನೀಡುವಂತೆ ಸಂಘಟನೆಯ ಪದಾಧಿಕಾರಿಗಳು ಮನವಿ ಮಾಡಿದರಾದರೂ ಪೊಲೀಸರು ನಿರಾಕರಿಸಿದರು. ಇದು ಸಂಘಟಕರ ಅಸಮಾಧಾನಕ್ಕೆ ಕಾರಣವಾಗಿತ್ತು.

## ದಿಲ್ ದಿಯಾ ದರ್ದ್ ಲಿಯಾ...

**(4ನೇ ಪುಟದಿಂದ)** ಮುಖಂಡರೊಂದಿಗೆ ಹಂಚಿಕೊಂಡು ಕಿರು ಕಾಣಿಕೆ ನೀಡಿದ ಕೀರ್ತಿ ದಿಲೀಪ್ ಕುಮಾರ್ ಅವರಿಗೆ ಸಲ್ಲಬೇಕಿದೆ.


ಅವರು ಇಂದು ನಮ್ಮೊಂದಿಗೆ ಇಲ್ಲ. ಆದರೆ ಅವರ ನೆನಪು ಮಾತ್ರ ನಮ್ಮ ಮನಸ್ಸಿನಲ್ಲಿ ಉಳಿದಿದೆ. ದಾವ ಣಗೆರೆ ಜನತೆಯ (ದರ್ದ್) ನೋವು ಹೊತ್ತೊಯ್ದ ದಿಲೀಪ್ ಕುಮಾರ್ ಅವರು ದಿಲ್ ಹೃದಯ ಮಾತ್ರ ಇಲ್ಲಿ ಬಿಟ್ಟು ಹೋದರು. ದೇವರು ಅವರ ಆತ್ಮಕ್ಕೆ ಶಾಂತಿ ನೀಡಲಿ (ದುವಾ-ಯೇ-ಮಗ್ಫಿರತ್) ಎಂದು ಈ ಮೂಲಕ ಶ್ರದ್ಧಾಂಜಲಿ ಅರ್ಪಿಸೋಣ.

ಬಾಂಬೆಯಿಂದ ಹುಬ್ಬಳ್ಳಿಯವರೆಗೆ ವಿಮಾನದಲ್ಲಿ ಪ್ರಯಾಣ ಬೆಳೆಸಿ, ಹುಬ್ಬಳ್ಳಿಯಿಂದ ಹವಾ ನಿಯಂತ್ರಿತ ಕಾರಿನಲ್ಲಿ ಪ್ರಯಾಣ ಬೆಳೆಸಿದ ದಿಲೀಪ್‌ಕುಮಾರ್ ಅವರಿಗೆ, ಹರಿಹರದ ಗೆಸ್ಟ್‌ಹೌಸ್‌ನಲ್ಲಿ ತಂಗಲು ವ್ಯವಸ್ಥೆ ಮಾಡಲಾಗಿತ್ತು. ಅವರ ಪತ್ನಿ, ಚಿತ್ರನಟಿ ಸಾಯಿರಾ ಬಾನು ಅವರೊಂದಿಗೆ ಆಗಮಿಸಿದ್ದ ದಿಲೀಪ್ ಕುಮಾರ್ ಅವರು ದಾವಣಗೆರೆ ನಗರದ ಇಮಾಂ ನಗರ, ಆಜಾದ್ ನಗರ ಸೇರಿದಂತೆ ಆಜುಬಾಜಿನ ಪ್ರದೇಶಗಳಿಗೆ ಭೇಟಿ ನೀಡಿದ ನೆನಪನ್ನು ಇಂದಿಗೂ ಮರೆತಿಲ್ಲ ಎನ್ನುತ್ತಾರೆ ಡಾ. ಘನಿಸಾಬ್.

ಅಂದು ಹಮ್ಮಿಕೊಂಡಿದ್ದ ಬೃಹತ್ ಕಾರ್ಯಕ್ರಮದಲ್ಲಿ ಡಾ. ಶಾಮನೂರು ಶಿವಶಂಕರಪ್ಪ, ನಾಗಮ್ಮ ಕೇಶವ ಮೂರ್ತಿ, ದಿ. ಆರ್. ಮಹಮ್ಮದ್ ಇಕ್ಬಾಲ್, (ದಿ. ಹಾಜಿ ಕೆ. ಅಬ್ದುಲ್ ರಜಾ ಸಾಬ್ ಪುತ್ರ), ಅಬ್ದುಲ್ ಜಬ್ಬಾರ್ ಸೇರಿದಂತೆ, ಅನೇಕರು ಉಪಸ್ಥಿತರಿದ್ದರು. ಹಿರಿಯ ಪೊಲೀಸ್ ಅಧಿಕಾರಿ ಛೋಪ್ರಾ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು ಎಂದು ಹಳೆಯ ನೆನಪುಗಳನ್ನು ಮೆಲುಕು ಹಾಕಿದ ಡಾ. ಘನಿ ಸಾಬ್ ಅವರು, ಮುಸ್ಲಿಂ ಸಮಾಜದ ಅಧ್ಯಕ್ಷರಾಗಿ ಅಂದಿನ ದಿನಗಳಲ್ಲಿ ಸಲ್ಲಿಸಿದ ಸೇವೆಯನ್ನು ಸ್ಮರಿಸಿದರು.

ಇಮಾಂ ನಗರದಲ್ಲಿರುವ ತಂಜೀಮ್ ಸಮಿತಿಯ ಶಾದಿ ಮಹಲ್ ನಿರ್ಮಾಣ ಸಂದರ್ಭದಲ್ಲಿ ಭೇಟಿ ನೀಡಿದ ದಿಲೀಪ್ ಕುಮಾರ್ ಅವರ ಸಹಾಯಾರ್ಥ ಇಂದು ಸಮಾಜ ಬಾಂಧವರಿಗೆ ಆಶ್ರಯವಾಗಿರುವುದು ಸ್ಮರಣೀಯ. ಮೊಘಲ್-ಎ-ಆಜಾಂ, ನಯಾದೌರ್, ಲೀಡರ್ ಸೇರಿದಂತೆ ನೂರಾರು ಚಿತ್ರಗಳಲ್ಲಿ ನಟಿಸಿ, ಸೌದಾಗರ್, ಕರ್ಮ, ಧರ್ಮಾಧಿಕಾರಿ ಅಮಿತಾಬಚ್ಚನ್ ಅವರೊಂದಿಗೆ ಶಕ್ತಿ ಚಿತ್ರದಲ್ಲಿ ಉತ್ತಮ ನಟನೆ ನೀಡಿರುವ ದಿಲೀಪ್ ಕುಮಾರ್ ಅವರು ದಾವಣಗೆರೆ ಜನತೆಗೆ 'ದಿಲ್' ನೀಡಿ 'ದರ್ದ್' ಹೊತ್ತೊಯ್ದಿದ್ದಾರೆ. ಅಂತಹ ಮೇರು ನಟ ಇಂದು ನೆನಪು ಮಾತ್ರ.

## ಮೊಬೈಲ್ ಟವರ್‌ಗೆ ಬೆಂಕಿ: ತಪ್ಪಿದ ಅನಾಹುತ



ದಾವಣಗೆರೆ, ಸೆ.25- ನಗರದಲ್ಲಿ ಬೆಳ್ಳಂ ಬೆಳಗ್ಗೆ ಮೊಬೈಲ್ ಟವರ್‌ನಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡು ಹೊತ್ತಿ ಉರಿದಿದ್ದು, ಆತಂಕ ಸೃಷ್ಟಿಸಿದೆ.

ಹಳೆ ಪ್ರವಾಸಿ ಮಂದಿರ ರಸ್ತೆಯ ಮಲ್ಲಿಕಾರ್ಜುನ ಲಾಡ್ಜ್ ಹಾಗೂ ಸಾರಸ್ವತ ಬ್ಯಾಂಕ್ ಹಿಂಭಾಗದ ಲ್ಲಿರುವ ಮೊಬೈಲ್ ಟವರ್ ಗೆ ಬೆಂಕಿ ಹೊತ್ತಿಕೊಂಡಿದ್ದರಿಂದ ಟವರ್ ಗೆ ಅಳವಡಿಸಲಾಗಿದ್ದ ಬ್ಯಾಟರಿ, ಜನರೇಟರ್, ಕೇಬಲ್ ಗಳು ಬೆಂಕಿಗಾಹುತಿಯಾಗಿವೆ. ಘಟನಾ ಸ್ಥಳಕ್ಕೆ ಆಗ್ನಿಶಾಮಕ ದಳದ ಸಿಬ್ಬಂದಿಗಳು, ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.

## ವಾಯುವಿಹಾರದಲ್ಲಿದ್ದ ಕೃಷಿಕನನ್ನು ಹೆದರಿಸಿ ದರೋಡೆ

ದಾವಣಗೆರೆ, ಸೆ.25- ಬೆಳ್ಳಂಬೆಳಗ್ಗೆ ವಾಯುವಿಹಾರ ಮಾಡುತ್ತಿದ್ದ ಕೃಷಿಕರೋರ್ವರನ್ನು ಹೆದರಿಸಿ 75 ಸಾವಿರ ಮೌಲ್ಯದ ಚಿನ್ನಾಭರಣ ದರೋಡೆ ಮಾಡಿರುವ ಘಟನೆ ಇಲ್ಲಿನ ವಿದ್ಯಾನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇಂದು ನಡೆದಿದೆ.

ಕುಂದುವಾಡ ರಸ್ತೆಯ ಮಹಾಲಕ್ಷ್ಮಿ ಲೇಔಟ್‌ನ ಪಿ.ಎನ್. ಶಿವಪ್ರಕಾಶ್ ಎಂದಿನಂತೆ ಇಂದು ಬೆಳಿಗ್ಗೆ 7 ಗಂಟೆ ಸುಮಾರಿಗೆ ಮಹಾಲಕ್ಷ್ಮಿ ಲೇಔಟ್‌ನ ಬಾತಿಕೆರೆ ಕಡೆಗೆ ಹೋಗುವ ರಸ್ತೆ, ಬಂಜಾರ ಹಾಸ್ಟೆಲ್ ಹತ್ತಿರ ವಾಯು ವಿಹಾರ ಮಾಡುತ್ತಿರುವಾಗ ಬೈಕ್ ನಿಲ್ಲಿಸಿಕೊಂಡು ನಿಂತಿದ್ದ ಇಬ್ಬರು ದರೋಡೆಕೋರರು, ಶಿವಪ್ರಕಾಶ್ ಅವರಿಗೆ ಗದರಿಸಿ, ಚಾಕು ತೋರಿಸಿ ಕೊರಳಲಿದ್ದ 10 ಗ್ರಾಂ ತೂಕದ ಬಂಗಾರದ ಸರ, ಕೈಯಲ್ಲಿದ್ದ 7 ಗ್ರಾಂ ತೂಕದ ಬಂಗಾರದ ಉಂಗುರ ಕಸಿದುಕೊಂಡು ಬೈಕಿನಲ್ಲಿ ಪರಾರಿಯಾಗಿದ್ದಾರೆ.

# ತಿಂಗಳಲ್ಲೇ ಕೈಗಾರಿಕೆಗಳಿಗೆ ಜಮೀನು ವಶ



ರಫ್ತು ಉದ್ಯಮಿಗಳಾದ ಎಂ.ಆರ್. ಸತ್ಯನಾರಾಯಣ, ಜಿ. ಗಿರೀಶ್, ಕರಿಬಸಪ್ಪ, ಪ್ರಕಾಶ ಅವರನ್ನು ಸನ್ಮಾನಿಸಲಾಯಿತು.

**(3ನೇ ಪುಟದಿಂದ)** ವಲಯದ ಉದ್ಯಮ ಮಾಡುವುದಿಲ್ಲ. ಆದರೆ, ಯಾರಾದರೂ ಉದ್ಯಮ ಮಾಡುವುದಾದರೆ ಪೂರ್ಣ ಸಹಕಾರ ನೀಡಲಾಗುವುದು ಎಂದರು.

ಹರಿಹರದ ಸಾರಥಿಯಲ್ಲಿ ನಿರ್ಮಿಸಲು ಉದ್ದೇಶಿಸಿದ್ದ ಯೂರಿಯಾ ಘಟಕ ನಿರ್ಮಾಣ ಕೊರೊನಾ ಕಾರಣದಿಂದಾಗಿ ಯೋಜನೆ ನಿಂತಿದೆ. ಈ ಯೋಜನೆ ಪುನರಾರಂಭಕ್ಕೆ ಚರ್ಚೆಗಳು ನಡೆಯುತ್ತಿವೆ. 2ಜಿ ಎಥೆನಾಲ್ ಘಟಕಕ್ಕೆ ತಾಂತ್ರಿಕ ತೊಂದರೆಯಾಗಿದ್ದು, ಹೊಸ ಯೋಜನೆ ರೂಪಿಸಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲೆಯಲ್ಲಿ ಅಡಿಕೆ ಬೆಳೆ ಹೆಚ್ಚಾಗುತ್ತಿದ್ದು, ಅಡಿಕೆಯಿಂದ ಬೇರೆ ಬೇರೆ ಉತ್ಪನ್ನಗಳನ್ನು ಪಡೆಯುವ ಸಾಧ್ಯತೆಗಳನ್ನು ಬಳಸಿಕೊಳ್ಳಬೇಕಿದೆ ಎಂದರು. ಶಾಸಕ ಎಸ್.ಎ. ರವೀಂದ್ರನಾಥ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಇದೇ ಸಂದರ್ಭದಲ್ಲಿ ರಫ್ತು ಉದ್ಯಮಿಗಳಿಗಾಗಿ ಜಿಲ್ಲಾ ರಫ್ತು ಕೈಪಿಡಿ ಬಿಡುಗಡೆ ಮಾಡಲಾಯಿತು. ರಫ್ತು ಉದ್ಯಮಿಗಳಾದ ಎಂ.ಆರ್. ಸತ್ಯನಾರಾಯಣ, ಜಿ. ಗಿರೀಶ್, ಕರಿಬಸಪ್ಪ ಹಾಗೂ ಪ್ರಕಾಶ ಅವರನ್ನು ಸನ್ಮಾನಿಸಲಾಯಿತು.

ವೇದಿಕೆ ಮೇಲೆ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಜಿ.ಪಂ. ಉಪ ಕಾರ್ಯದರ್ಶಿ ಬಿ. ಆನಂದ್, ವಿದೇಶ ವ್ಯಾಪಾರದ ಉಪ ಮಹಾ ನಿರ್ದೇಶಕ ಎಸ್.ಸಿ. ಅಕ್ಷಯ್, ಜವಳಿ ಪಾರ್ಕ್ ಅಧ್ಯಕ್ಷ ವೈ. ವೃಷಭೇಂದ್ರಪ್ಪ ಉಪಸ್ಥಿತರಿದ್ದರು.

ಪ್ರಶಾಂತ್ ಪ್ರಾರ್ಥಿಸಿದರು. ಜಿಲ್ಲಾ ಕೈಗಾರಿಕಾ ಕೇಂದ್ರದ ಉಪ ನಿರ್ದೇಶಕ ರಾಜೇಂದ್ರ ಕದಮ್ ಸ್ವಾಗತಿಸಿದರು. ಕೈಗಾರಿಕಾ ಕೇಂದ್ರದ ಸಹಾಯಕ ನಿರ್ದೇಶಕ ಕೆ. ಹನುಮಂತರಾಯ ವಂದಿಸಿದರು.

### ಲೇಬರ್ ಆಫೀಸ್ ದಾಖಲೆ ನೋಡಿ ಹಿಂಜರಿಯುತ್ತಾರೆ

ದಾವಣಗೆರೆಯಲ್ಲಿ ಉದ್ಯಮ ಸ್ಥಾಪಿಸಿ ಎಂದು ಹಲವಾರು ಉದ್ಯಮಿಗಳಿಗೆ ನಾನು ಹೇಳಿದ್ದೇನೆ. ಅವರು ನಗರದ ಲೇಬರ್ ಆಫೀಸ್‌ಗೆ ಹೋಗಿ ದಾಖಲೆ ನೋಡಿ, ನಿಮ್ಮೂರ ಸಹವಾಸ ಬೇಡ ಎಂದಿದ್ದಾರೆ ಎಂದು ಶಾಸಕ ಎಸ್.ಎ. ರವೀಂದ್ರನಾಥ್ ಹೇಳಿದ್ದಾರೆ.

ಇಲ್ಲಿ ದಿವಾಳಿ ಆದ ಹತ್ತಿ ಗಿರಣಿ ಮತ್ತಿತರೆ ಕಾರ್ಖಾನೆಗಳ ಬಗ್ಗೆ ಉದ್ಯಮಿಗಳು ಕಳವಳ ಹೊಂದಿದ್ದಾರೆ. ಬಂಡವಾಳ ಹಾಕಿ, ಉತ್ಪಾದನೆಗೆ ಮುಂಚೆ ಹಗುರವಾಗಿ ಮಾತನಾಡಿಸಿಕೊಳ್ಳುವುದು ಏಕೆ? ಇಲ್ಲಿಗೆ ಬರುವುದೇ ಬೇಡ ಎನ್ನುವ ಪರಿಸ್ಥಿತಿ ದಾವಣಗೆರೆಯಲ್ಲಿ ಬೆಳೆದು ಬಂದಿದೆ ಎಂದವರು ವಿಷಾದಿಸಿದರು.

ಉದ್ಯಮಗಳ ಮಾಲೀಕರೂ ಸಹ ಸರಕಿನಲ್ಲಿ ಮೋಸ ಆಗದಂತೆ ನೋಡಿಕೊಳ್ಳಬೇಕು. ನೌಕರರು ಗುಣಮಟ್ಟದ ಬಗ್ಗೆ ಕಾಳಜಿ ವಹಿಸಬೇಕು. ಜನರಿಗೆ ಹಾಗೂ ರೈತರಿಬ್ಬರಿಗೂ ನೆರವಾಗುತ್ತದೆ ಎಂದು ಶಾಸಕರು ಹೇಳಿದರು.

## ರಾಜ್ಯೋತ್ಸವ ಪ್ರಶಸ್ತಿಗೆ ಸಾರ್ವಜನಿಕರಿಂದಲೇ ಸಾಧಕರ ಆಯ್ಕೆ

**(3ನೇ ಪುಟದಿಂದ)** ಎಲೆಮರೆ ಕಾಯಿಯಂತೆ ತಮ್ಮ ತಮ್ಮ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿರುವ, ಮಾಡುತ್ತಿರುವ ವ್ಯಕ್ತಿಗಳನ್ನು ಅವರ ಸುತ್ತಮುತ್ತಲೂ ಇರುವವರು ಗುರುತಿಸಿ ಅವರ ಸಾಧನೆಯನ್ನು ಸೇವಾ ಸಿಂಧು ಪೋರ್ಟಲ್ ಮೂಲಕ ನಮಗೆ ತಲುಪಿಸಿದರೆ, ಅದನ್ನು ತಜ್ಞರ ಸಮಿತಿಗೆ ನೀಡಲಾಗುತ್ತದೆ. ಅದನ್ನು ಅವರು ಪರಿಶೀಲನೆ ಮಾಡಿ ರಾಜ್ಯೋತ್ಸವ ಪ್ರಶಸ್ತಿಗೆ ಅರ್ಹ ಎಂದು ಪರಿಗಣಿಸಿದರೆ ಖಂಡಿತಾ ಅವರಿಗೆ ಪ್ರಶಸ್ತಿ ಸಿಗುವಂತಾಗುತ್ತದೆ. ಅದರ ಜೊತೆಗೆ ಈ ಪ್ರತಿಷ್ಠಿತ ಪ್ರಶಸ್ತಿಗೆ ನೇರವಾಗಿ ಸಾರ್ವಜನಿಕರೇ ಸಾಧಕರನ್ನು ಆಯ್ಕೆ ಮಾಡಿದಂತಾಗುತ್ತದೆ, ಕ್ರೀಡೆ ಹೊರತುಪಡಿಸಿದರೆ, ಉಳಿದ ಸಾಧಕರು ಕನಿಷ್ಠ 60 ವರ್ಷ ಮೇಲ್ಪಟ್ಟವರಾಗಿರಬೇಕು ಎಂದು ಸಚಿವ ಸುನಿಲ್ ಕುಮಾರ್ ಹೇಳಿದ್ದಾರೆ.

ಇಂತಹ ಪ್ರಯೋಗ ಇದೇ ಮೊದಲ ಬಾರಿಗೆ ಮಾಡಲಾಗುತ್ತಿದ್ದು, ಇದು ಅತ್ಯಂತ ಪಾರದರ್ಶಕ ಹಾಗೂ ಪ್ರಜಾಪ್ರಭುತ್ವ ಸಿದ್ಧಾಂತಗಳಿಗೆ ಅನುಗುಣವಾಗಿ ನಡೆಯುತ್ತಿರುವುದು ವಿಶೇಷವಾಗಿದೆ ಎಂದು ಅವರು ಹೇಳಿದ್ದಾರೆ. ಸಾರ್ವಜನಿಕರು ತಮ್ಮ ಮೊಬೈಲ್ ಮೂಲಕವೂ ಸೇವಾ ಸಿಂಧು ಪೋರ್ಟಲ್ ಪ್ರವೇಶಿಸಬಹುದಾಗಿದೆ, ತಾವು ಪ್ರಶಸ್ತಿಗೆ ಶಿಫಾರಸ್ಸು ಮಾಡುವ ವ್ಯಕ್ತಿಗಳ ಹೆಸರನ್ನು ಕಳುಹಿಸಲು ಅಕ್ಟೋಬರ್ 15 ನೇ ತಾರೀಖಿನವರೆಗೂ ಅವಕಾಶ ಕಲ್ಪಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.


ಶ್ರೀ ಕುಮಾರ ವಿಜಯ ನಾಟಕ ಸಂಘ (ರಿ.) ಚಿತ್ತರಗಿ ಇವರಿಂದ
ಭಾರೀ ಜನದಟ್ಟಣೆಯ 25ನೇ ಪ್ರಯೋಗದತ್ತ
ಬಂದರ ಬಾರ ಬೋರಂಗಿ



ಕೌಟುಂಬಿಕ ಹಾಸ್ಯಭರಿತ ಸಾಮಾಜಿಕ ನಾಟಕ ಪ್ರದರ್ಶನ
ಪ್ರತಿದಿನ 2 ಪ್ರಯೋಗಗಳು, ಮಧ್ಯಾಹ್ನ 3 ಕ್ಕೆ, ಸಂಜೆ 6 ಕ್ಕೆ
ದಾವಣಗೆರೆ ಪಿ.ಬಿ. ರಸ್ತೆ, (ಶ್ರೀ ನರಹರಿಶೇಟ್ ಕಲ್ಯಾಣ ಮಂಟಪದ ಎದುರಿಗೆ) ಟಿ.ಎಂ.ಪಿ.ಎನ್. ಕಾಂಪೌಂಡ್‌ನಲ್ಲಿ
ಸಂಚಾಲಕರು : ಮಂಜುನಾಥ್ ಜಾಲ್ಯಾಳ 98803 42862




## ರಾಣೇಬೆನ್ನೂರಿಗೆ ಇಂದು ಹೊನ್ನಾಳಿ ಹಿರೇಕಲ್ಮಠ ಶ್ರೀಗಳು



ರಾಣೇಬೆನ್ನೂರಿನ ಕೊಟ್ಟೂರೇಶ್ವರ ಮಠದ ಸಮುದಾಯ ಭವನದಲ್ಲಿ ಶ್ರೀ ಗಾನಯೋಗಿ ಸಾಂಸ್ಕೃತಿಕ ಕಲಾ ಸಂಸ್ಥೆ, ಶ್ರೀ ಪುಟ್ಟರಾಜ ಗವಾಯಿಗಳ ಸಂಗೀತ ಪಾಠಶಾಲೆಯ ಉದ್ಘಾಟನಾ ಸಮಾರಂಭವು ಇಂದು ಸಂಜೆ 5 ಗಂಟೆಗೆ ಹೊನ್ನಾಳಿ ಡಾ. ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆಯಲಿದೆ. ಗುಡ್ಡದಾನ್ವೇರಿ ವಿರಕ್ತ ಮಠದ ಶ್ರೀ ಶಿವಯೋಗೀಶ್ವರ ಸ್ವಾಮಿಗಳು, ಸರಿಗಮಪ ಕಾರ್ಯಕ್ರಮದ ಪ್ರಶಸ್ತಿ ಪುರಸ್ಕೃತ ಕಲಾವಿದರು, ಅಂತರರಾಷ್ಟ್ರೀಯ ಸಂಗೀತ ಕಲಾವಿದರು, ಪುರಾಣ ಪ್ರವಚನಕಾರರು ಭಾಗವಹಿಸುವರು ಎಂದು ಪುಟ್ಟರಾಜ ಗವಾಯಿಗಳ ಶಿಷ್ಯ ಮಾಂತೇಶ ಚಿಕ್ಕಮಠ ತಿಳಿಸಿದ್ದಾರೆ.

## 28ರಂದು ಶ್ವಾನಗಳಿಗೆ ಉಚಿತ ಲಸಿಕೆ

ದಾವಣಗೆರೆ, ಸೆ.25- ವಿಶ್ವ ರೇಬಿಸ್ ದಿನಾಚರಣೆ ಅಂಗವಾಗಿ ಜಿಲ್ಲಾ ಪಂಚಾಯತ್, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಮತ್ತು ದಾವಣಗೆರೆ ಜಿಲ್ಲಾ ಪ್ರಾಣಿ ದಯಾ ಸಂಘದ ಸಂಯುಕ್ತಾಶ್ರಯದಲ್ಲಿ ಇದೇ ದಿನಾಂಕ 28 ರ ಮಂಗಳವಾರ ದಾವಣಗೆರೆಯ ಪಶು ಆಸ್ಪತ್ರೆ ಆವರಣದಲ್ಲಿ ನಾಯಿಗಳಿಗೆ ಉಚಿತವಾಗಿ ರೇಬಿಸ್ (ಹುಚ್ಚುನಾಯಿ ರೋಗ) ನಿರೋಧಕ ಲಸಿಕೆ ಹಾಕಲಾಗುವುದು.

## ಜಾಮೀನಿಗಾಗಿ ಬಟ್ಟೆ ಒಗೆಯುವಂತೆ ಆದೇಶಿಸಿದ ನ್ಯಾಯಮೂರ್ತಿ

ಪಾಟ್ನಾ, ಸೆ. 25 - ವಿಚಿತ್ರ ಆದೇಶಗಳ ಮೂಲಕ ಮಾಧ್ಯಮಗಳಲ್ಲಿ ಸುದ್ದಿಯಾಗಿದ್ದ ಕೆಳ ನ್ಯಾಯಾಲಯದ ನ್ಯಾಯಮೂರ್ತಿಯೊಬ್ಬರು ನ್ಯಾಯಿಕ ಕಾರ್ಯ ಮಾಡದಂತೆ ಪಾಟ್ನಾ ಹೈಕೋರ್ಟ್ ನಿರ್ಬಂಧಿಸಿದೆ.

ಮಧುಬನಿ ಜಿಲ್ಲೆಯ ಝೂಂಝರ್‌ಪುರದ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯೂರ್ತಿ ಅವಿನಾಶ್ ಕುಮಾರ್ ಅವರು ಮುಂದಿನ ಆದೇಶದವರೆಗೆ ನ್ಯಾಯಿಕ ಕಾರ್ಯದಲ್ಲಿ ತೊಡಗದಂತೆ ಆದೇಶ ಹೊರಡಿಸಲಾಗಿದೆ ಎಂದು ಹೈಕೋರ್ಟ್ ಮೂಲಗಳು ತಿಳಿಸಿವೆ.

ಲೈಂಗಿಕ ಹಲ್ಲೆ ನಡೆಸಿದ ಆರೋಪಿಯು ಪಶ್ಚಾತ್ತಾಪವಾಗಿ ಆ ಗ್ರಾಮದ ಎಲ್ಲ ಮಹಿಳೆಯರ ಬಟ್ಟೆಗಳನ್ನು ತೊಳೆದು ಐರನ್ ಮಾಡಬೇಕು. ಆಗ ಮಾತ್ರ ಜಾಮೀನು ನೀಡುವುದಾಗಿ ನ್ಯಾಯಮೂರ್ತಿ ಅವಿನಾಶ್ ಕುಮಾರ್ ಕೆಲ ದಿನಗಳ ಹಿಂದೆ ಆದೇಶ ಹೊರಡಿಸಿದ್ದರು. ಇಂಥದೇ ಹಲವಾರು ಆದೇಶಗಳನ್ನು ಈ ಹಿಂದೆ ಹೊರಡಿಸಿದ್ದು ಸುದ್ದಿಯಾಗಿತ್ತು.

|| ಶ್ರೀ ವೀರಭದ್ರೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ



ಹರಿಹರ ನಗರದ ಭದ್ರ ಸಕ್ಕರೆ ಕಂಪನಿ ರಸ್ತೆ, ಪ್ರಶಾಂತ ನಗರ (ವಿನಾಯಕ ದೇವಸ್ಥಾನದ ಹತ್ತಿರ) ವಾಸಿ

**ಶ್ರೀಮತಿ ಸಣ್ಣ ಬಸಮ್ಮ ಹಂಚಿನಾಳ ಮತ್ತು ಮಕ್ಕಳು**

ಮಾಡುವ ವಿಜ್ಞಾಪನೆಗಳು.

ದಿ. : 22.9.2021ನೇ ಬುಧವಾರ ಸಂಜೆ 6ಕ್ಕೆ ಆಡಿಟರ್ **ಹೆಚ್.ಎಸ್. ಮಂಜುನಾಥ್** ಅವರ ತಂದೆಯವರಾದ

**ಶ್ರೀ ಶಂಕ್ರಪ್ಪ ಹಂಚಿನಾಳ**

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**"ಕೈಲಾಸ ಶಿವಗಣಾರಾಧನೆ"ಯನ್ನು**

ದಿ. : 26.09.2021ನೇ ಭಾನುವಾರ ಬೆಳಿಗ್ಗೆ10.30ಕ್ಕೆ ಹರಿಹರ ನಗರದ ಭದ್ರ ಸಕ್ಕರೆ ಕಂಪನಿ ರಸ್ತೆ, ಪ್ರಶಾಂತ ನಗರದಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖ ತಪ್ತರು : ಶ್ರೀಮತಿ ಸಣ್ಣಬಸಮ್ಮ ಹಂಚಿನಾಳ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಂಚಿನಾಳ ವಂಶಸ್ಥರು ಹಾಗೂ ಬಂಧು-ಮಿತ್ರರು.

ವಿ.ಸೂ. : ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.

|| ಶ್ರೀ ದಶರಥ ರಾಮೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಸಿಟಿ ಕೆ.ಬಿ. ಬಡಾವಣೆ ವಾಸಿ, ಬಂಡೆಬೊಮ್ಮೇನಹಳ್ಳಿ.

**ಬಿ.ಜಿ. ರಾಮಚಂದ್ರಪ್ಪ ಮತ್ತು ಸಹೋದರರು**

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 18.09.2021ನೇ ಶನಿವಾರ ಬೆಳಗಿನ ಜಾವ 12.10ಕ್ಕೆ ನನ್ನ ತಮ್ಮನಾದ

**ಶ್ರೀ ಜಿ. ಜಯ್ಯಪ್ಪನವರು**

(ಜನನ : 12.07.1959, ನಿಧನ : 18.09.2021)

**ರಾಜ ಗ್ಲಾಸ್ ಅಂಡ್ ಪ್ಲೈವುಡ್ಸ್, ದಾವಣಗೆರೆ.**

(ಶ್ರೀಮತಿ ಬಿ.ಎಸ್. ಮಂಜುಳ ಇವರ ಪತಿ) ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಶಿವಗಣಾರಾಧನೆ'ಯನ್ನು**

ದಿನಾಂಕ : 26.09.2021ನೇ ಭಾನುವಾರ ಬೆಳಿಗ್ಗೆ 10.30 ಘಂಟೆಗೆ ತ್ರಿಶೂಲ್ ಕಲಾ ಭವನ, ಪಿ.ಬಿ. ರಸ್ತೆ, ದಾವಣಗೆರೆ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಮೃತರ ಧರ್ಮಪತ್ನಿ : ಶ್ರೀಮತಿ ಬಿ.ಎಸ್. ಮಂಜುಳ, ದಾವಣಗೆರೆ.

ಶ್ರೀ ಬಿ.ಜೆ. ಚಂದನ್, ಶ್ರೀಮತಿ ಗೀತಾ ಬಿ.ಜೆ., ಶ್ರೀ ಶಿವಕುಮಾರ್ ಗೌಡ್ರು, ಮಡಿಕೇರಿ.

ಶ್ರೀಮತಿ ಸಂಗೀತ ಬಿ.ಜೆ., ಶ್ರೀ ಚಂದ್ರುಗೌಡ, ಹನುಮನಹಳ್ಳಿ.

ಸಿದ್ರಾಮಜ್ಜರ ವಂಶಸ್ಥರು, ಬಂಡೆಬೊಮ್ಮೇನಹಳ್ಳಿ ಹಾಗೂ ಬಂಧು-ಮಿತ್ರರು

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte